# ಹೊಸ ನಗರ ಅಜೆಂಡಾ

Translation accuracy is not guaranteed nor implied. If any questions arise related to the accuracy of the information contained in the translation, please refer to the New Urban Agenda document endorsed by the General Assembly (A/RES/71/256*) which is the official version of the document. Any discrepancies or differences created in the translation are not binding and have no legal effect for compliance or enforcement purposes.

ಯುನೈಟೆಡ್ ನೇಷನ್ಸ್ ಮಾಹಿತಿ ಕೇಂದ್ರ, ಭಾರತ
ಮತ್ತು ಭೂತಾನ್‌ರಿಂದ ಅನುವಾದಗೊಂಡಿದೆ

# ಹೊಸ ನಗರ ಅಜೆಂಡಾ

H III

HABITAT III

QUITO 17-20 OCTOBER 2016

United Nations Conference on Housing and Sustainable Urban Development

United Nations

# ಹೊಸ ನಗರ ಅಜೆಂಡಾ

# ಎಲ್ಲರಿಗೂ ಸಮರ್ಥನೀಯ ನಗರಗಳು ಮತ್ತು ಮಾನವ ವಸಾಹತುಗಳ ಮೇಲಿನ ಕ್ವಿಟೊ ಘೋಷಣೆ

1. ರಾಜ್ಯ ಮತ್ತು ಸರ್ಕಾರ ಮುಖ್ಯಸ್ಥರಾದ, ಸಚಿವರುಗಳಾದ ಮತ್ತು ಉನ್ನತ ಪ್ರತಿನಿಧಿಗಳಾದ ನಾವು ಒಂದು ಹೊಸ ನಗರ ಅಜೆಂಡಾವನ್ನು ಸ್ವೀಕರಿಸಲು, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು, ಪಾರ್ಲಿಮೆಂಟಿನ ಸದಸ್ಯರು, ಸಿವಿಲ್ ಸೊಸೈಟಿ, ಬುಡಕಟ್ಟು ಜನರು ಮತ್ತು ಸ್ಥಳೀಯ ಸಮುದಾಯಗಳು, ಖಾಸಗಿ ವಲಯ, ವೃತ್ತಿಪರರು ಮತ್ತು ಪ್ರಾಕ್ಟಿಶನರ್ಗಳು, ವೈಜ್ಞಾನಿಕ ಮತ್ತು ಶೈಕ್ಷಣಿಕ ಸಮುದಾಯ, ಮತ್ತು ಇತರೆ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳ ಪಾಲ್ಗೊಳ್ಳುವಿಕೆಯೊಂದಿಗೆ ಕ್ವಿಟೊದಲ್ಲಿ ಅಕ್ಟೋಬರ್ 17 ರಿಂದ 20 ತಾರೀಖು, 2016 ರವರೆಗೆ ಗೃಹ ಮತ್ತು ಸಮ

2. 2050ರ ವೇಳೆಗೆ, ವಿಶ್ವದ ನಗರ ಪ್ರದೇಶದಲ್ಲಿರುವ ಜನಸಂಖ್ಯೆಯು ಇಪ್ಪತ್ತೊಂದನೆಯ ಶತಮಾನದ ಅತ್ಯಂತ ಪರಿವರ್ತಕ ಪ್ರವೃತ್ತಿಗಳಲ್ಲಿ ನಗರೀಕರಣದಲ್ಲಿ ಒಂದನ್ನಾಗಿಸಿ, ಬಹುತೇಕ ಎರಡು ಪಟ್ಟು ಆಗುತ್ತದೆಂದು ನಿರೀಕ್ಷಿಸಲಾಗಿದೆ. ಜನಸಂಖ್ಯೆ, ಆರ್ಥಿಕತೆ, ಚಟುವಟಿಕೆಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಭಾಷಣೆಗಳು, ಹಾಗೂ ಪರಿಸರಾತ್ಮಕ ಮತ್ತು ಮಾನವೀಯ ಪರಿಣಾಮಗಳು, ನಗರಗಳಲ್ಲಿ ಕೇಂದ್ರೀಕರಣಗೊಳ್ಳುವುದನ್ನು ಹೆಚ್ಚಿಸುತ್ತವೆ ಎಂದು ನಿರೀಕ್ಷಿಸಲಾಗಿದೆ, ಹಾಗೂ ಇದು ಗೃಹ, ನಿರ್ಮಾಣ, ಮೂಲಭೂತ ಸೇವೆಗಳು, ಆಹಾರ ಭದ್ರತೆ, ಆರೋಗ್ಯ, ಶಿಕ್ಷಣ, ಯೋಗ್ಯ ಉದ್ಯೋಗಗಳು, ಸುರಕ್ಷತೆ ಮತ್ತು ನೈಸರ್ಗಿಕ ಸಂಪನ್ಮೂಲಗಳು, ಬೇರೆಯವುಗಳೊಂದಿಗಿನ ವಿಷಯದಲ್ಲಿ ಸಮೂಹ ಸಮರ್ಥನೀಯ ಸವಾಲುಗಳನ್ನು ಒಡ್ಡುತ್ತದೆ.

3. 1976ರಲ್ಲಿ ಕೆನಡಾದ ವ್ಯಾಂಕೊವರ್, 1996ರಲ್ಲಿ ಇಸ್ತಾಂಬುಲ್, ಟರ್ಕಿ ಮತ್ತು 2000ದಲ್ಲಿ ಲಕ್ಷಾಂತರ ಅಭಿವೃದ್ಧಿ ಗುರಿಗಳ ಅಳವಡಿಕೆಯಲ್ಲಿ, ನಾವು ಕೊಳಚೆ ಮತ್ತು ಅನೌಪಚಾರಿಕ-ವಸಾಹತು ನಿವಾಸಿಗಳನ್ನು ಒಳಗೊಂಡು, ಲಕ್ಷಾಂತರ ನಗರವಾಸಿಗಳ ಗುಣಮಟ್ಟದ ಜೀವನದಲ್ಲಿ ಸುಧಾರಣೆ ಕಂಡಿದ್ದೇವೆ. ಆದರೂ, ಬಡತನದ ಬಹುರೂಪಗಳ ನಿರಂತರತೆ, ಬೆಳೆಯುತ್ತಿರುವ ಅಸಮಾನತೆಗಳು ಹಾಗೂ ಪರಿಸರಾತ್ಮಕ ಅವನತಿಯು ನಗರಗಳು ಮತ್ತು ಮಾನವ ವಸಾಹತುಗಳಲ್ಲಿ ಹೆಚ್ಚಾಗಿ ನಿರಾಕರಿಸಲಾಗದ ನೈಜತೆಯ ಸಾಮಾಜಿಕ ಮತ್ತು ಆರ್ಥಿಕ ಬಹಿರ್ವೇಶನ ಹಾಗೂ ಪ್ರಾದೇಶಿಕ ಪ್ರತ್ಯೇಕತೆಯೊಂದಿಗೆ, ವಿಶ್ವವ್ಯಾಪಿಯಾಗಿ ಸಮರ್ಥನೀಯ ಅಭಿವೃದ್ಧಿಗೆ ಮುಖ್ಯ ತಡೆಯಾಗಿ ಉಳಿದಿವೆ.

4. ನಾವು ಇವುಗಳನ್ನು ಮತ್ತು ಬೇರೆ ಅಸ್ಥಿತ್ವದಲ್ಲಿರುವ ಮತ್ತು ಹೊರಬರುತ್ತಿರುವ ಸವಾಲುಗಳನ್ನು ಸಮರ್ಪಕವಾಗಿ ತಿಳಿಸುತ್ತಿದ್ದೇವೆ, ಮತ್ತು ಆರ್ಥಿಕ ಬೆಳವಣಿಗೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ, ಮತ್ತು ಪರಿಸರಾತ್ಮಕ ರಕ್ಷಣೆ, ಹಾಗೂ ಸ್ಥಾನಾಂತರಣ ಮತ್ತು ಸಮರ್ಥನೀಯ ಅಭಿವೃದ್ಧಿಯ ಸಾಧನೆಗೆ ತನ್ನ ಸಂಭಾವ್ಯ ಕೊಡುಗೆಗಳನ್ನು ಒಳಗೊಂಡ ಒಂದು

ಇಂಜಿನ್ ಆಗಿ ನಗರೀಕರಣದ ಮೂಲಕ ಪ್ರಸ್ತುತಪಡಿಸಲಾದ ಅವಕಾಶಗಳ ಅನುಕೂಲತೆ ಪಡೆಯುವ ಅಗತ್ಯವಿದೆ.

5. ನಾವು ನಮ್ಮ ಗಮನವನ್ನು ನಗರಗಳು ಮತ್ತು ಮಾನವ ವಸಾಹತುಗಳತ್ತ ಯೋಜಿತ, ವಿನ್ಯಾಸಗೊಳಿಸಿದ, ಹೂಡಿಕೆಯ, ಅಭಿವೃದ್ಧಿಗೊಂಡ ನಿರ್ವಹಿಸಲ್ಪಟ್ಟ ಮತ್ತು ನಿರ್ವಹಣೆ ಮಾಡುವ ಮೂಲಕ, ಹೊಸ ನಗರ ಅಜೆಂಡಾವು ತನ್ನ ಎಲ್ಲಾ ರೂಪಗಳು ಮತ್ತು ದಿಕ್ಕಿನಲ್ಲಿ ಬಡತನ ಮತ್ತು ಹಸಿವನ್ನು ಕೊನೆಗೊಳಿಸಲು ಸಹಾಯಕವಾಗುತ್ತದೆ; ಸಮರ್ಥನೀಯ ಅಭಿವೃದ್ಧಿಗೆ ತಮ್ಮ ಪ್ರಧಾನ ಕೊಡುಗೆಯನ್ನು ಸಂಪೂರ್ಣವಾಗಿ ಹೊರತರುವುದಕ್ಕಾಗಿ ಎಲ್ಲಾ ಮಹಿಳೆಯರು ಮತ್ತು ಹುಡುಗಿಯರ ಲಿಂಗ ಸಮಾನತೆ ಮತ್ತು ಸಬಲೀಕರಣವನ್ನು ಸಾಧಿಸುವುದು; ಮಾನವನ ಆರೋಗ್ಯ ಮತ್ತು ಯೋಗಕ್ಷೇಮವನ್ನು ಸುಧಾರಿಸುವುದು; ಏರಿಳಿತವನ್ನು ನಿರ್ವಹಿಸುವುದು; ಮತ್ತು ಪರಿಸರವನ್ನು ರಕ್ಷಿಸುವುದು.

6. ನಾವು 2015 ರ ಸಾಧನೆಯ ಮೈಲಿಗಲ್ಲುಗಳನ್ನು ಸಂಪೂರ್ಣವಾಗಿ ಪರಿಗಣಿಸುತ್ತೇವೆ, ನಿರ್ಧಿಷ್ಟವಾಗಿ ಸುಸಮರ್ಥನೀಯ ಅಭಿವೃದ್ಧಿ ಗೆ 2030 ಅಜೆಂಡಾ, ಸುಸಮರ್ಥನೀಯ ಅಭಿವೃದ್ಧಿಯ[1] ಗುರಿಗಳು, ಅಭಿವೃದ್ಧಿಗೆ[2] ಆರ್ಥಿಕತೆ ಎಂಬ ಮೂರನೇ ಅಂತಾರಾಷ್ಟ್ರೀಯ ಸಮಾವೇಶದ ಅಭಿವೃದ್ಧಿಯ ಮೇಲಿನ ಆಡಿಸ್ ಅಬಾಬ ಕ್ರಿಯಾ ಅಜೆಂಡಾ, ಹವಾಮಾನ ವೈಪರೀತ್ಯ[3] ಕುರಿತ ಸಮಾವೇಶದಲ್ಲಿ ವಿಶ್ವಸಂಸ್ಥೆಯ ಚೌಕಟ್ಟಿನಲ್ಲಿ ಅಂಗೀಕರಿಸಲ್ಪಟ್ಟ ಪ್ಯಾರಿಸ್ ಒಪ್ಪಂದ, ವಿಕೋಪಗಳ ಅಪಾಯ ಕಡಿಮೆಗೊಳಿಸುವಿಕೆಗೆ 2015-2030[4] ಸೆಂಡಾಯ್ ಚೌಕಟ್ಟು, 2014-2024[5] ರ ದಶಕದಲ್ಲಿ ದೇಶಗಳ ನೆಲಾವೃತ ಅಭಿವೃದ್ಧಿಗೆ ವಿಯೆನ್ನಾ ಕ್ರಿಯಾಯೋಜನೆ, ಸೈಡ್ಸ್ ವೇಗವರ್ಧಿತ ಕ್ರಿಯೆಗಳ ವಿಧಗಳ (SAMOA) ಪ್ರತಿಕ್ರಿಯೆ[6] ಮತ್ತು 2011-2020[7] ನೇ ದಶಕದಲ್ಲಿ ಅತೀ ಕಡಿಮೆ ಅಭಿವೃದ್ಧಿ ಹೊಂದಿದ ಇಸ್ತಾಂಬುಲ್ ಕ್ರಿಯೆಯ ಕಾರ್ಯಕ್ರಮ. ನಾವು ವಾತಾವರಣ ಮತ್ತು ಅಭಿವೃದ್ಧಿ[8]

---

1 ಠರಾವು 70/1.

2 ಠರಾವು 69/313, ಲಗತ್ತು.

3 ಗಮನಿಸಿ ಎಫ್ ಸಿಸಿಸಿ/ಸಿಪಿ/2015/10/ಜೋಡಿಸಿ.1, ನಿರ್ಧಾರ 1/ಸಿಪಿ.21, ಲಗತ್ತು.

4 ಠರಾವು 69/283, ಲಗತ್ತು II.

5 ಠರಾವು 69/137, ಲಗತ್ತು II.

6 ಠರಾವು 69/15, ಲಗತ್ತು.

7 ಅತ್ಯಂತ ಹಿಂದುಳಿದ ದೇಶಗಳು ಕುರಿತಾದ ವಿಶ್ವಸಂಸ್ಥೆಯ ನಾಲ್ಕನೆಯ ಸಮ್ಮೇಳನದ ವರದಿ, ಇಸ್ತಾಂಬುಲ್ ಟರ್ಕಿ, 9-13 ಮೇ 2011 (ಎ/ಸಮ್ಮೇಳನ .219/7), ಅಧ್ಯಾಯ II.

8 ಪರಿಸರ ಮತ್ತ ಅಭಿವೃದ್ಧಿ ಕುರಿತಾದ ವಿಶ್ವಸಂಸ್ಥೆಯ ಸಮ್ಮೇಳನದ ವರದಿ, ರಿಯೋ ಡಿ ಜಾನೆರಿಯೋ, 3-14 ಜೂನ್ 1992, ಸಂಪುಟ. I, ಸಮ್ಮೇಳನದಲ್ಲಿ ಸ್ವೀಕರಿಸಿದ ನಿರ್ಣಯಗಳು (ವಿಶ್ವಸಂಸ್ಥೆಯ ಪ್ರಕಾಶನ, ಮಾರಾಟ ಸಂಖ್ಯೆ. ಇ93. 1.8 ಮತ್ತು ತಿದ್ದುಪಡಿ), ಠರಾವು 1, ಲಗತ್ತು I.

ಕುರಿತಾದ ರಯೋ ಘೋಷಣೆ, ಸಮರ್ಥನೀಯ ಅಭಿವೃದ್ಧಿ[9] ಕುರಿತಾದ ಶೃಂಗಸಭೆ, ಸಾಮಾಜಿಕ ಅಭಿವೃದ್ಧಿಗೆ[10] ಜಾಗತಿಕ ಶೃಂಗ ಸಭೆಯನ್ನೂ ನಾವು ಪರಿಗಣಿಸುತ್ತೇವೆ. ಜನಸಂಖ್ಯೆ ಮತ್ತು ಬೆಳವಣಿಗೆ ಕುರಿತಾದ ಜಾಗತಿಕ ಸಮ್ಮೇಳನದ ಕ್ರಿಯಾಯೋಜನೆ, ಸಮರ್ಥನೀಯ ಬೆಳವಣಿಗೆ ಕುರಿತಂತೆ ವಿಶ್ವಸಂಸ್ಥೆಯ ಸಮಾವೇಶ ಮತ್ತು ಈ ಸಮಾರೋಪಗಳ ಅನುಸರಣೆ.

7. ಇದು ಸರ್ಕಾರಗಳು ಒಪ್ಪಿದ ಯಾವುದೇ ಫಲಿತಾಂಶವನ್ನು ಹೊಂದಿಲ್ಲ ಎಂದು ಗುರುತಿಸುವ ವೇಳೆ, ನಾವು ಇಸ್ತಾಂಬುಲ್ ನಲ್ಲಿ ಮೇ, 2016 ರಲ್ಲಿ ನಡೆದ ಜಾಗತಿಕ ಮಾನವೀಯತೆಯ ಶೃಂಗಕ್ಕೆ ಗಮನ ನೀಡುತ್ತೇವೆ.

8. ನಾವು ರಾಷ್ಟ್ರೀಯ ಸರ್ಕಾರಗಳ ಕೊಡುಗೆಗಳು, ಜೊತೆಗೆ ದೇಶದೊಳಗಿನ ಮತ್ತು ಸ್ಥಳೀಯ ಸರ್ಕಾರಗಳ ಕೊಡುಗೆಗಳನ್ನು ಹೊಸ ನಗರದ ವ್ಯಾಖ್ಯಾನದಲ್ಲಿ ಒಪ್ಪುತ್ತೇವೆ ಮತ್ತು ಸ್ಥಳೀಯ ಮತ್ತು ಪ್ರಾದೇಶಿಕ ಸರ್ಕಾರಗಳ ಎರಡನೇ ಜಾಗತಿಕ ಸಮ್ಮೇಳನವನ್ನು ಗಮನಿಸುತ್ತೇವೆ.


9. ಹೊಸ ನಗರ ಅಜೆಂಡಾ ಸಮರ್ಥನೀಯ ನಗರಾಭಿವೃದ್ಧಿಗೆ, ಸಮರ್ಥನೀಯ ನಗರಾಭಿವೃದ್ಧಿ ಜಾಗತಿಕ, ರಾಷ್ಟ್ರೀಯ, ದೇಶಾದ್ಯಂತ ಮತ್ತು ಸ್ಥಳೀಯವಾಗಿ, ಎಲ್ಲಾ ಪ್ರಸ್ತುತ ನಟರೊಂದಿಗೆ, ಸಮರ್ಥನೀಯ ಅಭಿವೃದ್ಧಿಯನ್ನು ಸಮಗ್ರವಾಗಿ ಮತ್ತು ಸಹಕಾರದೊಂದಿಗೆ ಅರ್ಥಮಾಡಿಕೊಳ್ಳಲು ಅತ್ಯಂತ ಮುಖ್ಯ ನಡೆ ಎಂಬ ನಮ್ಮ ಜಾಗತಿಕ ಬದ್ಧತೆಯನ್ನು ಮತ್ತೊಮ್ಮೆ ದೃಢೀಕರಿಸುತ್ತದೆ. ನೂತನ ನಗರ ಅಜೆಂಡಾದ ಜಾರಿ, ಸಮಗ್ರವಾಗಿ ಸಮರ್ಥನೀಯ ನಗರಾಭಿವೃದ್ಧಿಗೆ 2030 ಅಜೆಂಡಾ ಜಾರಿ ಮತ್ತು ಸೀಮಿತಗೊಳಿಸುವಿಕೆಗೆ ಪೂರಕವಾಗಿರುತ್ತದೆ ಮತ್ತು ಸಮರ್ಥನೀಯ ಅಭಿವೃದ್ಧಿಯ ಕನಸುಗಳು ಮತ್ತು ಗುರಿಗಳು, ನಗರಗಳನ್ನು ಮತ್ತು ಮನುಷ್ಯನ ವಾಸಸ್ಥಾನಗಳನ್ನು ಎಲ್ಲವನ್ನೂ ಒಳಗೊಂಡ, ಸುರಕ್ಷಿತ, ಬದಲಾಯಿಸಬಹುದಾದ ಮತ್ತು ಬಾಳಿಕೆ ಬರುವಂತೆ ಮಾಡುತ್ತವೆ.

10. ಹೊಸ ನಗರ ಅಜೆಂಡಾ, ಸಂಸ್ಕೃತಿ ಮತ್ತು ಸಂಸ್ಕೃತಿಯಲ್ಲಿ ವೈವಿಧ್ಯತೆ ಮನುಷ್ಯನ ಅಭಿವೃದ್ಧಿಯ ಮೂಲಗಳು ಮತ್ತು ನಗರಗಳ ಸಮರ್ಥನೀಯ ಬೆಳವಣಿಗೆಗೆ ಪ್ರಮುಖ ಕೊಡುಗೆ ನೀಡುತ್ತವೆ ಎಂದು ಒಪ್ಪುತ್ತದೆ. ನಗರಗಳ ಜೊತೆ, ಮನುಷ್ಯನ ವಸಾಹತುಗಳು ಮತ್ತು ಪ್ರಜೆಗಳು, ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿ ಕ್ರಿಯಾಶೀಲ ಮತ್ತು ಅನನ್ಯ ಪಾತ್ರ ವಹಿಸುವಂತೆ

---

9 ಜನಸಂಖ್ಯೆ ಮತ್ತು ಅಭಿವೃದ್ಧಿ ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನದ ವರದಿ, ಕೈರೋ, 5-13 ಸೆಪ್ಟಂಬರ್ 1994 (ವಿಶ್ವಸಂಸ್ಥೆಯ ಪ್ರಕಾಶನ, ಮಾರಾಟ ಸಂಖ್ಯೆ. ಇ.95.XIII.18), ಅಧ್ಯಾಯ I, ಠರಾವು 1, ಲಗತ್ತು.

10 ಮಹಿಳೆಯ ಕುರಿತಾದ ನಾಲ್ಕನೇ ಜಾಗತಿಕ ಸಮ್ಮೇಳನದ ವರದಿ, ಬೀಜಿಂಗ್, 4-15 ಸೆಪ್ಟೆಂಬರ್ 1995 (ವಿಶ್ವಸಂಸ್ಥೆಯ ಪ್ರಕಾಶನಗಳು, ಮಾರಾಟ ಸಂಖ್ಯೆ ಇ.96.IV.13), ಅಧ್ಯಾಯ. I, ಠರಾವು 1, ಲಗತ್ತು II.



New Delhi, India - Andrzej Wrotek ©

ಸಶಕ್ತರನ್ನಾಗಿಸುವುದು. ಹೊಸ ನಗರ ಅಜೆಂಡಾ ಮತ್ತಷ್ಟು ಗುರುತಿಸಿ, ಸಂಸ್ಕೃತಿಯನ್ನು ಪ್ರಚಾರ ಮತ್ತು ಸಮರ್ಥನೀಯ ಬಳಕೆ ಮತ್ತು ಸಂಪನ್ಮೂಲಗಳ ಜವಾಬ್ದಾರಿಯುತ ಬಳಕೆ ಮತ್ತು ಹವಾಮಾನ ವೈಪರೀತ್ಯದ ವ್ಯತಿರಿಕ್ತ ಪರಿಣಾಮವನ್ನು ತಿಳಿಸುವ ಉತ್ಪಾದನೆಯ ವಿಧಾನವನ್ನು ತಿಳಿಸುತ್ತದೆ.

## ನಮ್ಮ ಹಂಚಿಕೊಂಡಿರುವ ದೃಷ್ಟಿ

11. ನಾವು ಎಲ್ಲರಿಗೂ ನಗರಗಳು ಎಂಬ ದೃಷ್ಟಿ ಕೋನವನ್ನು, ಸಮನಾದ ಬಳಕೆ ಮತ್ತು ನಗರಗಳ ಮನರಂಜನೆ ಮತ್ತು ಮಾನವ ವಸಾಹತುಗಳನ್ನು ಉಲ್ಲೇಖಿಸಿ ಹಂಚಿಕೊಂಡಿದ್ದೇವೆ. ಎಲ್ಲರ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ನಿರೀಕ್ಷೆಯಲ್ಲಿ ಮತ್ತು ಈಗಿನ ಜನಾಂಗ ಮತ್ತು ಮುಂದಿನ ಜನಾಂಗ ಸೇರಿದಂತೆ ಎಲ್ಲಾ ವಾಸಿಗಳು, ಯಾವುದೇ ಬೇಧಭಾವವಿಲ್ಲದೆ, ವಸತಿಯನ್ನು ಒದಗಿಸಲು ಮತ್ತು ಸುರಕ್ಷಿತ, ಆರೋಗ್ಯಕರ, ಎಲ್ಲರಿಗೂ ದೊರೆಯುವ, ಕಡಿಮೆ ವೆಚ್ಚದ, ಚೇತರಿಸಿಕೊಳ್ಳಬಲ್ಲ ಮತ್ತು ಸಮರ್ಥನೀಯ ನಗರಗಳು ಮತ್ತು ಮಾನವ ವಸತಿಗಳು, ಇವುಗಳ ಏಳಿಗೆಯನ್ನು ಮತ್ತು ಎಲ್ಲರ ಜೀವನದ ಗುಣಮಟ್ಟವನ್ನು ಆಧರಿಸುವುದನ್ನು ಖಚಿತಪಡಿಸಿಕೊಳ್ಳುತ್ತೇವೆ.

12. ನಾವು ನಗರಗಳಲ್ಲಿ ಮತ್ತು ಮಾನವ ವಸಾಹತುಗಳಲ್ಲಿ ಎಲ್ಲರೂ ಸಮಾನ ಹಕ್ಕುಗಳು ಮತ್ತು ಅವಕಾಶಗಳನ್ನು ಪಡೆಯುವುದನ್ನು ಸಾಧಿಸಲು, ಮೂಲಭೂತ ಸ್ವಾತಂತ್ರ್ಯವನ್ನು ಪಡೆಯಲು, ವಿಶ್ವಸಂಸ್ಥೆಯ ಪಟ್ಟಿಯಲ್ಲಿರುವ ಉದ್ದೇಶಗಳು ಮತ್ತು ತತ್ವಗಳಿಂದ ನಿರ್ದೇಶಿಸಲ್ಪಟ್ಟಡುವ, ಅಂತಾರಾಷ್ಟ್ರೀಯ ಕಾನೂನಿಗೆ ಸಂಪೂರ್ಣ ಗೌರವದೊಂದಿಗೆ ಪಡೆಯಲು ಪ್ರಯತ್ನಿಸುತ್ತೇವೆ. ಈ ನಿಟ್ಟಿನಲ್ಲಿ ಹೊಸ ನಗರ ಅಜೆಂಡಾವನ್ನು ಮಾನವ ಹಕ್ಕುಗಳ[11] ಸಾರ್ವತ್ರಿಕ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಒಪ್ಪಂದಗಳಲ್ಲಿ, ಸಹಸ್ರಮಾನದ ಘೋಷಣೆಗಳಲ್ಲಿ[12] ಮತ್ತು 2005 ರ ಜಾಗತಿಕ ಶೃಂಗಸಭೆಯ ಫಲಿತಾಂಶದ[13] ವೇಳೆ ಸಂಕ್ಷಿಪ್ತವಾಗಿ ಪ್ರಸ್ತಾವ ಮಾಡಲಾಯಿತು. ಇದು ಇತರ ವಿಧಾನಗಳ ಮೂಲಕ- ಅಭಿವೃದ್ಧಿಯ[14] ಕುರಿತಾದ ಘೋಷಣೆ, ಮೂಲಕ ಇದನ್ನು ತಿಳಿಸಲಾಗಿದೆ.

---

11 ಠರಾವು 217 ಎ (III).

12 ಠರಾವು 55/2.

13 ಠರಾವು 60/1.

14 ಠರಾವು 41/128, ಠರಾವು.

13. ನಾವು ನಗರ ಮತ್ತು ಮಾನವ ವಸಾಹತುಗಳನ್ನು ಹೀಗೆ ಭಾವಿಸುತ್ತೇವೆ:

(ಎ) ಆಹಾರ ಭದ್ರತೆ ಮತ್ತು ಪೌಷ್ಠಿಕತೆ, ಆರೋಗ್ಯ, ಶಿಕ್ಷಣ, ನಿರ್ಮಾಣ, ಚಲನಶೀಲತೆ ಮತ್ತು ಸಾರಿಗೆ, ವಿದ್ಯುತ್, ಗಾಳಿಯ ಗುಣಮಟ್ಟ ಮತ್ತು ಜೀವನಾಧಾರದಂತಹ ವಲಯಗಳಲ್ಲಿ ಸಾರ್ವಜನಿಕ ಸರಕು ಮತ್ತು ಗುಣಮಟ್ಟದ ಸೇವೆಗಳಿಗೆ ಎಲ್ಲರಿಗೂ ಸಮಾನ ಪ್ರವೇಶ ಹಾಗೂ ಯಾವುದೇ ತಾರತಮ್ಯವಿಲ್ಲದೆ, ಸುರಕ್ಷಿತ ಮತ್ತು ಭರಿಸಬಹುದಾದ ಕುಡಿಯುವ ನೀರು ಮತ್ತು ನೈರ್ಮಲ್ಯತೆಗೆ ಜಾಗತಿಕ ಪ್ರವೇಶ, ಸಮರ್ಪಕ ಮಟ್ಟದ ಬದುಕಿನ ಹಕ್ಕಿನ ಸಂಯೋಜನೆಯಾಗಿ ಸಮರ್ಪಕ ನಿವಾಸದ ಹಕ್ಕಿನ ಪೂರ್ಣ ಕಂಡುಕೊಳ್ಳುವಿಕೆಯನ್ನು ಪ್ರಗತಿಶೀಲವಾಗಿ ಸಾಧಿಸುವ ದೃಷ್ಟಿಯೊಂದಿಗೆ ಭೂಮಿಯ ಸಾಮಾಜಿಕ ಮತ್ತು ಪರಿಸರಾತ್ಮಕ ಕಾರ್ಯವನ್ನು ಒಳಗೊಂಡು ಅವರ ಸಾಮಾಜಿಕ ಕಾರ್ಯವನ್ನು ಪೂರ್ಣಗೊಳಿಸುವುದು;

(ಬಿ) ಅವು ಪಾಲ್ಗೊಳ್ಳುವಂತಿರಬೇಕು, ಪೌರ ನಿಶ್ಚಯವನ್ನು ಬೆಂಬಲಿಸಬೇಕು, ತಮಗೂ ಸೇರಿದೆ ಮತ್ತು ತಾವೂ ಇದರ ಮಾಲಕರು ಎಂಬ ಭಾವನೆಯನ್ನು ಅಲ್ಲಿರುವವರಿಗೆ ಇರಬೇಕು. ಸುರಕ್ಷತೆ, ಎಲ್ಲವನ್ನೂ ಒಳಗೊಳ್ಳುವಿಕೆ, ದೊರೆಯುವ, ಕುಟುಂಬ ಇಷ್ಟಪಡುವ ಹಸಿರಿನಿಂದ ತುಂಬಿರುವ ಗುಣಮಟ್ಟದ ಸಾರ್ವಜನಿಕ ಸ್ಥಳಗಳು, ಸಮಾಜ ಮತ್ತು ಪೀಳಿಗೆಗಳ ನಡುವಿನ ನಂವಾದ, ಸಾಂಸ್ಕೃತಿಕ ಭಾವನೆಗಳು ಮತ್ತು ರಾಜಕೀಯ ಭಾಗವಹಿಸುವಿಕೆ, ಸೂಕ್ತವಾದ ಮತ್ತು ಸಾಮಾಜಿಕ ಒಗ್ಗೂಡುವಿಕೆಯನ್ನು ಬೆಂಬಲಿಸಲು, ಪಾಲ್ಗೊಳ್ಳುವಿಕೆ ಮತ್ತು ಶಾಂತಿಯುತ ಮತ್ತು ಬಹುಮುಖಿ ಸಮಾಜಗಳು, ಎಲ್ಲಿ ಪ್ರಜೆಗಳ ಅಗತ್ಯತೆ ಈಡೇರುತ್ತದೆ, ಕಷ್ಟದ ಪರಿಸ್ಥಿತಿಯಲ್ಲಿರುವವರ ನಿರ್ದಿಷ್ಟ ಅಗತ್ಯತೆಗಳನ್ನು ಗುರುತಿಸಿ ಪರಿಹರಿಸಲಾಗುತ್ತದೆ;

(ಸಿ) ಸಭ್ಯ ಕೆಲಸ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ, ಅಥವಾ ಸಮಾನ ಮೌಲ್ಯದ ಕೆಲಸವನ್ನು ಖಾತರಿಪಡಿಸಿಕೊಳ್ಳುವ ಮೂಲಕ ಮತ್ತು ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಮಹಿಳೆಯರು ಮತ್ತು ಹುಡುಗಿಯರ ಮೇಲೆ ತಾರತಮ್ಯ, ಹಿಂಸೆ ಮತ್ತು ಕಿರುಕುಳದ ಎಲ್ಲ ರೂಪಗಳನ್ನು ತಡೆಯುವ ಮತ್ತು ಹೊರಹಾಕುವ ಮೂಲಕ ತೀರ್ಮಾನ ಮಾಡುವ ಎಲ್ಲಾ ಮಟ್ಟಗಳಲ್ಲಿ ಎಲ್ಲಾ ಕ್ಷೇತ್ರಗಳು ಮತ್ತು ನಾಯಕತ್ವದಲ್ಲಿ ಮಹಿಳೆಯರ ಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆ ಮತ್ತು ಸಮಾನ ಹಕ್ಕುಗಳನ್ನು ಖಾತರಿಪಡಿಸಿಕೊಳ್ಳುವ ಮೂಲಕ ಲಿಂಗ ಸಮಾನತೆಯನ್ನು ಸಾಧಿಸುವುದು ಮತ್ತು ಎಲ್ಲಾ ಮಹಿಳೆಯರು ಮತ್ತು ಹುಡುಗಿಯರನ್ನು ಸಬಲೀಕರಿಸುವುದು;

(ಡಿ) ಸಧ್ಯದ ಸವಾಲುಗಳನ್ನು ಮತ್ತು ಅವಕಾಶಗಳನ್ನು ಮತ್ತ ಭವಿಷ್ಯದಲ್ಲಿ ಉಳಿದುಕೊಳ್ಳಬಹುದಾದ, ಎಲ್ಲವನ್ನೂ ಒಳಗೊಳ್ಳುವ ಮತ್ತು ಸಮರ್ಥನೀಯ ಆರ್ಥಿಕ ಬೆಳವಣಿಗೆ, ರಚನಾತ್ಮಕ ಬದಲಾಣೆಗಾಗಿ ನಗರೀಕರಣವನ್ನು ಅತ್ಯುತ್ತಮವಾಗಿ

ಬಳಸಿಕೊಳ್ಳುವುದು. ಉನ್ನತ ಉತ್ಪಾದಕತೆ, ಮೌಲ್ಯವರ್ಧನೆ ಚಟುವಟಿಕೆಗಳು ಮತ್ತು ಸಂಪನ್ಮೂಲ ದಕ್ಷತೆಗೆ, ಸ್ಥಳೀಯ ಆರ್ಥಿಕತೆಯನ್ನು ಉತ್ತಮಪಡಿಸಲು, ಅನೌಪಚಾರಿಕ ಆರ್ಥಿಕತೆಯ ಕೊಡುಗೆಯನ್ನು ಗಮನಿಸುವುದು ಮತ್ತು ಸಮರ್ಥ ಔಪಚಾರಿಕ ಆರ್ಥಿಕತೆಗೆ ಬದಲಾಗುವುದನ್ನು ಬೆಂಬಲಿಸುವುದು;

(ಇ) ಆಡಳಿತದ ಸೀಮಾರೇಖೆಯುದ್ದಕ್ಕೂ ಅವರ ಪ್ರಾದೇಶಿಕ ಅಗತ್ಯತೆಗಳನ್ನು ಪೂರ್ಣಗೊಳಿಸಲು ಮತ್ತು ಸಮತೋಲಿತ, ಸಮರ್ಥ ಮತ್ತು ಎಲ್ಲಾ ಹಂತಗಳಲ್ಲೂ ಸಮಗ್ರ ನಗರ ಮತ್ತು ಪ್ರಾದೇಶಿಕ ಅಭಿವೃದ್ಧಿಗೆ ಕೇಂದ್ರಸ್ಥಾನ ಮತ್ತು ಚಾಲಕನಂತೆ ವರ್ತಿಸುತ್ತದೆ.

(ಎಫ್) ವಯಸ್ಸು ಮತ್ತು ಲಿಂಗ-ಪ್ರತಿಕ್ರಿಯೆ ಆಧಾರಿತ ಯೋಜನೆಗಳು ಮತ್ತು ಸಮರ್ಥ, ಸುರಕ್ಷಿತ ಮತ್ತು ಎಲ್ಲರಿಗೂ ಕೈಗೆಟುಕುವ ನಗರ ಸಂಚಾರ ಮತ್ತು ಪ್ರಯಾಣಿಕರಿಗೆ ಸಂಪನ್ಮೂಲಭರಿತ ಸಂಚಾರಿ ವ್ಯವಸ್ಥೆ ಮತ್ತು ಲಗೇಜು ನಿರ್ವಹಣೆ, ಪರಿಣಾಮಕಾರಿಯಾಗಿ, ಜನರನ್ನು, ಸ್ಥಳಗಳನ್ನು, ಲಗೇಜನ್ನು, ಸೇವೆಗಳನ್ನು ಮತ್ತು ಆರ್ಥಿಕ ಅವಕಾಶಗಳನ್ನು ಜೋಡಿಸುವುದು;

(ಜಿ) ವಿಕೋಪದ ಅಪಾಯವನ್ನು ಕಡಿಮೆಗೊಳಿಸುವ ಮತ್ತು ನಿರ್ವಹಣಾ ಯೋಜನೆಯನ್ನು ಒಪ್ಪಿಕೊಳ್ಳುವುದು ಮತ್ತು ಜಾರಿಗೊಳಿಸುವುದು, ದೌರ್ಬಲ್ಯವನ್ನು ಕಡಿಮೆಗೊಳಿಸುವುದು, ಒಗ್ಗಿಕೊಳ್ಳುವುದು ಮತ್ತು ಪರಿಸರ ಹಾಗೂ ಮಾನವ ನಿರ್ಮಿತ ಅಪಾಯಗಳಿಗೆ ಸ್ಪಂದಿಸುವುದು, ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವುದು ಮತ್ತು ತಗ್ಗಿಸುವಿಕೆಗೆ ಪ್ರೋತ್ಸಾಹ ನೀಡುವುದು;

(ಹೆಚ್) ಅವರ ಪರಿಸರ ವ್ಯವಸ್ಥೆ, ನೀರು, ಸಹಜ ವಾಸಸ್ಥಾನ ಮತ್ತು ಜೀವವೈವಿಧ್ಯತೆಯನ್ನು ರಕ್ಷಿಸುವುದು, ಉಳಿಸುವುದು, ಮರುಸ್ಥಾಪಿಸುವುದು ಮತ್ತು ಪ್ರಚಾರ ನೀಡುವುದು, ಅವುಗಳಿಂದ ವಾತಾವರಣದ ಮೇಲಾಗುವ ಪರಿಣಾಮವನ್ನು ತಗ್ಗಿಸುವುದು ಮತ್ತು ಸಮರ್ಥನೀಯ ಖರ್ಚು ಮತ್ತು ಉತ್ಪಾದನಾ ವಿಧಾನಗಳನ್ನು ಆರಿಸಿಕೊಳ್ಳುವುದು.

## ನಮ್ಮ ತತ್ವಗಳು ಮತ್ತು ಬದ್ಧತೆಗಳು

14. ನಮ್ಮ ಗುರಿಯನ್ನು ಸಾಧಿಸಲು, ನಾವು ಈ ಕೆಳಗಿನ ಅಂತರ್ಕೊಂಡಿಯ ತತ್ವಗಳಿಂದ ಸಲಹೆ ಮಾಡಲ್ಪಟ್ಟ ಹೊಸ ನಗರ ಅಜೆಂಡಾವನ್ನು ಅಳವಡಿಸಿಕೊಳ್ಳುವುದನ್ನು ಪರಿಹರಿಸುತ್ತೇವೆ.

(ಎ) ಸುರಕ್ಷತೆಯನ್ನು ಹೆಚ್ಚಿಸುವ ಮತ್ತು ತಾರತಮ್ಯ ಹಾಗೂ ಎಲ್ಲಾ ರೂಪದ ಹಿಂಸೆಯನ್ನು ಹೊರಹಾಕುವ ಮೂಲಕ, ಸಾರ್ವಜನಿಕ ಭಾಗವಹಿಸುವಿಕೆಯ ಮೂಲಕ - ಎಲ್ಲರಿಗೂ ಸುರಕ್ಷತೆ ಮತ್ತು ಸಮಾನ ಪ್ರವೇಶವನ್ನು ಒದಗಿಸುವುದು, ಮತ್ತು ಎಲ್ಲರಿಗೂ ಭೌತಿಕ ಮತ್ತು ಸಾಮಾಜಿಕ ನಿರ್ಮಾಣ ಮತ್ತು ಮೂಲಭೂತ ಸೇವೆಗಳು, ಹಾಗೂ ಸಮರ್ಪಕ ಮತ್ತು ಭರಿಸಬಹುದಾದ

ಮನೆಗೆ ಪ್ರವೇಶ ನೀಡುವ ಮೂಲಕ, ಏಡ್ಸ್, ಕ್ಷಯ ಮತ್ತು ಮಲೇರಿಯಾವನ್ನು ಕೊನೆಗೊಳಿಸುವುದನ್ನು ಒಳಗೊಂಡು ಜೀವನೀಯತೆ, ಶಿಕ್ಷಣ, ಆಹಾರ ಭದ್ರತೆ ಮತ್ತು ಪೌಷ್ಠಿಕತೆ, ಆರೋಗ್ಯ ಮತ್ತು ಯೋಗಕ್ಷೇಮವನ್ನು ಹೆಚ್ಚಿಸುವ ಮೂಲಕ, ನಗರದ ಸ್ಥಳದಲ್ಲಿ ಸಮಾನ ಹಕ್ಕುಗಳು ಮತ್ತು ಅವಕಾಶಗಳು, ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆ, ಮತ್ತು ಸಮಗ್ರತೆಯನ್ನು ಖಾತರಿಪಡಿಸಿಕೊಳ್ಳುವ ಮೂಲಕ, ಅತಿ ಬಡತನದ ನಿರ್ಮೂಲನೆಯನ್ನು ಒಳಗೊಂಡು ತನ್ನ ಎಲ್ಲಾ ರೂಪಗಳು ಮತ್ತು ಆಯಾಮಗಳಲ್ಲಿ ಬಡತನವನ್ನು ಕೊನೆಗೊಳಿಸುವ ಮೂಲಕ ಯಾರನ್ನೂ ಹಿಂದೆ ಬಿಡದಿರುವುದು.

(ಬಿ) ಸಮುಚಿತವಾಗುವಲ್ಲಿ, ಭೂಮಿಯ ಊಹಾಪೋಹವನ್ನು ತಡೆಯುವ, ಸುಭದ್ರ ಭೂಮಿಯ ಅವಧಿಯನ್ನು ಹೆಚ್ಚಿಸುವ ಮತ್ತು ನಗರ ಕುಗ್ಗುವಿಕೆಯನ್ನು ನಿರ್ವಹಣೆ ಮಾಡುವ ಮೂಲಕ ಮತ್ತು ಸಭ್ಯ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಮತ್ತು ಉತ್ಪಾದಕ ಸಂಪನ್ಮೂಲಗಳು ಮತ್ತು ಅವಕಾಶಗಳಿಗಾಗಿ ಸಮಾನ ಪ್ರವೇಶವನ್ನು ಖಚಿತಪಡಿಸಿಕೊಳ್ಳುವ ಮೂಲಕ, ಎಲ್ಲರಿಗೂ ಪೂರ್ಣ ಮತ್ತು ಉತ್ಪಾದಕ ಉದ್ಯೋಗ ಮತ್ತು ಎಲ್ಲರಿಗೂ ಸಭ್ಯ ಕೆಲಸವನ್ನು ಹೆಚ್ಚಿಸುವ ಮೂಲಕ, ಅಧಿಕ ಉತ್ಪಾದಕತೆ, ಸರ್ಧೆ ಮತ್ತು ನಾವಿನ್ಯತೆಯನ್ನು ಒಳಗೊಂಡು, ಯೋಜಿತ ನಗರೀಕರಣದ ಒಟ್ಟುಗೂಡಿಸುವಿಕೆಯನ್ನು ಹತೋಟಿಯಲ್ಲಿಡುವ ಮೂಲಕ ಸಮರ್ಥನೀಯ ಮತ್ತು ಅಂತರ್ಗತ ನಗರ ಆರ್ಥಿಕತೆಯನ್ನು ಖಚಿತಪಡಿಸಿಕೊಳ್ಳುವುದು.

(ಸಿ) ದುರಂತದ ಅಪಾಯಗಳನ್ನು ಕಡಿಮೆ ಮಾಡುವ ಮತ್ತು ಹವಾಮಾನ ಬದಲಾವಾಣೆಯನ್ನು ಕಡಿಮೆ ಮಾಡುವ ಮತ್ತು ಅಳವಡಿಸಿಕೊಳ್ಳುವ ಮೂಲಕ, ನಗರ ಸ್ಥಿತಿಸ್ಥಾಪಕತೆಯನ್ನು ಹೆಚ್ಚಿಸುವ ಮೂಲಕ, ಸಮರ್ಥನೀಯ ಬಳಕೆ ಮತ್ತು ಉತ್ಪಾದನಾ ಮಾದರಿಗಳ ಮೂಲಕ, ಸ್ವರೂಪದೊಂದಿಗೆ ಸಾಮರಸ್ಯದಲ್ಲಿ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದನ್ನು ಒಳಗೊಂಡು, ಪರಿಸರ ವ್ಯವಸ್ಥೆ ಮತ್ತು ಜೈವಿಕ ವೈವಿಧ್ಯತೆಯನ್ನು ರಕ್ಷಿಸುವ ಮೂಲಕ, ನಗರ ಅಭಿವೃದ್ಧಿಯಲ್ಲಿ ಭೂಮಿ ಮತ್ತು ಸಂಪನ್ಮೂಲಗಳ ಸ್ವಚ್ಛ ಶಕ್ತಿ ಮತ್ತು ಸಮರ್ಥನೀಯ ಬಳಕೆಯನ್ನು ಹೆಚ್ಚಿಸುವ ಮೂಲಕ ಪರಿಸರಾತ್ಮಕ ಸಮರ್ಥನೀಯತೆಯನ್ನು ಖಾತರಿಪಡಿಸುವುದು.

15. ನಾವು ನಮ್ಮನ್ನು ಇವುಗಳಿಗೆ ಹೊಸ ನಗರ ಅಜೆಂಡಾಕ್ಕಾಗಿ ನಗರ ಮಾದರಿ ಬದಲಾವಣೆಯ ನಿಟ್ಟಿನಲ್ಲಿ ಕೆಲಸ ಮಾಡಾಲು ಬದ್ಧರನ್ನಾಗಿಸಿಕೊಂಡಿದ್ದೇವೆ:

(ಎ) ಎಲ್ಲರಿಗೂ ಸಮರ್ಥನೀಯ ಅಭಿವೃದ್ಧಿ ಮತ್ತು ಸಮೃದ್ಧಿಯನ್ನು ಸಾಧಿಸಲು ಅವಶ್ಯಕವಾಗಿ ನಾವು ಯೋಜಿಸಿಕೊಳ್ಳುವ ಮಾರ್ಗ, ಹಣಕಾಸು, ಅಭಿವೃದ್ಧಿ, ನಗರಗಳ ನಿಯಂತ್ರಣ ಮತ್ತು ನಿರ್ವಹಣೆ ಹಾಗೂ ಮಾನವ ವಸಾಹತುಗಳನ್ನು ಹೊಸದಾಗಿ ಗಮನಿಸುವುದು, ಸಮರ್ಥನೀಯ ನಗರವನ್ನು ಪ್ರಾದೇಶಿಕ ಅಭಿವೃದ್ಧಿಯನ್ನು ಗುರುತಿಸುವುದು.

(ಬಿ) ಪಾರದರ್ಶಕ ಮತ್ತು ಗಮನಾರ್ಹ ರೀತಿಯಲ್ಲಿ ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು, ಹಾಗೂ ನಾಗರೀಕ ಸಮಾಜ ಮತ್ತು ಇತರೆ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳ ಸಮರ್ಥನೀಯ ನಗರ ಅಭಿವೃದ್ಧಿ, ಮತ್ತು ಸಮಾನವಾಗಿ ಮುಖ್ಯ ಕೊಡುಗೆಗಳಿಗಾಗಿ ಅಂತರ್ಗತ ಮತ್ತು ಪರಿಣಾಮಕಾರಿ ನಗರ ನೀತಿಗಳ ವ್ಯಾಖ್ಯಾನ ಮತ್ತು ಕಾರ್ಯರೂಪಗೊಳಿಸುವಿಕೆಯಲ್ಲಿ, ಸಮುಚಿತವಾದಂತೆ, ರಾಷ್ಟ್ರೀಯ ಸರ್ಕಾರಗಳ ಮುಖ್ಯ ಪಾತ್ರವನ್ನು ಗುರುತಿಸುವುದು.

(ಸಿ) ಸಮರ್ಥನೀಯ, ಜನ-ಕೇಂದ್ರಿತ, ಪ್ರಾಯ ಮತ್ತು ಲಿಂಗ-ಪ್ರತಿಕ್ರಿಯಾಶೀಲ ಮತ್ತು ಬದಲಾವಣೆಯ ಮೂಲಭೂತ ಚಾಲಕಗಳ ಆಧಾರದ ಮೇಲೆ ಎಲ್ಲಾ ಮಟ್ಟದಲ್ಲಿಯೂ ನೀತಿಗಳು, ಕಾರ್ಯತಂತ್ರಗಳು, ಸಾಮರ್ಥ್ಯ ಅಭಿವೃದ್ಧಿ ಮತ್ತು ಕ್ರಮಗಳ ಮೂಲಕ ನಗರ ಮತ್ತು ಪ್ರಾದೇಶಿಕ ಅಭಿವೃದ್ಧಿಗೆ ಸಮಗ್ರ ಪ್ರವೇಶವನ್ನು ಅಳವಡಿಸಿಕೊಳ್ಳುವುದು, ಅವುಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

(i) ಸ್ಥಳೀಯ-ರಾಷ್ಟ್ರೀಯ ಮತ್ತು ಬಹುಪಾಲು ಪಾಲುದಾರಿಕೆಗಳು, ನಗರಗಳ ಸರ್ವಾಂಗೀಣ ವ್ಯವಸ್ಥೆಗಳನ್ನು ನಿರ್ಮಿಸುವುದು ಮತ್ತು ಮಾನವ ವಸತಿ ವ್ಯವಸ್ಥೆಗಳನ್ನು ಒಳಗೊಂಡಂತೆ ಮತ್ತು ಸೂಕ್ತ ಮಟ್ಟದಲ್ಲಿ ನಗರ ನೀತಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು ಮತ್ತು ಸುಸ್ಥಿರ ಸರ್ವಾಂಗೀಣ ನಗರ ಅಭಿವೃದ್ಧಿಯ ಸಾಧನೆಗಾಗಿ ಎಲ್ಲಾ ಮಟ್ಟದ ಸರ್ಕಾರದ ಸಹಕಾರವನ್ನು ಉತ್ತೇಜಿಸುವುದು;

(ii) ನಗರಾಭಿವೃದ್ಧಿ ಕ್ಷೇತ್ರದಲ್ಲಿ ಊಹಾಪೋಹ ಮತ್ತು ಸುಸಂಬದ್ಧತೆಗಳನ್ನು ಒದಗಿಸುವುದು, ಸೂಕ್ತವಾದ ಪರಿಶೀಲನೆ ಮತ್ತು ಸಮತೋಲನಗಳನ್ನು ಸಬಲಗೊಳಿಸುವ ಮತ್ತು ಸಕಾರಾತ್ಮಕವಾಗಿರುವ ನಗರಗಳು ಮತ್ತು ವ್ಯವಸ್ಥೆಗಳೊಂದಿಗೆ ನಗರ ಆಡಳಿತವನ್ನು ಬಲಪಡಿಸುವುದು. ಸಾಮಾಜಿಕ ಸೇರ್ಪಡೆ, ಸುಸ್ಥಿರ, ಸೇರ್ಪಡೆ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ ಮತ್ತು ಪರಿಸರ ಸಂರಕ್ಷಣೆಯ ಯೋಜನೆಯನ್ನು ಸಕ್ರಿಯಗೊಳಿಸುವುದು;

(iii) ನಗರ ರೂಪದ ಪ್ರಾದೇಶಿಕ ಆಯಾಮವನ್ನು ಅತ್ಯುತ್ತಮವಾಗಿಸಲು ಮತ್ತು ಏರಿಳಿತದ ಸಕಾರಾತ್ಮಕ ಪರಿಣಾಮಗಳನ್ನು ಪೂರೈಸುವ ಸಲುವಾಗಿ ದೀರ್ಘಕಾಲೀನ ಮತ್ತು ಸರ್ವಾಂಗೀಣ ನಗರ ಮತ್ತು ಪ್ರಾದೇಶಿಕ ಯೋಜನೆ ಮತ್ತು ವಿನ್ಯಾಸವನ್ನು ಪುನಶ್ಚೇತನಗೊಳಿಸುವುದು;

(iv) ಸುಸ್ಥಿರ ನಗರ ಅಭಿವೃದ್ಧಿಯ ಮೂಲಕ ಅಂತರ್ಗತವಾಗಿರುವ ಮೌಲ್ಯವನ್ನು ಸೃಷ್ಟಿಸಲು, ಉಳಿಸಿಕೊಳ್ಳಲು ಮತ್ತು ಹಂಚಿಕೊಳ್ಳಲು ಪರಿಣಾಮಕಾರಿ, ನವೀನ ಮತ್ತು ಸಮರ್ಥನೀಯ ಹಣಕಾಸು ಚೌಕಟ್ಟುಗಳು ಮತ್ತು ಉಪಕರಣಗಳನ್ನು ಬಲಪಡಿಸುವ ಪುರಸಭೆಯ ಹಣಕಾಸು ಮತ್ತು ಸ್ಥಳೀಯ ಹಣಕಾಸಿನ ವ್ಯವಸ್ಥೆಗಳನ್ನು ಬೆಂಬಲಿಸುವುದು.

## ಕ್ರಮಕ್ಕಾಗಿ ಕರೆ

16. ಎಲ್ಲಾ ಗಾತ್ರದ ನಗರಗಳು, ಪಟ್ಟಣಗಳು ಮತ್ತು ಹಳ್ಳಿಗಳ ನಿರ್ದಿಷ್ಟ ಪರಿಸ್ಥಿತಿಗಳು ಬೇರೆಬೇರೆಯಾಗಿರುವಾಗ, ಹೊಸ ನಗರ ಅಜೆಂಡಾವು ವ್ಯಾಪ್ತಿಯಲ್ಲಿ ಜಾಗತಿಕವಾಗಿದೆ, ಭಾಗವಹಿಸುವಿಕೆಯದ್ದಾಗಿದೆ ಮತ್ತು ಜನ-ಕೇಂದ್ರಿತವಾಗಿದೆ, ಗ್ರಹವನ್ನು ರಕ್ಷಿಸುತ್ತದೆ ಮತ್ತು ಜಾಗತಿಕ, ಪ್ರಾದೇಶಿಕ, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದಲ್ಲಿ ಸರ್ಕಾರಗಳು ಮತ್ತು ತಮ್ಮ ಅಗತ್ಯತೆಗಳ ಆಧಾರದ ಮೇಲೆ ಅಳವಡಿಸಿಕೊಳ್ಳಬಹುದಾದ ಪ್ರತಿಯೊಂದು ದೇಶದಲ್ಲಿರುವ ಇತರೆ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳ ಆದ್ಯತೆಗಳು ಮತ್ತು ಕ್ರಮಗಳನ್ನು ನಿಗದಿಪಡಿಸುವುದು ಮತ್ತು ದೀರ್ಘಾವಧಿ ಗುರಿಯನ್ನು ಹೊಂದಿದೆ.

17. ನಾವು ನಮ್ಮ ಸ್ವಂತ ದೇಶಗಳು ಮತ್ತು ಪ್ರಾದೇಶಿಕ ಹಾಗೂ ಜಾಗತಿಕ ಮಟ್ಟದಲ್ಲಿ, ವಿಭಿನ್ನ ರಾಷ್ಟ್ರೀಯ ನೈಜತೆಗಳು, ಸಾಮರ್ಥ್ಯಗಳು ಮತ್ತು ಅಭಿವೃದ್ಧಿಯ ಮಟ್ಟ, ಮತ್ತು ರಾಷ್ಟ್ರೀಯ ಶಾಸನ ಮತ್ತು ಪದ್ಧತಿಗಳು ಹಾಗೂ ನೀತಿಗಳು ಮತ್ತು ಆದ್ಯತೆಗಳನ್ನು ಗೌರವಿಸುತ್ತಾ ಹೊಸ ನಗರ ಅಜೆಂಡಾವನ್ನು ಕಾರ್ಯರೂಪಕ್ಕೆ ತರುವಲ್ಲಿ ಕೆಲಸ ಮಾಡುತ್ತೇವೆ.

18. ನಾವು ತತ್ವ 7ರಲ್ಲಿ ನಿಗದಿಪಡಿಸಿದಂತೆ, ಸಾಮಾನ್ಯ ತತ್ವಗಳು, ಆದರೆ ವಿಭಿನ್ನಗೊಳಿಸಿದ ಜವಾಬ್ದಾರಿಗಳನ್ನು ಇತರೆ ವಿಷಯಗಳ ನಡುವೆ ಒಳಗೊಂಡು, ಪರಿಸರ ಮತ್ತು ಅಭಿವೃದ್ಧಿಯ ಮೇಲೆ ರಿಯೊ ಘೋಷಣೆಯ ಎಲ್ಲಾ ತತ್ವಗಳನ್ನು ಮರುದೃಢೀಕರಿಸುತ್ತೇವೆ.

19. ಹೊಸ ನಗರ ಅಜೆಂಡಾದ ಜಾರಿಯಲ್ಲಿ ಎಲ್ಲಾ ದೇಶಗಳಲ್ಲಿ ಹೆಚ್ಚುತ್ತಿರುವ ನಗರೀಕರಣದ ಸವಾಲುಗಳು, ಆಫ್ರಿಕಾದ ದೇಶಗಳು, ಅತ್ಯಂತ ಹಿಂದುಳಿದಿರುವ ದೇಶಗಳು, ಭೂಮಿಯಿಂದ ಸುತ್ತುವರಿದ ಅಭಿವೃದ್ಧಿಶೀಲ ದೇಶಗಳು ಮತ್ತು ಸಣ್ಣ ಅಭಿವೃದ್ಧಿಶೀಲ ದ್ವೀಪಗಳು ಮತ್ತು ಮಧ್ಯಮ ಆದಾಯದ ದೇಶಗಳ ಕೆಲವೊಂದು ಸಮಸ್ಯೆಗಳಿಗೆ ನಿರ್ದಿಷ್ಟ ಗಮನ ನೀಡಬೇಕು ಎಂಬುದನ್ನು ನಾವು ಒಪ್ಪುತ್ತೇವೆ. ಸಂಘರ್ಷವನ್ನು ಎದುರಿಸುತ್ತಿರುವ ದೇಶಗಳು, ವಿದೇಶಗಳ ವಶದಲ್ಲಿರುವ ದೇಶಗಳು ಮತ್ತು ಭೂಭಾಗಗಳು, ಸಂಘರ್ಷದ ನಂತರದ ಸ್ಥಿತಿಯಲ್ಲಿರುವ ದೇಶಗಳು ಮತ್ತು ಪ್ರಾಕೃತಿಕ ಅಥವಾ ಮಾನವ ಮಾಡಿಕೊಂಡ ದುರಂತಗಳನ್ನ ಎದುರಿಸುತ್ತಿರುವ ದೇಶಗಳಿಗೆ ನೆರವಾಗಬೇಕು.

20. ಇತರ ವಿಷಯಗಳ ನಡುವೆ ವಿವಿಧ ರೀತಿಯ ತಾರತಮ್ಯ ಎದುರಿಸುವ ಮಹಿಳೆಯರು ಮತ್ತು ಹುಡುಗಿಯರು, ಮಕ್ಕಳು ಮತ್ತು ಯುವಕರು, ದೈಹಿಕ ನ್ಯೂನತೆಯುಳ್ಳವರು, ಹೆಚ್ಐವಿ/ಏಡ್ಸ್ ಪೀಡಿತರು, ವಯಸ್ಸಾದವರು, ಸ್ಥಳೀಯ ಜನರು ಮತ್ತು ಸ್ಥಳೀಯ ಸಮುದಾಯಗಳು, ಕೊಳಚೆ ಪ್ರದೇಶಗಳು ಮತ್ತು ಅನೌಪಚಾರಿಕ ವಸಾಹತು ಮಾರಾಟಗಾರರು, ಮನೆಯಿಲ್ಲದವರು, ಕೆಲಸಗಾರರು, ಸಣ್ಣ ಹಿಡುವಳಿದಾರ ರೈತರು ಮತ್ತು ಮೀನುಗಾರರು, ನಿರಾಶ್ರಿತರು,

ಮರಳಿದವರು, ಆಂತರಿಕವಾಗಿ ಸ್ಥಾನಪಲ್ಲಟಗೊಂಡವರು ಮತ್ತು ಅಲೆಮಾರಿಗಳು ಇಂತಹವರಿಗೆ ನಿರ್ದಿಷ್ಟ ಗಮನ ನೀಡಬೇಕಾದ ಅಗತ್ಯವನ್ನು ನಾವು ಗುರುತಿಸುತ್ತೇವೆ.

21. ನಾವು ಎಲ್ಲಾ ರಾಷ್ಟ್ರೀಯ, ರಾಷ್ಟ್ರದೊಳಗಿನ ಮತ್ತು ಸ್ಥಳೀಯ ಸರ್ಕಾರಗಳು, ಜೊತೆಗೆ ಪ್ರಸ್ತುತ ಪಾಲುದಾರರು, ರಾಷ್ಟ್ರೀಯ ನೀತಿಗಳು ಮತ್ತು ಶಾಸನಕ್ಕೆ ಸಹಕಾರವನ್ನು ಉತ್ತಮಗೊಳಿಸಲು ಮತ್ತು ಪಾಲುದಾರಿಕೆ ಬೆಳೆಸಲು, ಸಹಕಾರವನ್ನ ಉತ್ತಮಪಡಿಸಲು, ಪುನಶ್ಚೇತನಗೊಳಿಸಲು, ಬಲಗೊಳಿಸಲು ಮತ್ತು ಹೊಸ ನಗರ ಅಜೆಂಡಾವನ್ನು ಜಾರಿಗೊಳಿಸಲು ಮತ್ತು ನಮ್ಮ ಹಂಚಿಕೊಂಡ ದೃಷ್ಟಿಕೋನವನ್ನು ನಿಜವಾಗಿಸಲು ಒತ್ತಾಯಿಸುತ್ತೇವೆ.

22. ನಾವು ಈ ಹೊಸ ನಗರ ಅಜೆಂಡಾವನ್ನು ಒಂದು ಸಾಮೂಹಿಕ ದೃಷ್ಟಿಕೋನ ಮತ್ತು ಸಮರ್ಥನೀಯ ನಗರಾಭಿವೃದ್ಧಿಗೆ ಬೆಂಬಲ ಮತ್ತು ಅದನ್ನು ನಿಜವಾಗಿಸಲು ರಾಜಕೀಯ ಬದ್ಧತೆ, ಮತ್ತು ವೇಗವಾಗಿ ನಗರೀಕರಣವಾಗುತ್ತಿರುವ ಪ್ರಪಂಚದಲ್ಲಿ ಮಾನವ ವಸಾಹತುಗಳ ಸಮರ್ಥನೀಯ ಅಭಿವೃದ್ಧಿಯ ಚಾಲಕರಂತೆ, ನಗರಗಳ ಅತ್ಯಂತ ಪ್ರಮುಖ ಪಾತ್ರದ ಮೇಲೆ ಪ್ರಭಾವ ಬೀರಲು ಐತಿಹಾಸಿಕ ಅವಕಾಶವೆಂಬಂತೆ ಒಪ್ಪಿಕೊಳ್ಳುತ್ತೇವೆ.

# ಹೊಸ ನಗರ ಅಜೆಂಡಾಕ್ಕಾಗಿಕ್ವಿಟೊ ಕಾರ್ಯರೂಪ ಯೋಜನೆ

23. ನಾವು ಸಮರ್ಥನೀಯ ನಗರ ಅಭಿವೃದ್ಧಿಯನ್ನು ಸಾಧಿಸಲು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು ಮತ್ತು ಎಲ್ಲಾ ಸುಸಂಬದ್ಧ ಸ್ಟೇಕ್ಹೋಲ್ಡರ್‌ಗಳನ್ನು ಸಮರ್ಥರನ್ನಾಗಿಸುವುದಕ್ಕಾಗಿ ಮುಖ್ಯ ಸಲಕರಣೆಯಾಗಿ ಹೊಸ ನಗರ ಅಜೆಂಡಾವನ್ನು ಕಾರ್ಯರೂಪಕ್ಕೆ ತರಲು ನಿರೂಪಿಸುತ್ತೇವೆ.

## ಸಮರ್ಥನೀಯ ನಗರ ಅಭಿವೃದ್ಧಿಗಾಗಿ ಪರಿವರ್ತಕ ಬದ್ಧತೆಗಳು

24. ಸಮರ್ಥನೀಯ ನಗರ ಬೆಳವಣಿಗೆಯ ಸಾಧ್ಯತೆಯನ್ನು ಪೂರ್ಣವಾಗಿ ಸರಂಜಾಮುಗೊಳಿಸಲು, ನಾವು ಸಮರ್ಥನೀಯ ಅಭಿವೃದ್ಧಿ: ಸಾಮಾಜಿಕ, ಆರ್ಥಿಕ ಮತ್ತು ಪರಿಸರಾತ್ಮಕತೆಯ ಸಮಗ್ರ ಮತ್ತು ವಿಭಜಿಸಲಾಗದ ಆಯಾಮಗಳಲ್ಲಿ ಆಧಾರಿತ ನಗರ ಮಾದರಿ ಸ್ಥಳಾಂತರದ ಮೂಲಕ ಈ ಕೆಳಗಿನ ಪರಿವರ್ತಕ ಬದ್ಧತೆಗಳನ್ನು ನಾವು ಮಾಡುತ್ತೇವೆ.

## ಸಾಮಾಜಿಕ ಅಂತರ್ವೇಶನ ಮತ್ತು ಬಡತನವನ್ನು ಕೊನೆಗೊಳಿಸುವುದಕ್ಕಾಗಿ ಸಮರ್ಥನೀಯ ನಗರ ಅಭಿವೃದ್ಧಿ

25. ಕಡುಬಡತನ ಸೇರಿದಂತೆ ಎಲ್ಲಾ ಸ್ವರೂಪಗಳಲ್ಲಿ ಮತ್ತು ಆಯಾಮಗಳಲ್ಲಿ ರುವ ಬಡತನ ನಿರ್ಮೂಲನೆ ಅತಿದೊಡ್ಡ ಜಾಗತಿಕ ಸವಾಲು ಮತ್ತು ಸಮರ್ಥನೀಯ ಅಭಿವೃದ್ಧಿಗೆ ಅನಿವಾರ್ಯ ಅಗತ್ಯ ಎಂದು ಗುರುತಿಸಿದ್ದೇವೆ. ಹೆಚ್ಚುತ್ತಿರುವ ಅಸಮಾನತೆ ಮತ್ತು ಬಡತನದ ವಿವಿಧ ಆಯಾಮಗಳ ದೀರ್ಘ ಪ್ರಯತ್ನ, ಹೆಚ್ಚುತ್ತಿರುವ ಕೊಳಚೆ ಪ್ರದೇಶಗಳು ಮತ್ತು ಅನೌಪಚಾರಿಕ ವಸಾಹತುಗಳ ಮಾರಾಟಗಾರರು ಅಭಿವೃದ್ಧಿ ಹೊಂದಿದ- ಹೊಂದುತ್ತಿರುವ ದೇಶಗಳನ್ನು ಮತ್ತು ಪ್ರಾದೇಶಿಕ ಸಂಘಟನೆಗಳನ್ನು ಬಾಧಿಸುತ್ತಾರೆ ಎಂಬುದನ್ನು ನಾವು ಗುರುತಿಸುತ್ತೇವೆ. ನಗರದ ಜಾಗದ ಪಡೆದುಕೊಳ್ಳುವಿಕೆ ಮತ್ತು ವಿನ್ಯಾಸ, ಮೂಲಸೌಕರ್ಯ, ಮೂಲಭೂತ ವ್ಯವಸ್ಥೆಗೆ ಇರುವ ಅವಕಾಶಗಳು, ಜೊತೆಗೆ ಅಭಿವೃದ್ಧಿ ನೀತಿಗಳು, ಸಾಮಾಜಿಕ ಒಗ್ಗಟ್ಟು, ಸಮಾನತೆ ಮತ್ತು ಭಾಗವಹಿಸುವಿಕೆಯನ್ನು ಬೆಂಬಲಿಸುತ್ತೇವೆ.

26. ನಾವು ನಮ್ಮನ್ನು ಜನ-ಕೇಂದ್ರಿತವಾದ ನಗರ ಮತ್ತು ಗ್ರಾಮೀಣಾಭಿವೃದ್ಧಿಗೆ ಬದ್ಧವಾಗಿಸಿಕೊಂಡಿದ್ದೇವೆ, ಇದು ಜಗತ್ತನ್ನು ಕಾಪಾಡುತ್ತದೆ ಮತ್ತು ವಯಸ್ಸು ಮತ್ತು ಲಿಂಗ ಪ್ರತಿಕ್ರಿಯಾಶೀಲವಾಗಿರುತ್ತದೆ. ಎಲ್ಲಾ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ತಿಳಿದುಕೊಳ್ಳಲು, ಜೊತೆಯಾಗಿ ವಾಸಿಸಲು ಅನುಕೂಲಮಾಡಲು, ಎಲ್ಲಾ ರೀತಿಯ ತಾರತಮ್ಯ ಮತ್ತು ಹಿಂಸೆಯನ್ನು ಕೊನೆಗಾಣಿಸಲು, ಪ್ರತಿಯೊಬ್ಬರನ್ನು ಮತ್ತು ಎಲ್ಲಾ ಸಮುದಾಯವನ್ನು ಸಶಕ್ತವನ್ನಾಗಿಸಲು, ಅವರ ಅರ್ಥಪೂರ್ಣ ಮತ್ತು ಪೂರ್ಣಪ್ರಮಾಣದ

ಭಾಗವಹಿಸುವಿಕೆಗೆ ಸಹಕಾರಿಯಾಗುತ್ತದೆ. ಜೊತೆಗೆ ನಾವು ಸಂಸ್ಕೃತಿಯನ್ನು ಹರಡಲು ಮತ್ತು ವೈವಿಧ್ಯತೆ ಮತ್ತು ಸಮಾನತೆಯನ್ನು ನಮ್ಮ ನಗರಗಳ ಮತ್ತು ಮಾನವನ ವಸಾಹತುಗಳ ಮನುಷ್ಯತ್ವದ ಪ್ರಮುಖ ಅಂಶಗಳೆಂದು ಗೌರವಿಸಲು ಬದ್ಧರಾಗಿದ್ದೇವೆ.

27. ಯಾರೂ ಹಿಂದುಳಿಯುವುದಿಲ್ಲ ಎಂದು ನಾವು ನಮ್ಮ ಪ್ರತಿಜ್ಞೆಯನ್ನು ಪುನರ್ ದೃಢೀಕರಿಸುತ್ತೇವೆ ಮತ್ತು ನಗರೀಕರಣ ಒದಗಿಸುವ ಹಂಚಿದ ಅವಕಾಶಗಳು ಮತ್ತು ಲಾಭಗಳನ್ನು ಎಲ್ಲಾ ವಾಸಿಗಳಿಗೂ ಸಿಗುವಂತೆ ಪ್ರಚಾರ ನೀಡಲು ನಾವು ಬದ್ಧರಾಗಿದ್ದೇವೆ. ಇಲ್ಲಿ ಔಪಚಾರಿಕ ಅಥವಾ ಅನೌಪಚಾರಿಕ ವಸತಿ ಎಂಬುದಕ್ಕಿಂತ, ಒಂದು ಉತ್ತಮ, ಗೌರವಯುತ ಮತ್ತು ಸಂಭಾವಿತ ಜೀವನ ನಡೆಸಿ, ಮನುಷ್ಯನ ಸಾಮರ್ಥ್ಯಕ್ಕೆ ತಕ್ಕ ಸಾಧನೆ ಮಾಡಬಹುದು.

28. ನಿರಾಶ್ರಿತರ, ಆಂತರಿಕವಾಗಿ ಸ್ಥಳಾಂತರವಾದವರ ಮತ್ತು ವಲಸಿಗರ ಮಾನವ ಹಕ್ಕುಗಳಿಗೆ ಸಂಪೂರ್ಣ ಗೌರವವನ್ನು ಖಚಿತಪಡಿಸಲು ನಾವು ಬದ್ಧರಾಗಿದ್ದೇವೆ. ವಲಸಿಗರ ಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ, ಅಂತಾರಾಷ್ಟ್ರೀಯ ಸಹಕಾರದ ನೆಲೆಯಲ್ಲಿ ಆತಿಥ್ಯ ನೀಡುವ ನಗರಕ್ಕೆ ಬೆಂಬಲ ನೀಡಲಾಗುತ್ತದೆ. ದೇಶದ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಂಡು, ಪಟ್ಟಣಗಳಿಗೆ ಭಾರೀ ಸಂಖ್ಯೆಯಲ್ಲಿ ಜನರು ಹೋದರೂ ನಗರಗಳು ಹಲವು ರೀತಿಯ ಸವಾಲುಗಳನ್ನು ಎದುರಿಸುತ್ತವೆ, ಇವು ನಗರ ಜೀವನಕ್ಕೆ ಗುರುತರ ಸಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳಿಗೆ ಕಾರಣವಾಗಬಹುದು. ಅಂತಾರಾಷ್ಟ್ರೀಯ ವಲಸೆ ಮತ್ತು ಜಾಗತಿಕ, ಸ್ಥಳೀಯ, ರಾಷ್ಟ್ರೀಯ ಮತ್ತು ದೇಶದೊಳಗಿನ ಅಭಿವೃದ್ಧಿಗೆ ಒಡಂಬಡಿಕೆಗಳನ್ನು ಬಲಗೊಳಿಸಬೇಕು. ಇದು ಯೋಜನೆಗೆ ಅನುಗುಣವಾಗಿ ಮತ್ತು ಸುರಕ್ಷಿತ, ನಿಯಮಬದ್ಧ ಮತ್ತು ನಿರಂತರ ವಲಸೆಯನ್ನು ಸಾಧ್ಯವಾಗಿಸುತ್ತದೆ. ಇದು ಸ್ಥಳೀಯಾಡಳಿತಕ್ಕೆ ವಲಸಿಗರಿಂದ ನಗರಗಳಿಗೆ ಧನಾತ್ಮಕ ಕೊಡುಗೆ ದೊರೆಯುವಂತಹ ಚೌಕಟ್ಟು ರೂಪಿಸಲು, ಮತ್ತು ನಗರ- ಹಳ್ಳಿಯ ವಲಸಿಗರ ನಡುವೆ ಸಂಬಂಧ ಕಲ್ಪಿಸಲು ಸಾಧ್ಯವಾಗುತ್ತದೆ.

29. ನಾವು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಆಡಳಿತಗಳ ಪಾತ್ರಮತ್ತ ಸಾರ್ವಜನಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳ ಜೊತೆ ಅವುಗಳ ಹೊಂದಾಣಿಕೆ, ಎಲ್ಲರಿಗೂ ಸಾಮಾಜಿಕ ಮತ್ತು ಮೂಲಭೂತ ಸೇವೆಗಳನ್ನು ಒದಗಿಸುವ ವೇಳ ಚೆನ್ನಾಗಿರಬೇಕು ಎಂದು ಬಯಸುತ್ತೇವೆ. ಇವುಗಳಲ್ಲಿ ವಿಕೋಪದ ವೇಳೆ ನೆರವಿಗೆ ಬರುವ ಸಮುದಾಯಗಳಲ್ಲಿ ಹೂಡಿಕೆ ಮತ್ತು ಮರುಕಳಿಸುವ ಮತ್ತು ದೀರ್ಘ ಮಾನವ ನಿರ್ಮಿತ ಸಮಸ್ಯೆಗಳಿಂದ ಬಳಲುತ್ತಿರುವರಿಗೆ ಸೂಕ್ತ ಸೇವೆಗಳ ಪ್ರಚಾರದ ಕುರಿತು ನಾವು ಬದ್ಧರಾಗಿದ್ದೇವೆ. ನಗರದ ವ್ಯವಸ್ಥೆಯಲ್ಲಿ ಸಮಸ್ಯೆಗೊಳಗಾದ ವ್ಯಕ್ತಿಗಳೊಂದಿಗೆ ಯೋಗ್ಯ ಮತ್ತು ಉತ್ಪಾದಕ ಕೆಲಸ ಮಾಡಿದವರಿಗೆ ಅವಕಾಶ ಮತ್ತು ವಸತಿ, ಸ್ಥಳೀಯ ಸಮುದಾಯ ಅಥವಾ ಆಡಳಿತದೊಂದಿಗೆ ಸೇರಿಕೊಂಡು ಸ್ಥಳೀಯ, ಬಾಳಿಕೆ ಬರುವ ಮತ್ತು ಗಂಭೀರ ಪರಿಹಾರಗಳನ್ನು ಅಭಿವೃದ್ಧಿಪಡಿಸುವುದು, ಇದೇ ವೇಳೆ ಅನುದಾನ


Surabaya, Indonesia

ಕಷ್ಟದಲ್ಲಿರುವವರನ್ನು ತಲುಪುತ್ತಿದೆ ಮತ್ತು ಆತಿಥ್ಯ ವಹಿಸಿಕೊಂಡ ಸಮುದಾಯಗಳು ಬೆಳವಣಿಗೆಯ ನಿವರ್ತನವನ್ನು ತಡೆಯುತ್ತಿವೆ ಎಂದು ಖಚಿತಪಡಿಸಿಕೊಳ್ಳಿ.

30. ನಾವು, ಶಸ್ತ್ರಾಸ್ತ್ರ ಸಂಘರ್ಷದಲ್ಲಿ ಸರ್ಕಾರ ಮತ್ತು ನಾಗರಿಕ ಸಮಾಜದ ಸಹಾಯಕ್ಕೆ ಅಗತ್ಯವಿರುವ ಪುನಶ್ಚೇತನಗೊಳ್ಳಬಲ್ಲ ನಗರದ ಸೇವೆಗಳನ್ನು ಒಪ್ಪಿಕೊಳ್ಳುತ್ತೇವೆ. ನಾವು ಅಂತಾರಾಷ್ಟ್ರೀಯ ಮಾನವೀಯತೆಯ ಕಾನೂನುಗಳಿಗೆ ಸಂಪೂರ್ಣ ಗೌರವವನ್ನು ಮರುದೃಢೀಕರಿಸುವ ಅಗತ್ಯತೆಯನ್ನು ಅರ್ಥಮಾಡಿಕೊಳ್ಳುತ್ತೇವೆ.

31. ನಾವು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ವಸತಿ ಪ್ರಚಾರಮಾಡಲು ಬದ್ಧರಾಗಿದ್ದೇವೆ. ಇವು ಎಲ್ಲರಿಗೂ ಗುಣಮಟ್ಟದ ಬದುಕು ನಡೆಸುವ ಭಾಗವಾಗಿ, ಸೂಕ್ತವಾದ ವಸತಿ ಹೊಂದುವ ಹಕ್ಕಿನ ಭಾಗವಾಗಿ ಎಲ್ಲರೂ ತಮ್ಮ ಹಕ್ಕನ್ನು ಪ್ರಗತಿಪರವಾಗಿ ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತವೆ. ಇದು ತಾರತಮ್ಯಗಳು, ಹಿಂಸೆ ಮತ್ತು ಅನಿಯಂತ್ರಿತ ಬಲವಂತದ ಒಕ್ಕಲೆಬ್ಬಿಸುವಿಕೆ ತಡೆಯಲು, ಮನೆಯಿಲ್ಲದ ಜನರ ಅಗತ್ಯತೆಗಳತ್ತ ಗಮನ, ಕಷ್ಟದಲ್ಲಿರುವವರು, ಕಡಿಮೆ ಆದಾಯದ ಗುಂಪುಗಳು, ನ್ಯೂನತೆಯಿರುವವರತ್ತ ಗಮನಹರಿಸುವಿಕೆ, ನೀತಿಗಳ ರೂಪಿಸುವಿಕೆ ಮತ್ತು ಜಾರಿಯಲ್ಲಿ ಸಮುದಾಯಗಳ ಮತ್ತು ಪ್ರಸ್ತುತ ಪಾಲುದಾರರ ಪಾಲ್ಗೊಳ್ಳುವಿಕೆಯನ್ನು ಸಾಧ್ಯವಾಗಿಸುವುದು, ಇದರಲ್ಲಿ ರಾಷ್ಟ್ರೀಯ ಶಾಸನ ಮತ್ತು ಗುಣಮಟ್ಟಕ್ಕೆ ಅನುಗುಣವಾಗಿ ವಸತಿಯ ಸಾಮಾಜಿಕ ಉತ್ಪಾದನೆಯೂ ಸೇರಿದೆ.

32. ನಾವು ಸಮಗ್ರ ಅಭಿವೃದ್ಧಿಯ ಪ್ರಚಾರ ಮತ್ತು ವಯಸ್ಸು ಹಾಗೂ ಲಿಂಗ-ಸ್ಪಂದನೆಯ ವಸತಿ ಯೋಜನೆಗಳು ಮತ್ತು ಎಲ್ಲಾ ವಿಭಾಗಗಳೆಡೆಗೂ ಮುನ್ನಡೆಯುವ ಬಗ್ಗೆ ಬದ್ಧತೆ ಹೊಂದಿದ್ದೇವೆ. ನಿರ್ದಿಷ್ಟವಾಗಿ ಉದ್ಯೋಗ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಸಾಮಾಜಿಕ ಒಗ್ಗೂಡುವಿಕೆಯ ವಿಭಾಗಗಳು, ಮತ್ತು ಸರ್ಕಾರದ ಎಲ್ಲಾ ಹಂತಗಳಲ್ಲಿ ನೀತಿಗಳು ಮತ್ತು ಸಾಕಷ್ಟು ಅವಕಾಶಗಳನ್ನು ಅಳವಡಿಸಿಕೊಳ್ಳುವ ನಡೆಗಳು, ಕಡಿಮೆ ಖರ್ಚಿನ, ಕೈಗೆಟುಕುವ, ಸಂಪನ್ಮೂಲಭರಿತ, ಸುರಕ್ಷಿತ, ಪುಟಿದೇಳಬಲ್ಲ, ಸರಿಯಾಗಿ ಜೋಡಿಸಲ್ಪಟ್ಟ ಮತ್ತು ಸೂಕ್ತ ಸ್ಥಳದಲ್ಲಿ ವಸತಿಗೆ ಆದ್ಯತೆ. ಸಾಮೀಪ್ಯತೆಯ ಅಂಶಕ್ಕೆ ವಿಶೇಷ ಗಮನ ಮತ್ತು ನಗರದ ವ್ಯಾಪ್ತಿ ಮತ್ತು ಸುತ್ತಲಿನ ಕಾರ್ಯನಿರ್ವಹಣಾ ಪ್ರದೇಶಗಳ ಜೊತೆ ಪ್ರಾದೇಶಿಕ ಸಂಬಂಧಗಳನ್ನು ಬಲಪಡಿಸುವುದು.

33. ನಾವು ವಿವಿಧ ರೀತಿಯ ಅಗತ್ಯ ವಸತಿಯ ಆಯ್ಕೆಗಳು ಮತ್ತು ಸಮಾಜದ ವಿವಿಧ ಆದಾಯ ಗುಂಪುಗಳು, ನಿರ್ಲಕ್ಷಿತ ಸಮಾಜಗಳ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಒಂದುಗೂಡುವಿಕೆ ಸದಸ್ಯರಿಗೆ ಕಡಿಮೆ ದರದಲ್ಲಿ ಮತ್ತು ಕೈಗೆಟುಕುವ ರೀತಿಯಲ್ಲಿ ಸರಬರಾಜಾಗುವುದನ್ನು ಉತ್ತೇಜಿಸಲು ಬದ್ಧರಾಗಿದ್ದೇವೆ. ಮನೆರಹಿತರು, ಸಂಕಷ್ಟದಲ್ಲಿರುವವರು ಮತ್ತು ವಿಭಾಗವನ್ನು ತಡೆಯಲು ಇದು ಬೇಕು. ಮನೆಯಿಲ್ಲದವರ ಜೀವನ ಪರಿಸ್ಥಿತಿಯನ್ನು

ಸುಧಾರಿಸಲು ನಾವು ಧನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಅವರು ಸಮಾಜದಲ್ಲಿ ಸಂಪೂರ್ಣ ಬೆರೆಯುವ ದೃಷ್ಟಿಯಿಂದ ಮತ್ತು ಸ್ವಂತ ಮನೆ ಪಡೆಯಲು, ಇದು ಅಪರಾಧವಾಗುವುದರ ವಿರುದ್ಧ ಹೋರಾಡುವುದು ಮತ್ತು ನಿರ್ಮೂಲನೆಗೊಳಿಸಲು ಯತ್ನಿಸುತ್ತೇವೆ.

34. ನಾವು, ಎಲ್ಲರಿಗೂ ನ್ಯಾಯಸಮ್ಮತ ಮತ್ತು ಕಡಿಮೆ ದರದಲ್ಲಿ ಕೈಗೆಟುಕುವ ಮೂಲ ಬೌತಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಪ್ರಚಾರಪಡಿಸಲು ಬದ್ಧರಾಗಿದ್ದೇವೆ. ಯಾವುದೇ ತಾರತಮ್ಯವಿಲ್ಲದೆ, ಕಡಿಮೆ ದರದಲ್ಲಿ ಸೇವೆಗಳು ಲಭ್ಯವಾಗುವ ಭೂಮಿ, ವಸತಿ, ಆಧುನಿಕ ಮತ್ತು ಪುನರ್ಬಳಕೆ ಮಾಡಬಹುದಾದ ಶಕ್ತಿ, ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ, ಪೌಷ್ಠಿಕ ಮತ್ತು ಬೇಕಾದಷ್ಟು ಆಹಾರ, ಕಸ ನಿರ್ವಹಣೆ, ಸಮರ್ಥ ಸಂಚಾರ, ಆರೋಗ್ಯ ರಕ್ಷಣೆ ಮತ್ತು ಕುಟುಂಬ ಯೋಜನೆ, ಶಿಕ್ಷಣ, ಸಂಸ್ಕೃತಿ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನಗಳು ಒದಗಿಸುವುದು. ನಂತರ ನಾವು, ಈ ಸೇವೆಗಳು ಮಹಿಳೆಯರ ಅಗತ್ಯತೆ ಮತ್ತು ಹಕ್ಕುಗಳಿಗೆ ಸ್ಪಂದಿಸುತ್ತವೆ, ಮಕ್ಕಳು ಮತ್ತು ಯುವಕರು, ಹಿರಿಯರು, ದೈಹಿಕ ನ್ಯೂನತೆ, ವಲಸಿಗರು, ಪ್ರದೇಶದಲ್ಲೇ ಬೆಳೆದ ಜನರು ಮತ್ತು ಸ್ಥಳೀಯ ಸಮುದಾಯಗಳು ಸರಿಯೆಂದು, ಇತರರದ್ದು ಸಂಕಷ್ಟಕರ ಪರಿಸ್ಥಿತಿ. ಹೀಗಾಗಿ, ನಾವು ನ್ಯಾಯ, ಸ್ಥಾನಿಕ, ಸಾಮಾಜಿಕ-ಆರ್ಥಿಕ ಮತ್ತು ದೈಹಿಕ ಅಡೆತಡೆಗಳನ್ನು ಕಡಿಮೆ ಮಾಡಲು ಪ್ರೋತ್ಸಾಹಿಸುತ್ತೇವೆ.

35. ನಾವು, ಸರ್ಕಾರದ ಸೂಕ್ತ ಹಂತದಲ್ಲಿ, ಸರ್ಕಾರ ಮತ್ತು ಉಪರಾಷ್ಟ್ರವೂ ಸೇರಿದಂತೆ, ಎಲ್ಲರಿಗೂ ಭದ್ರತೆಯ ಕಾಲಾವಧಿಯನ್ನು ಹೆಚ್ಚಿಸಲು ಬದ್ಧರಾಗಿದ್ದೇವೆ. ಇದು ಕಾಲಾವಧಿ ವಿಧಾನಗಳನ್ನು ಬಹುತ್ವವನ್ನು ಗುರುತಿಸುವಿಕೆ, ವಯಸ್ಸು, ಲಿಂಗ ಹಾಗೂ ಉದ್ದೇಶಕ್ಕೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಭೂಮಿಯ ಅನಂತತೆಯೊಳಗೆ ವಾತಾವರಣ-ಸ್ಪಂದನೆಯ ಪರಿಹಾರಗಳು ಮತ್ತು ಆಸ್ತಿಯ ಹಕ್ಕುಗಳು, ಮಹಿಳೆಯರ ಸಶಕ್ತೀಕರಣಕ್ಕೆ ಅವರ ಜಾಗದ ಭದ್ರತೆಗೆ ವಿಶೇಷ ಗಮನ. ಇದರಲ್ಲಿ ಪರಿಣಾಮಕಾರಿ ಆಡಳಿತ ವ್ಯವಸ್ಥೆಯೂ ಒಂದು.

36. ನಾವು, ನಗರಗಳಲ್ಲಿ ಮತ್ತು ಮಾನವ ವಸತಿಗಳಲ್ಲಿ ಇತರರಂತೆ, ದೈಹಿಕ ನ್ಯೂನತೆಯುಳ್ಳವರಿಗೂ ಸಮಾನವಾಗಿ ಕೈಗೆಟುಕುವಂತೆ, ನಿರ್ದಿಷ್ಟವಾಗಿ ಸಾರ್ವಜನಿಕ ಸ್ಥಳಗಳಾದ ಸಾರ್ವಜನಿಕ ಸಾರಿಗೆ, ಮನೆ, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು, ಸಾರ್ವಜನಿಕ ಮಾಹಿತಿ ಮತ್ತು ಸಂವಹನ (ಮಾಹಿತಿ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ವ್ಯವಸ್ಥೆಗಳು) ಮತ್ತು ಇತರ ಸೇವೆಗಳು ಹಾಗೂ ಸೌಲಭ್ಯಗಳನ್ನು ನಗರ ಮತ್ತು ಗ್ರಾಮೀಣ ಜನರಿಗೆ ಒದಗಿಸಲು ಬದ್ಧರಾಗಿದ್ದೇವೆ.

37. ನಾವು, ಸುರಕ್ಷಿತ, ಅಂತರ್ಗತ, ಕೈಗೆಟುಕುವ, ಹಸಿರು ಮತ್ತು ಗುಣಮಟ್ಟದ ಸಾರ್ವಜನಿಕ ಅವಕಾಶಗಳು, ರಸ್ತೆಗಳೂ ಒಳಗೊಂಡಂತೆ, ಕಾಲುದಾರಿಗಳು ಮತ್ತು ಸೈಕ್ಲಿಂಗ್ ದಾರಿಗಳು, ವೃತ್ತಗಳು, ನೀರಾವರಿ ಪ್ರದೇಶಗಳು, ಉದ್ಯಾನವನ ಮತ್ತು ಕ್ರೀಡಾವನಗಳನ್ನು ಬೆಳೆಸಲು ಬದ್ಧರಾಗಿದ್ದೇವೆ. ಇವು ವಿವಿಧ ಕಾರ್ಯಚಟುವಟಿಕೆಗಳಿಕೆ ಅಡಿಪಾಯ, ಸಾಮಾಜಿಕ ಚರ್ಚೆ ಮತ್ತು ಮಾತುಕತೆ, ಒಳಗೊಳ್ಳುವಿಕೆ, ಆರೋಗ್ಯ, ಉತ್ತಮ ಜೀವನ, ಆರ್ಥಿಕ ವಿನಿಮಯ ಮತ್ತು ಸಾಂಸ್ಕೃತಿಕ ಭಾವ ಮತ್ತು ವಿವಿಧ ರೀತಿಯ ಮತ್ತು ಸಂಸ್ಕೃತಿಯ ಜನರೊಂದಿಗೆ ಸಂಭಾಷಣೆ ಮತ್ತು ಅವು ಮಾನವ ಅಭಿವೃದ್ಧಿ ಮತ್ತು ಶಾಂತಿಯುತ, ಒಳಗೊಂಡ ಮತ್ತು ಎಲ್ಲರ ಭಾಗವಹಿಸುವಿಕೆಯ ಸಮಾಜವನ್ನು ಖಚಿತಪಡಿಸುವಂತೆ ವಿನ್ಯಾಸಗೊಳಿಸಲಾಗಿದೆ ಮತ್ತು ನಿರ್ವಹಿಸಲಾಗುತ್ತಿದೆ.

38. ನಾವು, ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು, ಸ್ಪಷ್ಟವಾದ ಮತ್ತು ಅಸ್ಪಷ್ಟವಾದ ಎರಡನ್ನೂ ಸಮರ್ಥವಾಗಿ ನಿಯಂತ್ರಿಸಲು ಬದ್ಧರಾಗಿದ್ದೇವೆ. ನಗರಗಳಲ್ಲಿ ಮತ್ತು ಮಾನವ ವಸಾಹತುಗಳಲ್ಲಿ, ನಗರ ಮತ್ತು ಪ್ರಾದೇಶಿಕ ನೀತಿಗಳು ಮತ್ತು ಅಗತ್ಯ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಪ್ರಾದೇಶಿಕ ಹಂತಗಳಲ್ಲಿ, ಸಾಂಸ್ಕೃತಿಕ ಪರಂಪರೆ ಮತ್ತು ಸ್ಥಳಗಳನ್ನು, ವಸ್ತುಸಂಗ್ರಹಾಲಯಗಳ ನಿರ್ಮಾಣ, ಪ್ರದೇಶದಲ್ಲೇ ಬೆಳೆದ ಸಂಸ್ಕೃತಿ ಮತ್ತು ಭಾಷೆಗಳು, ಜೊತೆಗೆ ಶಾಸ್ತ್ರೀಯ ಜ್ಞಾನ ಮತ್ತು ಕಲೆಗಳನ್ನು ರಕ್ಷಿಸಲು, ಪುನರ್ವಸತಿ ಮತ್ತು ನಗರ ಪ್ರದೇಶಗಳಲ್ಲಿ ಯೋಜನೆಗಳ ಜಾರಿ ಮತ್ತು ಸಾಮಾಜಿಕ ಭಾಗವಹಿಸುವಿಕೆ ಮತ್ತು ನಾಗರಿಕತೆಯ ಬಳಕೆಗೆ ಬದ್ಧರಾಗಿದ್ದೇವೆ.

39. ನಾವು ಸುರಕ್ಷಿತ, ಆರೋಗ್ಯಕರ, ಎಲ್ಲರನ್ನೂ ಒಳಗೊಂಡ ಮತ್ತು ನಗರಗಳಲ್ಲಿ ಮತ್ತು ಮಾನವ ವಸಾಹತುಗಳಲ್ಲಿ ಸುರಕ್ಷಿತ ಪರಿಸರವನ್ನು ಉತ್ತೇಜಿಸುವ ಬದ್ಧತೆ ಹೊಂದಿದ್ದೇವೆ. ಇದು ಎಲ್ಲರಿಗೂ ಬದುಕಲು, ಕೆಲಸ ಮಾಡಲು ಮತ್ತು ನಗರ ಜೀವನದಲ್ಲಿ ಯಾವುದೇ ಭಯ ಅಥವಾ ಬೆದರಿಕೆಯಿಲ್ಲದೆ ಪಾಲ್ಗೊಳ್ಳಲು, ಹುಡುಗಿಯರು ಮತ್ತು ಮಹಿಳೆಯರು, ಮಕ್ಕಳು ಮತ್ತು ಯುವಕರನ್ನು, ಮತ್ತು ಕಷ್ಟದಲ್ಲಿರುವ ಜನರು ನಿರ್ದಿಷ್ಟವಾಗಿ ಪರಿಣಾಮಕ್ಕೆ ಒಳಗಾಗುತ್ತಾರೆ. ನಾವು ಯುವತಿಯರು ಮತ್ತು ಮಹಿಳೆಯರು, ಮಕ್ಕಳ ವಿರುದ್ಧ ನಡೆಯುವ ಅಪಾಯಕಾರಿ ಆಚರಣೆಗಳಾದ ಬಾಲ್ಯ ಮತ್ತು ಬಲವಂತದ ಮದುವೆ ಮತ್ತು ಹೆಣ್ಣು ಭ್ರೂಣಹತ್ಯೆಗೆ ಕಡಿವಾಣ ಹಾಕಲು ಕೆಲಸ ಮಾಡುತ್ತೇವೆ.

40. ನಾವು, ನಗರಗಳ ಮತ್ತು ಮಾನವ ವಸತಿಗಳ ವೈವಿಧ್ಯತೆಯನ್ನು ಅಪ್ಪಿಕೊಳ್ಳಲು, ಸಾಮಾಜಿಕ ರಚನೆಯನ್ನು ಬಲಗೊಳಿಸಲು, ಸಂಸ್ಕೃತಿಗಳ ನಡುವಿನ ಮಾತುಕತೆ ಮತ್ತು ಅರ್ಥಮಾಡಿಕೊಳ್ಳುವಿಕೆ, ಸಹನೆ, ಪರಸ್ಪರ ಗೌರವ, ಲಿಂಗಸಮಾನತೆ, ಸಂಶೋಧನೆ, ಉದ್ಯಮಶೀಲತೆ, ಒಳಗೊಳ್ಳುವಿಕೆ, ಗುರುತು ಮತ್ತು ಸುರಕ್ಷತೆ ಮತ್ತು ಜನರ ಘನತೆ, ಇದೆಲ್ಲದರ

ಜೊತೆಗೆ ಜೀವಿಸುವಿಕೆಯ ಸೃಷ್ಟಿ ಮತ್ತು ಒಂದು ಸ್ಪಂದನಶೀಲ ನಗರದ ಆರ್ಥಿಕತೆಗೆ ಬದ್ಧರಾಗಿದ್ದೇವೆ. ಸ್ಥಳೀಯ ಸಂಸ್ಥೆಗಳು ಬೆಳೆಯುತ್ತಿರುವ ವೈವಿಧ್ಯತೆ ಮತ್ತು ಬಹುಸಂಸ್ಕೃತಿಯ ಸಮಾಜದಲ್ಲಿ ಬಹುತ್ವವನ್ನು ಮತ್ತು ಶಾಂತಿಯುತ ಸಹಬಾಳ್ವೆಯನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಲು ಬದ್ಧರಾಗಿದ್ದೇವೆ.

41. ನಾವು, ನಗರಗಳಲ್ಲಿ ಮತ್ತು ಮನುಷ್ಯನ ವಸಾಹತುಗಳಲ್ಲಿ ಸಾಂಸ್ಥಿಕ, ರಾಜಕೀಯ, ಕಾನೂನಾತ್ಮಕ ಮತ್ತು ಆರ್ಥಿಕತೆಯ ಯಾಂತ್ರಿಕ ವ್ಯವಸ್ಥೆಯನ್ನು ಉತ್ತೇಜಿಸಲು ಬದ್ಧರಾಗಿದ್ದೇವೆ. ಇದು ರಾಷ್ಟ್ರೀಯ ನೀತಿಗಳಿಗೆ ತಕ್ಕಂತೆ ಒಳಗೊಳ್ಳುವಿಕೆಯ ವೇದಿಕೆಯನ್ನು ವಿಸ್ತರಿಸುತ್ತದೆ. ಇದು ನಿರ್ಧಾರ ತೆಗೆದುಕೊಳ್ಳುವಿಕೆ, ಯೋಜನೆ ಮತ್ತು ಬೆಂಬತ್ತುವ ಪ್ರಕ್ರಿಯೆಯಲ್ಲಿ ಅರ್ಥಪೂರ್ಣವಾಗಿ ಪಾಲ್ಗೊಳ್ಳಲು ಅನುವುಮಾಡಿಕೊಡುತ್ತದೆ. ಜೊತೆಗೆ ನಾಗರಿಕ ಪಾಲ್ಗೊಳ್ಳುವಿಕೆ ಮತ್ತು ಸಹ-ಅವಕಾಶ ಮತ್ತು ಸಹ-ಉತ್ಪನ್ನದ ಅವಕಾಶಗಳನ್ನು ಹೆಚ್ಚಿಸಿದೆ.

42. ನಾವು ಉಪರಾಷ್ಟ್ರ ಮತ್ತು ಸ್ಥಳೀಯ ಸರ್ಕಾರಗಳು, ಅನುಕೂಲವಾದಂತೆ, ಎಲ್ಲಾ ಪ್ರಸ್ತುತ ಪಾಲುದಾರರ ನಡುವಿನ ಸಂಬಂಧವನ್ನು ಬಲಪಡಿಸುವಲ್ಲಿ ಅವರ ಪ್ರಮುಖ ಪಾತ್ರವನ್ನು ಪೂರ್ಣಗೊಳಿಸುವಲ್ಲಿ, ವಯಸ್ಸು ಮತ್ತು ಲಿಂಗ- ಸ್ಪಂದನೆ ದಾರಿಯ ಮೂಲಕವೂ ಸೇರಿದಂತೆ, ಸಮಾಜದ ಎಲ್ಲೆಡೆಯಿಂದ ಪ್ರಮುಖ ಕೊಡುಗೆದಾರರಿಗೆ ನಿರ್ದಿಷ್ಟ ಗಮನ ನೀಡುವುದರ ಮೂಲಕ, ಗಂಡಸರು ಮತ್ತು ಹೆಂಗಸರು, ಮಹಿಳೆಯರು, ಮಕ್ಕಳು ಮತ್ತು ಯುವಕರು, ಹಿರಿಯರು, ದೈಹಿಕ ನ್ಯೂನತೆಯುಳ್ಳವರು, ಸ್ಥಳೀಯರು, ಅಲ್ಲಿನ ಸಮುದಾಯದವರು, ನಿರಾಶ್ರಿತರು, ಆಂತರಿಕವಾಗಿ ಸ್ಥಳಾಂತರವಾದವರು ಮತ್ತು ವಲಸಿಗರು, ಅವರ ವಲಸೆಯ ಸ್ಥಿತಿಗತಿಯನ್ನು ಪರಿಗಣಿಸದೆ, ಜನಾಂಗ, ಧರ್ಮ, ಜನಾಂಗೀಯತೆ ಅಥವಾ ಸಾಮಾಜಿಕ-ಆರ್ಥಿಕ ಸ್ಥಿತಿಯ ತಾರತಮ್ಯವಿಲ್ಲದೆ ಮಾತುಕತೆಗೆ ಅವಕಾಶಗಳನ್ನು ಒದಗಿಸಲು ಬದ್ಧರಾಗಿದ್ದೇವೆ.

## ಸಮರ್ಥ ಮತ್ತು ಒಳಗೊಂಡ ನಗರಗಳ ಶ್ರೀಮಂತಿಕೆ ಮತ್ತು ಎಲ್ಲರಿಗೂ ಅವಕಾಶಗಳು

43. ನಾವು, ಆಸರೆಯಾದ, ಎಲ್ಲರನ್ನೂ ಒಳಗೊಂಡ ಮತ್ತು ಸಮರ್ಥ ಆರ್ಥಿಕ ಸುಧಾರಣೆ, ಪೂರ್ಣ ಮತ್ತು ಉತ್ಪಾದಕ ಉದ್ಯೋಗವನ್ನು ಗುರುತಿಸುತ್ತೇವೆ. ಸಮರ್ಥ ನಗರ ಮತ್ತು ಮಾನವ ವಸಾಹತು ಅಭಿವೃದ್ಧಿಯ ಮುಖ್ಯ ಅಂಶ ಎಲ್ಲರಿಗೂ ಉದ್ಯೋಗ. ಸಮರ್ಥ ನಗರ ಮತ್ತು ಮಾನವ ವಸಾಹತುಗಳು ಸಮಾನ ಅವಕಾಶಗಳನ್ನು ಪಡೆಯಬೇಕು, ಜನರು ಆರೋಗ್ಯವಾಗಿರಬೇಕು, ಉತ್ಪಾದಕತೆ, ಜನರ ಅಗತ್ಯತೆಗಳನ್ನು ಪೂರೈಸುವಷ್ಟು ಶ್ರೀಮಂತವಾಗಿರಬೇಕು.

44. ನಾವು, ನಗರದ ಲಕ್ಷಣ, ಸೌಲಭ್ಯಗಳು ಮತ್ತು ಕಟ್ಟಡ ವಿನ್ಯಾಸಗಳು ಖರ್ಚು ಮತ್ತು ಸಂಪನ್ಮೂಲ ದಕ್ಷತೆಯ ದೊಡ್ಡ ಚಾಲಕರಿದ್ದಂತೆ ಎಂಬುದನ್ನು ಗುರುತಿಸುತ್ತೇವೆ. ಇದು ಅಳತೆ

ತಕ್ಕ ಮತ್ತು ಒಗ್ಗೂಡಿದ ಅರ್ಥಶಾಸ್ತ್ರದಿಂದ ಮತ್ತು ಶಕ್ತಿಯ ದಕ್ಷತೆ, ಪುನರ್ಬಳಕೆ ಮಾಡಬಹುದಾದ ಶಕ್ತಿ, ಸ್ಥಿತಿಗೆ ಮರಳುವ, ಉತ್ಪಾದಕತೆ, ವಾತಾವರಣದ ರಕ್ಷಣೆ ಮತ್ತು ನಗರದ ಆರ್ಥಿಕತೆಯಲ್ಲಿ ಸಮರ್ಥ ಬೆಳವಣಿಗೆಯಿಂದ ಸಾಧ್ಯವಾಗುತ್ತದೆ.

45. ನಾವು, ವೈವಿಧ್ಯಮಯ, ಅಂತರ್ವರ್ಧಕ ಸಾಮರ್ಥ್ಯ, ಸ್ಪರ್ಧಾತ್ಮಕ ಲಾಭಗಳು, ಸಾಂಸ್ಕೃತಿಕ ವೈಭವ ಮತ್ತು ಸ್ಥಳೀಯ ಸಂಪನ್ಮೂಲಗಳು, ಸಂಪನ್ಮೂಲಯುಕ್ತ ಮತ್ತು ಹೊಂದಿಕೊಳ್ಳುವ ಮೂಲಸೌಕರ್ಯಗಳ ಮೇಲೆ ಸಮರ್ಥ ಮತ್ತು ಎಲ್ಲರನ್ನೂ ಒಳಗೊಂಡ ನಗರ ಆರ್ಥಿಕತೆಯನ್ನು ಬೆಳೆಸಲು ಬದ್ಧರಾಗಿದ್ದೇವೆ. ಸಮರ್ಥ ಮತ್ತು ಒಳಗೊಂಡ ಕೈಗಾರಿಕ ಅಭಿವೃದ್ಧಿ ಮತ್ತು ಸಮರ್ಥ ಬಳಕೆ ಮತ್ತು ಉತ್ಪಾದನಾ ವಿಧಾನಗಳು ಮತ್ತು ವ್ಯವಹಾರದ ಅಭಿವೃದ್ಧಿಗೆ ಪೂರಕವಾದ ವಾತಾವರಣದ ಉತ್ತೇಜನ, ಸಂಶೋಧನೆ, ಜೊತೆಗೆ ಜೀವನೋಪಾಯಗಳ ಉತ್ತೇಜನೆ.

46. ನಾವು, ಕೈಗೆಟುಕುವ ಮತ್ತು ಸಮರ್ಥ ವಸತಿ ಮತ್ತು ಮನೆಗೆ ಹಣಕಾಸಿನ ಪಾತ್ರವನ್ನು ಉತ್ತೇಜಿಸಲು ಬದ್ಧರಾಗಿದ್ದೇವೆ. ಇದರಲ್ಲಿ ವಾಸಸ್ಥಾನಗಳ ಉತ್ಪಾದನೆ, ಆರ್ಥಿಕ ಅಭಿವೃದ್ಧಿ, ಮತ್ತು ಇತರ ಕ್ಷೇತ್ರಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಈ ಕ್ಷೇತ್ರದ ಕೊಡುಗೆ, ವಸತಿ ಬಂಡವಾಳ ರಚನೆಯನ್ನು ಹೆಚ್ಚಿಸುವುದು, ಆದಾಯ, ಉದ್ಯೋಗ ಸೃಷ್ಟಿಸುವುದು ಮತ್ತು ಉಳಿತಾಯ ಮತ್ತು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದಲ್ಲಿ ಸಮರ್ಥ ಮತ್ತು ಒಳಗೊಂಡ ಆರ್ಥಿಕ ಬದಲಾವಣೆಯ ಚಾಲನೆಗೆ ಕೊಡುಗೆ ನೀಡುವುದು ಸೇರುತ್ತದೆ.

47. ನಾವು, ಸ್ಥಳೀಯ ಆರ್ಥಿಕ ಅಭಿವೃದ್ಧಿಗೆ ಬೆಂಬಲವಾಗಿ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಸರಿಯಾದ ಕ್ರಮ ಕೈಗೊಳ್ಳಲು ಬದ್ಧರಾಗಿರುವುದು. ಒಗ್ಗಟ್ಟು ಸೃಷ್ಠಿ, ಸಹಕಾರ, ಹೊಂದಾಣಿಕೆ ಮತ್ತು ಸರ್ಕಾರದ ವಿವಿಧ ಹಂತಗಳಲ್ಲಿ, ಕಾರ್ಯನಿರ್ವಹಣೆಯ ಕ್ಷೇತ್ರಗಳು ಮತ್ತು ಪ್ರಸ್ತುತ ಪಾಲುದಾರರ ಜೊತೆ ಮಾತುಕತೆಯೂ ಸೇರಿದೆ.

48. ನಾವು ಪರಿಣಾಮಕಾರಿ ಭಾಗವಹಿಸುವಿಕೆ ಮತ್ತು ಎಲ್ಲಾ ಪ್ರಸ್ತುತ ಪಾಲುದಾರರೊಂದಿಗೆ ಸಹಭಾಗಿತ್ವವನ್ನು ಪ್ರೋತ್ಸಾಹಿಸುತ್ತೇವೆ. ಇದು ಸ್ಥಳೀಯ ಸರ್ಕಾರ, ಖಾಸಗಿ ವಲಯ ಮತ್ತು ನಾಗರೀಕ ಸಮಾಜ, ಮಹಿಳೆಯರು, ಯುವಕರನ್ನು ಪ್ರತಿನಿಧಿಸುವ ಸಂಘಟನೆಗಳು, ನ್ಯೂನತೆಗಳನ್ನು ಹೊಂದಿರುವವರನ್ನು ಪ್ರತಿನಿಧಿಸುವವರು, ಸ್ಥಳೀಯರು, ವೃತ್ತಿಪರರು, ವಿದ್ಯಾ ಸಂಸ್ಥೆಗಳು, ವ್ಯಾಪಾರ ಒಕ್ಕೂಟಗಳು, ಉದ್ಯೋಗದಾತರ ಒಕ್ಕೂಟಗಳು, ವಲಸಿಗರ ಒಕ್ಕೂಟಗಳು ಮತ್ತು ಸಾಂಸ್ಕೃತಿಕ ಸಂಘಟನೆಗಳನ್ನೂ ಸೇರಿದೆ. ನಗರದ ಆರ್ಥಿಕ ಅಭಿವೃದ್ಧಿಯಲ್ಲಿ ಅವಕಾಶಗಳನ್ನು ಗುರುತಿಸಲು ಮತ್ತು ಇರುವ ಹಾಗೂ ಎದುರಾಗುತ್ತಿರುವ ಸವಾಲುಗಳನ್ನು ಗುರುತಿಸುವುದು ಮತ್ತು ಪರಿಹರಿಸುವುದನ್ನೂ ಸೇರಿದೆ.

49. ನಾವು ನಗರ ಮತ್ತು ಹಳ್ಳಿಯ ಕಾರ್ಯವಿರ್ವಹಣೆಯನ್ನು ರಾಷ್ಟ್ರೀಯ ಮತ್ತು ಉಪರಾಷ್ಟ್ರೀಯ ಪ್ರದೇಶದ ಚೌಕಟ್ಟಿಗೆ, ನಗರಗಳು ಮತ್ತು ಮಾನವ ವಸತಿ ಪ್ರದೇಶದ ವ್ಯವಸ್ಥೆಗೆ ಬೆಸೆಯುವ ಪ್ರಾದೇಶಿಕ ಪದ್ಧತಿಗಳನ್ನು ಬೆಂಬಲಿಸಲು ಬದ್ಧರಾಗಿದ್ದೇವೆ. ಹೀಗೆ ಸಮರ್ಥ ನಿರ್ವಹಣೆ, ನೆಲ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯನ್ನು ಉತ್ತೇಜಿಸುವಿಕೆ, ವಿಶ್ವಾಸಾರ್ಹ ಪೂರೈಕೆ ಮತ್ತು ನಗರ ಮತ್ತು ಗ್ರಾಮೀಣ ಪ್ರದೇಶದ ಬೇಡಿಕೆ ಮತ್ತು ಪೂರೈಕೆಯನ್ನು ಜೋಡಿಸುವ ಮೌಲ್ಯ ಸರಣಿಯನ್ನು ಖಚಿತಪಡಿಸುವಿಕೆ, ಸಾಮಾಜಿಕ, ಆರ್ಥಿಕ ಮತ್ತು ಪ್ರಾದೇಶಿಕ ಅವಕಾಶಗಳನ್ನು ತುಂಬುವುದು.

50. ನಾವು, ನಗರ-ಗ್ರಾಮೀಣ ಸಂವಹಣಗಳನ್ನು ಮತ್ತು ಸಮರ್ಥ ಸಾರಿಗೆ ಮತ್ತು ಸಂಚಾರವನ್ನು ಬಲಪಡಿಸುವ ಮೂಲಕ ಜೋಡಣೆ, ಮತ್ತು ತಂತ್ರಜ್ಞಾನ ಮತ್ತು ಸಂವಹನ ನೆಟ್ ವರ್ಕ್ ಗಳು ಮತ್ತು ಮೂಲಭೂತ ಸೌಕರ್ಯಗಳನ್ನು, ಯೋಜನಾ ಸಲಕರಣೆಗಳಿಂದ ಬಲವಾಗಿ ಸಹಕರಿಸಲ್ಪಟ್ಟ, ಒಂದು ಸಮಗ್ರ ನಗರ ಮತ್ತು ಪ್ರಾದೇಶಿಕವಾಗಿ ನೀತಿಗೆ ಅನುಗುಣವಾಗಿ ಈ ವಲಯಗಳ ಉತ್ಪಾದನೆಯನ್ನು ಹೆಚ್ಚಿಸಲು, ಸಾಮಾಜಿಕ, ಆರ್ಥಿಕ ಮತ್ತು ಪ್ರಾದೇಶಿಕ ಒಗ್ಗಟ್ಟಿಗೆ, ಜೊತೆಗೆ ಸುರಕ್ಷತೆ ಮತ್ತು ವಾತಾವರಣದ ಸಮರ್ಥನೀಯತೆ. ಇದು ಅಗತ್ಯವಿದ್ದಲ್ಲಿ ನಗರಗಳು ಮತ್ತು ಅವುಗಳ ಸುತ್ತಲು, ಅರೆ-ನಗರಗಳು ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಸಂಪರ್ಕ, ಜೊತೆಗೆ ನೆಲ- ಸಮುದ್ರ ಸಂಪರ್ಕಗಳನ್ನು ಒಳಗೊಂಡಿರಬೇಕು.

51. ನಾವು, ಪ್ರಾದೇಶಿಕ ಚೌಕಟ್ಟಿನಲ್ಲಿ ನಗರಾಭಿವೃದ್ಧಿಯನ್ನು ಉತ್ತೇಜಿಸಲು ಬದ್ಧರಾಗಿದ್ದೇವೆ. ಇದು ಪ್ರಾಕೃತಿಕ ಸಂಪನ್ಮೂಲಗಳು ಮಮತ್ತು ಭೂಮಿಯ ಸಮರ್ಥ ನಿರ್ವಹಣೆಗೆ ಸಹಾಯಕವಾಗುವ ನಗರ ಯೋಜನೆ ಮತ್ತು ವಿನ್ಯಾಸ ಉಪಕರಣಗಳು ಒಳಗೊಳ್ಳುತ್ತವೆ. ಸೂಕ್ತವಾದ ಹಂಚುವಿಕೆ ಮತ್ತು ಸಾಂದ್ರತೆ, ಸಾಂಸ್ಥಿಕ ನಿಯಮಗಳು ಮತ್ತು ಜೊತೆಗಿನ ಬಳಕೆಗಳು, ತುಂಬಿಸುವ ಅಥವಾ ಯೋಜಿಸಿದ ನಗರ ವಿಸ್ತರಣಾ ತಂತ್ರಗಳು, ಅವಶ್ಯಕತೆಗೆ ತಕ್ಕಂತೆ, ಸಂಘಟಿಸುವಿಕೆ ಮತ್ತು ಹಂಚುವಿಕೆಯ ಅರ್ಥವ್ಯವಸ್ಥೆಯನ್ನು ಪ್ರಚೋದಿಸುವುದು, ಆಹಾರ ವ್ಯವಸ್ಥೆಯ ಯೋಜನೆಯನ್ನು ಬಲಪಡಿಸುವುದು ಮತ್ತು ನಗರದ ಚೇತರಿಸಿಕೊಳ್ಳುವಿಕೆ ಮತ್ತು ಪ್ರಾಕೃತಿಕ ಸಮರ್ಥನೀಯತೆ.

52. ನಾವು ಸೂಕ್ತವೆಂದು ಗಣನೆಗೆ ತೆಗೆದುಕೊಳ್ಳುವ ಪ್ರಾದೇಶಿಕ ಅಭಿವೃದ್ಧಿ ತಂತ್ರಗಾರಿಕೆಗಳಿಗೆ ಪ್ರೋತ್ಸಾಹ ನೀಡುತ್ತೇವೆ, ನಗರ ವಿಸ್ತರಣೆಗೆ ಮಾರ್ಗದರ್ಶನದ ಅಗತ್ಯತೆ, ಆದ್ಯತೆಯ ಮೇಲೆ ನಗರಗಳ ನವೀಕರಣದ ಯೋಜನೆ, ಕೈಗೆಟುವುವಿಕೆ ಮತ್ತು ಸರಿಯಾಗಿ ಜೋಡಿಸಿದ ಮೂಲಭೂತ ಸೌಕರ್ಯಗಳು ಹಾಗೂ ಸೇವೆಗಳು, ಸಮರ್ಥನೀಯ ಜನಸಂಖ್ಯೆಯ ಸಾಂದ್ರತೆ ಮತ್ತು ದೃಢ ಹೊಸ ವಿನ್ಯಾಸ, ನೆರೆಹೊರೆಯವರನ್ನು ನಗರದ ರಚನೆಗೆ ಒಗ್ಗೂಡಿಸುವಿಕೆ, ನಗರದ ಕುಸಿತ ಮತ್ತು ಮೂಲೆಗುಂಪಾಗುವಿಕೆಯನ್ನು ತಡೆಯುವುದು ಇದರಲ್ಲಿ ಸೇರಿದೆ.



Nairobi, Kenya - Eunika Sopotnicka ©

53. ನಾವು, ಸುರಕ್ಷತೆ, ಎಲ್ಲರನ್ನೂ ಒಳಗೊಳ್ಳುವಿಕೆ, ಕೈಗೆಟಕುವ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಚಾಲಕರಾಗಿ ಹಸಿರು ಮತ್ತು ಗುಣಮಟ್ಟದ ಸಾರ್ವಜನಿಕ ಪ್ರದೇಶಗಳು, ಹೆಚ್ಚಿದ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯವನ್ನು ಸೃಷ್ಟಿಸುವ ಅವುಗಳ ಸಾಮರ್ಥ್ಯವನ್ನು ಪ್ರಭಾವಶಾಲಿಯಾಗಿಸಲು, ಆಸ್ತಿ ತೆರಿಗೆಯನ್ನು ಸೇರಿಸುವುದು ಮತ್ತು ವಹಿವಾಟುಗಳಿಗೆ ಸೌಲಭ್ಯಗಳನ್ನು ಪೂರೈಸು ಮತ್ತು, ಸಾರ್ವಜನಿಕ ಹಾಗೂ ಖಾಸಗಿ ಹೂಡಿಕೆಗಳು ಮತ್ತು ಎಲ್ಲರಿಗೂ ಜೀವನಾಧಾರದ ಅವಕಾಶಗಳು.

54. ಮರುಬಳಕೆಯ ಮತ್ತು ಕೈಗೆಟುಕುವ ದರದ ಶಕ್ತಿಯ ಸೃಷ್ಟಿ ಮತ್ತು ಬಳಕೆಗೆ ನಾವು ಬದ್ಧರಾಗಿದ್ದೇವೆ. ಸಮರ್ಥನೀಯ ಮತ್ತು ದಕ್ಷ ಸಾರಿಗೆ ವ್ಯವಸ್ಥೆ ಮತ್ತು ಸೇವೆಗಳು, ಸಾಧ್ಯವಿರುವಲ್ಲಿ ಸಂಪರ್ಕದ ಲಾಭಗಳನ್ನು ಸಾಧಿಸುವುದು, ಆರ್ಥಿಕ, ವಾತಾವರಣದ ಮತ್ತು ಅನಗತ್ಯ ಸಂಚಾರದಿಂದ ಸಾರ್ವಜನಿಕ ಆರೋಗ್ಯದ ಮೇಲಾಗುವ ಪರಿಣಾಮ, ದಟ್ಟಣೆ, ವಾಯು ಮಾಲಿನ್ಯ, ನಗರದ ಬಿಸಿಯಿಂದ ದ್ವೀಪಗಳ ಮೇಲಾಗುವ ಪರಿಣಾಮ ಮತ್ತು ಗದ್ದಲ ಇವೂ ಸೇರಿವೆ. ಜನರ ಶಕ್ತಿ ಮತ್ತು ಸಂಚಾರಿ ಅಗತ್ಯತೆಗಳನ್ನು ಪೂರೈಸಲು ಗಮನಹರಿಸಲು, ನಿರ್ದಿಷ್ಟವಾಗಿ ಬಡವರು ಮತ್ತು ಅನೌಪಚಾರಿಕ ವಸಾಹತುಗಳಲ್ಲಿ ವಾಸಿಸುವವರು- ನಾವು ಬದ್ಧರಾಗಿದ್ದೇವೆ. ಮರುಬಳಕೆ ಮಾಡಬಹುದಾದ ಶಕ್ತಿಯ ದರದಲ್ಲಿ ಇಳಿಕೆ, ನಗರಗಳಿಗೆ ಮತ್ತು ಮಾನವ ವಸಾಹತುಗಳಿಗೆ ಇಂಧನ ಪೂರೈಕೆ ಧರವನ್ನು ಕಡಿಮೆ ಮಾಡಲು ಒಂದು ಪರಿಣಾಮಕಾರಿ ಸಾಧನ.

55. ನಾವು, ಬೇಕಾದಷ್ಟು, ಎಲ್ಲರನ್ನೂ ಒಳಗೊಂಡ ಮತ್ತು ಗುಣಮಟ್ಟದ ಸಾರ್ವಜನಿಕ ಸೇವೆಗಳನ್ನು ಕೈಗೆಟುವಂತೆ ಮಾಡಲು ಉತ್ತೇಜಿಸಿ ಆರೋಗ್ಯವಂತ ಸಮಾಜವನ್ನು ಪೋಷಿಸಲು ಬದ್ಧರಾಗಿದ್ದೇವೆ. ಶುದ್ಧ ಪರಿಸರ, ವಿಶ್ವ ಆರೋಗ್ಯ ಸಂಸ್ಥೆಯ ಸೂಚಿಗಳೂ ಸೇರಿದಂತೆ ಗಾಳಿಯ ಗುಣಮಟ್ಟದ ಮಾರ್ಗಸೂಚಿಯನ್ನು ಪರಿಗಣಿಸಿ ಆರೋಗ್ಯ ರಕ್ಷಣೆ ಸೇವೆಗಳು, ಸಾಮಾಜಿಕ ಸೌಕರ್ಯಗಳು ಮತ್ತು ಸೌಲಭ್ಯಗಳು, ನವಜಾತ ಶಿಶುವಿನ ಮತ್ತು ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಮಾಡಲು ವಿಶ್ವದಾದ್ಯಂತ ಲಭ್ಯವಾಗುವ ಲೈಂಗಿಕ ಮತ್ತು ಮರುಉತ್ಪಾದನೆ ಆರೋಗ್ಯ ರಕ್ಷಣೆ ಸೇವೆಗಳು ಇದರಲ್ಲಿ ಸೇರಿವೆ.

56. ನಾವು, ಆರ್ಥಿಕ ಉತ್ಪಾದನೆಯನ್ನು ಹೆಚ್ಚಿಸಲು, ಸೂಕ್ತವೆನಿಸುವಂತೆ, ಆದಾಯ ಗಳಿಸುವ ಅವಕಾಶಗಳೊಂದಿಗೆ ಕಾರ್ಮಿಕ ಶಕ್ತಿಯನ್ನು ಒದಗಿಸಿ, ಸ್ಪರ್ಧಾತ್ಮಕ ಆರ್ಥಿಕ ವ್ಯವಸ್ಥೆಗೆ ತಮ್ಮ ಕೊಡುಗೆ ನೀಡುವ ಜ್ಞಾನ, ಕೌಶಲ ಮತ್ತು ಶೈಕ್ಷಣಿಕ ವ್ಯವಸ್ಥೆಗಳಿಗೆ ನಾವು ಬದ್ಧರಾಗಿದ್ದೇವೆ. ಪೂರ್ಣಪ್ರಮಶಾಣದ ಮತ್ತು ಉತ್ಪತ್ತಿಯುಳ್ಳ ಉದ್ಯೋಗದ ಮೂಲಕ ಆರ್ಥಿಕ ಉತ್ಪತ್ತಿಯನ್ನು ಹೆಚ್ಚಿಸಲು ನಾವು ಬದ್ಧರಾಗಿದ್ದೇವೆ. ಗೌರವಯುತ ಉದ್ಯೋಗ ಮತ್ತು ನಗರಗಳಲ್ಲಿ ಹಾಗೂ ಮಾನವ ವಸಾಹತುಗಳಲ್ಲಿ ಜೀವನೋಪಾಯದ ಅವಕಾಶಗಳನ್ನು ಹೆಚ್ಚಿಸಲು ನಾವು ಬದ್ಧರಾಗಿದ್ದೇವೆ.

57. ನಾವು, ಅತ್ಯಂತ ಸೂಕ್ತವಾದ, ಪೂರ್ಣ ಮತ್ತು ಉತ್ಪಾದನಾ ಉದ್ಯೋಗ, ಮಹಿಳೆಯರು, ಯುವ ಜನಾಂಗ, ನ್ಯೂನತೆಯುಳ್ಳವರು, ಸ್ಥಳೀಯರು ಮತ್ತು ಸ್ಥಳೀಯ ಸಮುದಾಯ, ನಿರಾಶ್ರಿತರು, ಆಂತರಿಕವಾಗಿ ಸ್ಥಾನಪಲ್ಲಟಗೊಂಡವರು ಮತ್ತು ವಲಸಿಗರ, ಅದರಲ್ಲೂ ಸಂಕಷ್ಟದಲ್ಲಿರುವ ಬಡವರ ಅಗತ್ಯತೆಗಳು ಹಾಗೂ ಸಾಮರ್ಥ್ಯವನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಎಲ್ಲರಿಗೂ ಒಳ್ಳೆಯ ಕೆಲಸ ಮತ್ತು ನಗರಗಳಲ್ಲಿ ಮತ್ತು ಮಾನವ ವಸಾಹತುಗಳಲ್ಲಿ ಜೀವನಾಧಾರ ಅಂಶಗಳನ್ನು ಉತ್ತೇಜಿಸಲು ಬದ್ಧರಾಗಿದ್ದೇವೆ. ಜೊತೆಗೆ ನ್ಯಾಯಯುತ ಆದಾಯ ಗಳಿಕೆಯ ಅವಕಾಶಗಳು ಯಾವುದೇ ತಾರತಮ್ಯವಿಲ್ಲದೆ ಸಿಗುವಂತಾಗಬೇಕು.

58. ನಾವು, ವಾತಾವರಣದ ಸಾಮರ್ಥ್ಯ, ಹೂಡಿಕೆಗೆ ಉತ್ತೇಜನ, ಸಂಶೋಧನೆ ಮತ್ತು ಉದ್ಯಮಶೀಲತೆಯ ತತ್ವಗಳ ಮೇಲೆ ಆಧರಿತವಾದ ಒಂದು ಕ್ರಮಬದ್ಧವಾದ ಮತ್ತು ಜವಾಬ್ದಾರಿಯುತ ವ್ಯಾವಹಾರಿಕ ವಾತಾವರಣವನ್ನು ಸಾಧ್ಯವಾಗಿಸಲು ಉತ್ತೇಜಿಸುತ್ತೇವೆ. ನಾವು ಸ್ಥಳೀಯ ವ್ಯಾವಹಾರಿಕ ಸಮುದಾಯಗಳು ಎದುರಿಸುವ ಸವಾಲುಗಳನ್ನು, ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು ಮತ್ತು ಸಹಕಾರೋದ್ಯಮಗಳಿಗೆ ಉತ್ಪಾದನೆಯಿಂದ ಮಾರಾಟದವರೆಗೂ ಬೆಂಬಲ ನೀಡುವ ಮೂಲಕ, ಔಪಚಾರಿಕ ಮತ್ತು ಅನೌಪಚಾರಿಕ ಆರ್ಥಿಕತೆಗಳನ್ನು ನಡೆಸುವ ಮೂಲಕ ಸಮಾಜದ ನಿರ್ದಿಷ್ಟ ವ್ಯವಹಾರ ಮತ್ತು ಆರ್ಥಿಕತೆಯ ಸದೃಢತೆ ಸಾಧಿಸಲಾಗುತ್ತದೆ.

59. ನಾವು, ನಗರದ ಆರ್ಥಿಕತೆಯಲ್ಲಿ, ಅನೌಪಚಾರಿಕ ಆರ್ಥಿಕತೆಯಲ್ಲಿ ದುಡಿಯುವ ಬಡವರ ಕೊಡುಗೆ, ನಿರ್ಧಿಷ್ಟವಾಗಿ ಮಹಿಳೆಯರು, ಸಂಬಳ ಪಡೆಯದವರು, ಅಲ್ಲೇ ಬೆಳೆದವರು ಮತ್ತು ವಲಸಿಗರ ಕೊಡುಗೆಯನ್ನು ದೇಶದ ಆರ್ಥಿಕತೆಯ ಚೌಕಟ್ಟಿನಲ್ಲಿ ಪರಿಗಣಿಸಲಾಗುತ್ತದೆ. ಅವರ ಜೀವನಾಧಾರ, ಕೆಲಸದ ವಾತಾವರಣ ಮತ್ತು ಆದಾಯದ ಭದ್ರತೆ, ನ್ಯಾಯಯುತ ಮತ್ತು ಸಾಮಾಜಿಕ ರಕ್ಷಣೆ, ಕೌಶಲಗಳ ಕೈಗೆಟುವಿಕೆ, ಸಂಪತ್ತು ಮತ್ತು ಇತರ ಪೂರಕ ಸೇವೆಗಳು, ಮತ್ತು ಧ್ವನಿ ಮತ್ತು ಚಿತ್ರಣ ಉತ್ತಮಗೊಳಿಸಬೇಕು. ಕೆಲಸಗಾರರ ಮತ್ತು ಆರ್ಥಿಕ ಘಟಕಗಳ ಔಪಚಾರಿಕ ಆರ್ಥಿಕತೆಯ ಕಡೆಗಿನ ಒಂದು ಪ್ರಗತಿಪರ ಬದಲಾವಣೆಯ ಅಭಿವೃದ್ಧಿ, ಸಮತೋಲನದ ಮುನ್ನಡೆಯುವಿಕೆ, ಪ್ರೋತ್ಸಾಹಧನ ಮತ್ತು ಅನುಸರಣಾ ಕ್ರಮಗಳನ್ನು ಜೊತೆಯಾಗಿಸುವುದು ಮತ್ತು ಈಗಿರುವ ಜೀವನಾಧಾರಗಳನ್ನು ಉತ್ತೇಜಿಸುವುದು, ಉಳಿಸುವುದು, ಬೆಳೆಸುವುದು. ದೇಶದ ಕೆಲವೊಂದು ಸಂಧರ್ಭಗಳನ್ನು, ಶಾಸನ, ನೀತಿಗಳು, ಆಚರಣೆಗಳು ಮತ್ತು ಆದ್ಯತೆಗಳನ್ನು ಔಪಚಾರಿಕ ಆರ್ಥಿಕತೆಗೆ ಪರಿವರ್ತನೆಯಲ್ಲಿ ನಾವು ಗಣನೆಗೆ ತೆಗೆದುಕೊಳ್ಳುತ್ತೇವೆ.

೬೦. ನಾವು, ಪ್ರಗತಿಪರವಾಗಿ ನಗರ ಆರ್ಥಿಕತೆಯ ಪರಿವರ್ತನೆಯನ್ನು ಬೆಂಬಲಿಸುವುದು ಮತ್ತು ಉಳಿಸಿಕೊಳ್ಳಲು ಬದ್ಧರಾಗಿದ್ದೇವೆ. ಇದರಿಂದ ಗುಣಮಟ್ಟ ಸೃಷ್ಟಿಸುವುದು ವೈವಿಧ್ಯೀಕರಣದ ಮೂಲಕ ಮೌಲ್ಯವರ್ಧಿತ ವಲಯಗಳ ಮೂಲಕ ಹೆಚ್ಚಿನ ಉತ್ಪಾದನೆ, ತಾಂತ್ರಿಕವಾಗಿ ಉನ್ನತೀಕರಿಸುವುದು, ಸಂಶೋಧನೆ ಮತ್ತು ಹೊಸತನ, ಒಳ್ಳೆಯ ಮತ್ತು ಉತ್ಪಾದನಾ ಕೆಲಸಗಳಿಗೆ ಬದ್ಧರಾಗಿದ್ದೇವೆ, ಇದರ ಜೊತೆಗೆ ಇತರರಲ್ಲಿ ಸಂಸ್ಕೃತಿಯನ್ನು ಉತ್ತೇಜಿಸುವ ಮತ್ತು ಸೃಜನಾತ್ಮಕ ಕೈಗಾರಿಕೆಗಳು, ಸಮರ್ಥನೀಯ ಪ್ರವಾಸ, ಪ್ರದರ್ಶನ ಕಲೆಗಳು ಮತ್ತು ಪರಂಪರೆ ಉಳಿಸುವ ಚಟುವಟಿಕೆಗಳು.

೬೧. ನಾವು, ನಗರದ ಜನಸಂಖ್ಯೆಯನ್ನು ವಿಭಾಗಿಸಿ ಸಜ್ಜುಗೊಳಿಸಲು ಬದ್ಧರಾಗಿದ್ದೇವೆ, ಸೂಕ್ತವಾಗುವಲ್ಲಿ, ಮತ್ತು ಯುವಕರಿಗೆ ಶಿಕ್ಷಣ ಸುಲಭವಾಗುವುದನ್ನು ಉತ್ತೇಜಿಸಬೇಕು, ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ನಗರಗಳಲ್ಲಿ ಮತ್ತು ಮಾನವ ವಸಾಹತುಗಳಲ್ಲಿ ಸಂಪತ್ತನ್ನು ಹಂಚಿಕೊಳ್ಳಲು ಕೌಶಲಾಭಿವೃದ್ಧಿ ಮತ್ತು ಉದ್ಯೋಗದ ಅಗತ್ಯವಿದೆ. ಹುಡುಗರು ಮತ್ತು ಹುಡುಗಿಯರು, ಯುವಕರು, ಯುವತಿಯರು ಉತ್ತಮ ಭವಿಷ್ಯವನ್ನು ಸೃಷ್ಟಿಸಲು ಮುಖ್ಯ ಅಂಶಗಳು. ಸಶಕ್ತಗೊಂಡಾಗ ಅವು ತಮ್ಮ ಪರವಾಗಿ ಮತ್ತು ಸಮುದಾಯದ ವಾದ ಮಾಡಿಕೊಳ್ಳುವ ಅತ್ಯುತ್ತಮ ಸಾಮರ್ಥ್ಯ ಹೊಂದಿರುತ್ತವೆ. ಅವರ ಅರ್ಥಪೂರ್ಣ ಪಾಲ್ಗೊಳ್ಳುವಿಕೆ ಹೊಸ ನಗರೀಕರಣ ಅಜೆಂಡಾದ ಜಾರಿಯಲ್ಲಿ ಅಗತ್ಯ ಎಂಬ ಅವಕಾಶವನ್ನು ಖಚಿತಪಡಿಸುತ್ತದೆ.

೬೨. ನಾವು, ಇಳಿವಯಸ್ಸಿನಲ್ಲಿರುವ ಜನಸಂಖ್ಯೆಯ ಸಾಮಾಜಿಕ, ಆರ್ಥಿಕ ಮತ್ತು ಪ್ರಾದೇಶಿಕ ಒಳಾರ್ಥಗಳನ್ನು ಉದ್ದೇಶಿಸಲು ಬದ್ಧವಾಗಿದ್ದೇವೆ. ಅಗತ್ಯ ಬಿದ್ದಾಗ, ವಯಸ್ಸಾಗುವ ವಿಷಯವನ್ನು ಹೊಸ ಒಳ್ಳೆಯ, ಸ್ಥಿರ, ಎಲ್ಲವನ್ನೂ ಒಳಗೊಂಡ ಮತ್ತು ಸ್ಥಿರ ಆರ್ಥಿಕ ಬೆಳವಣಿಗೆ ಸಾಧಿಸಬಲ್ಲ ಕೆಲಸಗಳಿಗೆ ಅವಕಾಶವಾಗಿ ಬಳಸಿಕೊಳ್ಳುವುದು. ಇದೇ ವೇಳೆ ನಗರ ಪ್ರದೇಶದ ಜನರ ಜೀವನ ಗುಣಮಟ್ಟ ಉತ್ತಮಗೊಳ್ಳುತ್ತಿದೆ.

## ಪರಿಸರದಲ್ಲಿ ಸಮರ್ಥನೀಯ ಮತ್ತು ಹೊಂದಿಕೊಳ್ಳಬಲ್ಲ ನಗರಾಭಿವೃದ್ಧಿ

೬೩. ನಾವು, ನಗರಗಳು ಮತ್ತು ಮಾನವ ವಸಾಹತುಗಳು ಅಸಮರ್ಥ ಬಳಕೆ ಮತ್ತು ತಯಾರಿಕಾ ವಿಧಾನಗಳು, ಜೀವವೈವಿಧ್ಯದ ನಾಶ, ಪರಿಸರ ವ್ಯವಸ್ಥೆಯಿಂದ ಒತ್ತಡ, ಪರಿಸರ ಮಾಲಿನ್ಯ ಮೊದಲಾದವುಗಳಿಂದ ಬೆದರಿಕೆಗಳನ್ನು ಎದುರಿಸುತ್ತಿರುವುದನ್ನು ಗಮನಿಸಿದ್ದೇವೆ. ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ವಿಕೋಪಗಳು, ಹವಾಮಾನ ವೈಪರೀತ್ಯ ಮತ್ತು ಸಂಬಂಧಿತ ಅಪಾಯಗಳು, ಬಡತನ ಹೋಗಲಾಡಿಸುವ ನಿರ್ಲಕ್ಷಿತ ಕ್ರಮಗಳು ಮತ್ತು ಸ್ಥಿರ ಅಭಿವೃದ್ಧಿ ಸಾಧಿಸಲು ವಿವಿಧ ಕ್ರಮಗಳು, ನಗರಗಳ ಜನಸಂಖ್ಯೆಯ ಪ್ರವೃತ್ತಿ, ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಅವುಗಳ ಪಾತ್ರ, ಹವಾಮಾನ ವೈಪರೀತ್ಯಕ್ಕೆ ಸಂಬಂಧಿಸಿದಂತೆ


Abu Dhabi, United Arab Emirates

ಒಪ್ಪಿಕೊಳ್ಳಬಹುದಾದ ಮತ್ತು ಕಡಿಮೆಗೊಳಿಸಲು ಕ್ರಮಗಳು, ಪರಿಸರ ವ್ಯವಸ್ಥೆ ಮತ್ತು ಸಂಪನ್ಮೂಲಗಳ ಬಳಕೆ, ಅವುಗಳನ್ನು ಯೋಜಿಸಿದ, ಆರ್ಥಿಕ ನೆರವು ನೀಡಿದ, ಅಭಿವೃದ್ಧಿಪಡಿಸಿದ, ಕಟ್ಟಿದ, ಆಳಿದ ಮತ್ತು ನಿರ್ವಹಿಸಿದ ರೀತಿ ಅವುಗಳ ಹೊಂದಿಕೊಳ್ಳುವಿಕೆಯ ಮೇಲೆ, ನಗರದ ಹೊರಗೂ ನೇರ ಪರಿಣಾಮ ಬೀರುತ್ತದೆ.

64. ನಾವು, ವಿಶ್ವದಾದ್ಯಂತ ನಗರದ ಕೇಂದ್ರಗಳು, ವಿಶೇಷವಾಗಿ ಬೆಳೆಯುತ್ತಿರುವ ದೇಶಗಳು, ಹೆಚ್ಚಾಗಿ ಅವುಗಳನ್ನು ಮತ್ತು ಅವುಗಳ ವಾಸಿಗಳ ಸ್ಥಿತಿಯನ್ನು, ಹವಾಮಾನ ವೈಪರೀತ್ಯದ ದುಷ್ಪರಿಣಾಮದಿಂದ ಸಂಕಷ್ಟಕರವಾಗಿ ಮಾಡುತ್ತವೆ ಎಂಬುದನ್ನು ಗಮನಿಸಿದ್ದೇವೆ. ಭೂಕಂಪ, ಅತಿಯಾದ ಹವಾಮಾನ ವೈಪರೀತ್ಯಗಳು, ನೆರೆ, ಭೂಕುಸಿತ, ಬಿರುಗಾಳಿ, ದೂಳು ಮತ್ತು ಮರಳಿನ ಬಿರುಗಾಳಿ, ಬಿಸಿಗಾಳಿ, ಬರ, ನೀರು ಮತ್ತು ವಾಯು ಮಾಲಿನ್ಯ, ಇತರ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ವಿಕೋಪಗಳು, ವೈರಸ್ ನಿಂದ ಬರುವ ರೋಗಗಳು, ಸಮುದ್ರದ ಉಬ್ಬರ, ಇತರರ ಜೊತೆಗೆ, ಹೀಗೆ ಸಮುದ್ರ ತೀರವನ್ನು ಭಾಧಿಸುವ ರೋಗಗಳು, ಡೆಲ್ಟಾ ಪ್ರದೇಶಗಳು ಮತ್ತು ಚಿಕ್ಕ ದ್ವೀಪರೂಪದ ಬೆಳೆಯುತ್ತಿರುವ ದೇಶಗಳು ಸೇರಿವೆ.

65. ನಾವು ನಗರ ಪರಿಸರ ವ್ಯವಸ್ಥೆ ಮತ್ತು ಪರಿಸರಾತ್ಮಕ ಸೇವೆಗಳನ್ನು ರಕ್ಷಿಸಲು ಮತ್ತು ಹೆಚ್ಚಿಸುವ ರೀತಿಯಲ್ಲಿ ನಗರಗಳಲ್ಲಿ ಮತ್ತು ಮಾನವ ವಸಾಹತುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಮರ್ಥನೀಯ ನಿರ್ವಹಣೆಯನ್ನು ಸರಾಗಗೊಳಿಸಲು, ಹಸಿರುಮನೆ ಅನಿಲ ಉತ್ಸರ್ಜನಗಳು ಮತ್ತು ವಾಯು ಮಾಲಿನ್ಯವನ್ನು ಕಡಿಮೆ ಮಾಡಲು ಮತ್ತು ಪರಿಸರಾತ್ಮಕವಾಗಿ ಸ್ವಸ್ಥ ನಗರ ಮತ್ತು ಪ್ರಾದೇಶಿಕ ಯೋಜನೆ, ನಿರ್ಮಾಣ ಮತ್ತು ಮೂಲಭೂತ ಸೇವೆಗಳ ಮೂಲಕ ಎಲ್ಲಾ ವ್ಯಕ್ತಿಗಳ ಯೋಗಕ್ಷೇಮ ಮತ್ತು ಗುಣಮಟ್ಟದ ಜೀವನವನ್ನು ರಕ್ಷಿಸಲು ಮತ್ತು ಸಮರ್ಥನೀಯ ಆರ್ಥಿಕ ಅಭಿವೃದ್ಧಿಯನ್ನು ಪೋಷಿಸುತ್ತಿದ್ದೇವೆ, ಅವುಗಳು ಅಪಾಯ ಮಟ್ಟಗಳಿಗಾಗಿ ಸ್ಟಾಂಡರ್ಡ್ಗಳನ್ನು ಒಳಗೊಂಡು, ನೈಸರ್ಗಿಕ ಮತ್ತು ಮಾನವ-ನಿರ್ಮಿತ ಅಪಾಯಗಳಿಂದ ಉಂಟಾದ ದುರಂತ ಅಪಾಯದ ಕಾಲಾನುಸಾರ ಮೌಲ್ಯಾಂಕನಗಳು ಮತ್ತು ದುರಂತ ಅಪಾಯ ಇಳಿಕೆಯ ಕಾರ್ಯತಂತ್ರಗಳ ಅಭಿವೃದ್ಧಿಯನ್ನು ಬೆಂಬಲಿಸುವ ಮೂಲಕ ದುರಂತ ಅಪಾಯ ಇಳಿಕೆ ಮತ್ತು ನಿರ್ವಹಣೆಯನ್ನು ಹೆಚ್ಚಿಸುತ್ತೇವೆ.

66. ನಾವು ಡಿಜಿಟಲೈಜೇಶನ್, ಸ್ವಚ್ಛ ಶಕ್ತಿ ಮತ್ತು ತಂತ್ರಜ್ಞಾನಗಳಿಂದ ಹಾಗೂ ನವೀನ ಸಾರಿಗೆ ತಂತ್ರಜ್ಞಾನಗಳಿಂದ ಅವಕಾಶಗಳ ಬಳಕೆಯನ್ನು ಮಾಡುವ ಸ್ಮಾರ್ಟ್-ಸಿಟ್ ಪ್ರವೇಶವನ್ನು ಅಳವಡಿಸಿಕೊಳ್ಳಲು, ಹೀಗೆ ಹೆಚ್ಚು ಪರಿಸರ ಸ್ನೇಹಿ ಆಯ್ಕೆಗಳನ್ನು ಮಾಡಲು ಮತ್ತು ಸಮರ್ಥನೀಯ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲು ಮತ್ತು ತಮ್ಮ ಸೇವಾ ನೀಡುವಿಕೆಯನ್ನು ಹೆಚ್ಚಿಸಲು ನಗರಗಳನ್ನು ಸಕ್ರಿಯವನ್ನಾಗಿಸಲು ನಮ್ಮನ್ನು ಬದ್ಧರನ್ನಾಗಿಸಿಕೊಂಡಿದ್ದೇವೆ.

67. ನಾವು, ಚೆನ್ನಾಗಿ ಜೋಡಿಸಲಾದ ಮತ್ತು ಹಂಚಲಾದ ಜಾಲಗಳನ್ನು ತೆರೆಯಲು, ಬಹುಪ್ರಯೋಜನಕಾರಿ, ಸುರಕ್ಷಿತ, ಎಲ್ಲವನ್ನೂ ಒಳಗೊಂಡ, ಕೈಗೆಟುಕುವ, ಹಸಿರಾದ-ಗುಣಮಟ್ಟದ ಸಾರ್ವಜನಿಕ ಸ್ಥಳಗಳು ಜಾಲಗಳ ರಚನೆ ಮತ್ತು ಉಸ್ತುವಾರಿಯನ್ನು ಉತ್ತೇಜಿಸಲು ನಾವು ಬದ್ಧರಾಗಿದ್ದೇವೆ. ಪ್ರವಾಹಗಳು, ಬರದ ಅಪಾಯ ಮತ್ತು ಬಿಸಿಗಾಳಿಯಂತಹ ವಿಕೋಪಗಳು ಮತ್ತು ಹವಾಮಾನ ವೈಪರೀತ್ಯದ ವೇಳೆ ನಗರಗಳ ಒಗ್ಗಿಕೊಳ್ಳುವಿಕೆಯನ್ನು ಹೆಚ್ಚಿಸಲು, ಆಹಾರದ ಭದ್ರತೆಯನ್ನು ಹೆಚ್ಚಿಸುವುದು ಮತ್ತು ಪೌಷ್ಠಿಕತೆ, ದೈಹಿಕ ಮತ್ತು ಮಾನಸಿಕ ಆರೋಗ್ಯ, ಮತ್ತು ಮನೆಯವರು ಮತ್ತು ಸುತ್ತಲಿನ ಗಾಳಿಯ ಗುಣಮಟ್ಟ, ಗದ್ದಲವನ್ನು ಕಡಿಮೆ ಮಾಡುವಿಕೆಯನ್ನು ಉತ್ತೇಜಿಸುವುದು ಮತ್ತು ನಗರಗಳಲ್ಲಿ ಮತ್ತು ಮಾನವ ವಸಾಹತುಗಳಲ್ಲಿ ಬದುಕುವ ವಾತಾವರಣ ಮತ್ತು ನಗರದ ಭೂಮೇಲ್ಮೈ ಮತ್ತು ಆದ್ಯತೆಯ ಮೇಲೆ ಸ್ಥಳೀಯ ಜೀವಿಗಳ ರಕ್ಷಣೆ,

68. ನಾವು, ನಗರಗಳ ನದಿ ಮುಖಜ ಭೂಮಿಗಳು, ಕರಾವಳಿ ಪ್ರದೇಶ, ಮತ್ತು ಪರಿಸರ ಸೂಕ್ಷ್ಮ ಪ್ರದೇಶಗಳಿಗೆ, ಅವುಗಳ ಪ್ರಾಮುಖ್ಯತೆಯನ್ನು ಎತ್ತಿತೋರಿಸಿ, ನಿರ್ದಿಷ್ಟ ಗಮನ ಕೊಡಲು ಬದ್ಧರಾಗಿದ್ದೇವೆ. ಏಕೆಂದರೆ ಇವು ಪ್ರಾಕೃತಿಕ ವ್ಯವಸ್ಥೆಗಳು ಸಾರಿಗೆ ವ್ಯವಸ್ಥೆಗೆ ಪ್ರಮುಖ ಸಂಪನ್ಮೂಲಗಳನ್ನು, ಆಹಾರ ಭದ್ರತೆ, ಆರ್ಥಿಕ ಶ್ರೀಮಂತಿಕೆ, ಪ್ರಾಕೃತಿಕ ಸೇವೆಗಳು ಮತ್ತು ಹೊಂದಿಕೊಳ್ಳುವಿಕೆಯನ್ನು ಒದಗಿಸುತ್ತವೆ. ನಾವು ನಗರದ ಸ್ಥಿರತೆಗೆ ಸಮಗ್ರ ಕ್ರಮಗಳು ಮತ್ತು ಪ್ರಾದೇಶಿಕ ಯೋಜನೆ ಮತ್ತು ಅಭಿವೃದ್ಧಿಗೆ ಬದ್ಧವಾಗಿದ್ದೇವೆ.

69. ನಾವು, ಭೂಮಿಯ ಪರಿಸರ ವಿಜ್ಞಾನ ಮತ್ತು ಸಾಮಾಜಿಕ ಕಾರ್ಯಗಳನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಬದ್ಧರಾಗಿದ್ದೇವೆ. ಕರಾವಳಿ ಪ್ರದೇಶ ಸೇರಿದಂತೆ, ಇದರಲ್ಲಿ ಪರಿಸರ ವ್ಯವಸ್ಥೆಯ ಮರುಉತ್ಪಾದನಾ ಸಾಮರ್ಥ್ಯ ಮೀರದಂತೆ, ಸಮರ್ಥ ಬಳಕೆ ಮತ್ತು ಉತ್ಪಾದನಾ ವಿಧಾನಗಳನ್ನು ಆಧರಿಸಿದ, ನಗರಗಳಿಗೆ ಮತ್ತು ಮಾನವ ವಸಾಹತುಗಳಿಗೆ ಸಹಾಯಕವಾಗುವ, ಪರಿಸರ ವ್ಯವಸ್ಥೆ-ಆಧಾರಿತ ಪರಿಹಾರಗಳು ಸೇರಿವೆ. ನಾವು, ಭೂಮಿಯ ಸಮರ್ಥ ಬಳಕೆ, ನಗರದ ವಿಸ್ತರಣೆಗಳನ್ನು, ಕುಸಿತವನ್ನು ತಪ್ಪಿಸಲು ಉತ್ತಮ ಸಾಂದ್ರತೆ ಮತ್ತು ಚೊಕ್ಕತನದೊಂದಿಗೆ ಬೆಸೆಯುವುದು, ಜೊತೆಗೆ ಭೂಮಿಯ ಬಳಕೆಯಲ್ಲಿ ಅನಗತ್ಯ ಬದಲಾವಣೆ, ಮತ್ತು ಫಲವತ್ತಾದ ಭೂಮಿ ಮತ್ತು ಸೂಕ್ಷ್ಮ ಪರಿಸರ ವ್ಯವಸ್ಥೆಯನ್ನು ಕಳೆದುಕೊಳ್ಳುವುದನ್ನು ತಡೆಯಲು ನಾವು ಬದ್ಧರು.

70. ನಾವು, ಸ್ಥಳೀಯ ಸರಕು ಮತ್ತು ಮೂಲಭೂತ ಸೇವೆಗಳು ಮತ್ತು ಸ್ಥಳೀಯ ಸಂಪನ್ಮೂಲಗಳ ಪ್ರಯೋಜನವನ್ನು ಬೆಂಬಲಿಸಲು ಬದ್ಧರಾಗಿದ್ದೇವೆ. ದೂರದ ಶಕ್ತಿಯ ಮೂಲಗಳಾದ ನೀರು, ಆಹಾರ ಮತ್ತು ವಸ್ತುಗಳನ್ನು ಅತಿಯಾದ ಅವಲಂಬನೆ ಸಮರ್ಥ ಪೂರೈಕೆಯಲ್ಲಿ ಅಡೆತಡೆಗಳು ಸೇರಿದಂತೆ ಸಮರ್ಥನೀಯತೆಯ ಸವಾಲುಗಳಿಗೆ ಕಾರಣವಾಗಬಹುದು ಎಂಬುದನ್ನು

ಗಮನಿಸಲಾಗಿದೆ. ಸ್ಥಳೀಯ ಅವಕಾಶ ಇಲ್ಲಿನವರಿಗೆ ಸಂಪನ್ಮೂಲಗಳು ದೊರೆಯುವಂತೆ ಮಾಡಬಹುದು.

71. ಭೂಮಿ, ನೀರು (ಸಾಗರ, ಸಮುದ್ರ ಮತ್ತು ಶುದ್ಧ ನೀರು), ಶಕ್ತಿ, ವಸ್ತುಗಳು, ಕಾಡುಗಳು ಮತ್ತು ಆಹಾರ ಸೇರಿದಂತೆ ಸಂಪನ್ಮೂಲಗಳ ಸಮರ್ಥ ನಿರ್ವಹಣೆ ಮತ್ತು ಬಲಪಡಿಸುವಿಕೆಗೆ ನಾವು ಬದ್ಧರಾಗಿದ್ದೇವೆ. ವಾತಾವರಣದ ಸೂಕ್ತವಾದ ನಿರ್ವಹಣೆ ಮತ್ತು ಕಸ, ವಿಷಕಾರಿ ರಾಸಾಯನಿಕಗಳು, ಗಾಳಿ ಮತ್ತು ಕಡಿಮೆ- ಆಯುಷ್ಯದ ಹವಾಮಾನ ಮಲಿನಕಾರಕಗಳು, ಹಸಿರುಮನೆ ಅನಿಲಗಳು ಮತ್ತು ಶಬ್ದ, ನಗರ-ಗ್ರಾಮೀಣ ಸಂಯೋಜನೆಯನ್ನು ಬಿಂಬಿಸುವ ರೀತಿಯಲ್ಲಿ, ಕಾರ್ಯಾಚರಣೆಯಲ್ಲಿ ಪೂರೈಕೆ ಮತ್ತು ಮೌಲ್ಯದ ಸರಪಣಿಯಲ್ಲಿ, ವಾತಾವರಣದ ಮೇಲಿನ ಪರಿಣಾಮ ಮತ್ತು ಸಮರ್ಥನೀಯತೆಯನ್ನು ಪರಿಗಣಿಸಿದಾಗ ಅದು ವರ್ತುಲ ಆರ್ಥಿಕತೆಗೆ ಹೊರಳಲು ಬಯಸುತ್ತದೆ. ಆದರೆ, ಪರಿಸರ ವ್ಯವಸ್ಥೆಯ ರಕ್ಷಣೆ, ಮರುಸೃಷ್ಟಿ, ಹೊಸ ಮತ್ತು ಮೇಲೇಳುತ್ತಿರುವ ಸವಾಲುಗಳಿಗೆ ಹೊಂದಿಕೊಳ್ಳುವಿಕೆ.

72. ದೊಡ್ಡ ಅವಧಿಯ ನಗರ ಮತ್ತು ಪ್ರಾದೇಶಿಕ ಯೋಜನಾ ಪ್ರಕ್ರಿಯೆಗಳು ಮತ್ತು ಸಮಗ್ರ ನೀರಿನ ಸಂಪನ್ಮೂಲದ ಯೋಜನೆ ಮತ್ತು ನಿರ್ವಹಣೆಯನ್ನು ಒಳಗೊಂಡ ಪ್ರಾದೇಶಿಕ ಅಭಿವೃದ್ಧಿ ಅಭ್ಯಾಸಗಳಿಗೆ ನಾವು ಬದ್ಧರಾಗಿದ್ದೇವೆ. ಪ್ರಸ್ತುತ ಪಾಲುದಾರರು ಮತ್ತು ಸಮುದಾಯಗಳ ಭಾಗವಹಿಸುವಿಕೆ ಸೇರಿದಂತ, ಸ್ಥಳೀಯ ಮತ್ತು ಪ್ರಾದೇಶಿಕ ಮಾಪನಗಳು ನಗರ-ಗ್ರಾಮೀಣ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ರೀತಿ ಮಾಡಲಾಗುತ್ತದೆ.

73. ನಗರ, ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಮರುಪೂರಣದ ಮೂಲಕ ನೀರಿನ ಉಳಿಸುವಿಕೆ ಮತ್ತು ಸಮರ್ಥ ಬಳಕೆ, ನೀರಿನ ಶುದ್ದೀಕರಣ, ನೀರಿನ ನಷ್ಟವನ್ನು ಕಡಿಮೆಗೊಳಿಸುವುದು, ನೀರಿನ ಮರುಬಳಕೆಯನ್ನು ಉತ್ತೇಜಿಸುವುದು ಮತ್ತು ಶೇಖರಣೆಯತ್ತ ಗಮನಕ್ಕೆ ನಾವು ಬದ್ಧರಾಗಿದ್ದೇವೆ. ಧಾರಣೆ ಮತ್ತು ಮರುಪೂರಣವನ್ನು ನೀರಿನ ಚಕ್ರದಲ್ಲಿ ಪರಿಗಣಿಸಲಾಗುತ್ತದೆ.

74. ವಾತಾವರಣದಲ್ಲಿ ಪ್ರಮುಖ ಕಸ ನಿರ್ವಹಣೆ ಮತ್ತು ಕಸ ಉತ್ಪತ್ತಿಯನ್ನು ನಿಯಂತ್ರಿಸುವುದು, ಪುನರ್ಬಳಕೆ ಮತ್ತು ಮರುಬಳಕೆ ಮೂಲಕ ಕಸದ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಮರುಬಳಕೆ ಮಾಡಲು ಸಾಧ್ಯವಾಗದೇ ಇದ್ದಾಗ ಕಸವನ್ನು ಶಕ್ತಿಯನ್ನಾಗಿ ಪರಿವರ್ತಿಸುವುದು ಅಥವಾ ಈ ಆಯ್ಕೆ ವಾತಾವರಣದ ಅತ್ಯುತ್ತಮ ಕೊಡುಗೆ ಎಂಬ ಮಾತಿಗೆ ನಾವು ಬದ್ಧ. ನಾವು ಸಮುದ್ರ ಮಾಲಿನ್ಯವನ್ನು ಅಭಿವೃದ್ಧಿಪಡಿಸಿದ ಕಸ ಮತ್ತು ಕರಾವಳಿ ಪ್ರದೇಶಗಳಲ್ಲಿ ವ್ಯರ್ಥ ನೀರಿನ ನಿರ್ವಹಣೆಯ ಮೂಲಕ ಕಡಿಮೆಗೊಳಿಸಲು ಬದ್ಧರಾಗಿದ್ದೇವೆ.

75. ನಾವು ಸಮರ್ಥನೀಯ, ನವೀಕರಿಸಬಹುದಾದ ಮತ್ತು ಭರಿಸಬಹುದಾದ ಶಕ್ತಿಯ ಮತ್ತು ಶಕ್ತಿ-ಸಮರ್ಥ ಕಟ್ಟಡಗಳು ಮತ್ತು ನಿರ್ಮಾಣ ಮೋಡ್ಗಳನ್ನು ಅಭಿವೃದ್ಧಿಪಡಿಸಲು ಮತ್ತು ಹಸಿರುಮನೆ ಅನಿಲ ಮತ್ತು ಕಪ್ಪು ಕಾರ್ಬನ್ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಅವಶ್ಯಕವಾದ, ಶಕ್ತಿ ರಕ್ಷಣೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಸಮುಚಿತವಾದಂತೆ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳನ್ನು ಪ್ರೋತ್ಸಾಹಿಸುವಲ್ಲಿ ಬದ್ಧರಾಗಿದ್ದು, ಸಮರ್ಥನೀಯ ಬಳಕೆ ಮತ್ತು ಉತ್ಪಾದನಾ ಮಾದರಿಗಳನ್ನು ಖಚಿತಪಡಿಸುತ್ತೇವೆ, ಹೊಸ ಸಭ್ಯ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ನೆರವಾಗುತ್ತೇವೆ, ಸಾರ್ವಜನಿಕ ಆರೋಗ್ಯವನ್ನು ಹೆಚ್ಚಿಸುತ್ತೇವೆ ಮತ್ತು ಶಕ್ತಿ ಸರಬರಾಜಿನ ಸರಬರಾಜನ್ನು ಕಡಿಮೆ ಮಾಡುತ್ತೇವೆ.

76. ನಾವು ಕಾಂಕ್ರೀಟ್, ಲೋಹಗಳು, ಮರ, ಖನಿಜಗಳು ಮತ್ತು ಭೂಮಿಯಂತಹ ಕಚ್ಚಾ ಮತು ನಿರ್ಮಾಣ ಸಾಮಗ್ರಿಗಳ ಸಂಪನ್ಮೂಲಗಳ ದಕ್ಷತೆಯ ಮೇಲೆ ನೈಸರ್ಗಿಕ ಸಂಪನ್ಮೂಲಗಳು ಕೇಂದ್ರೀಕರಣ ಬಳಕೆಯನ್ನು ಸಮರ್ಥನೀಯವಾಗಿ ಬದ್ಧರನ್ನಾಗಿಸಿಕೊಂಡಿದ್ದೇವೆ. ನಾವು ಸುರಕ್ಷಿತ ಸಾಮಗ್ರಿಯ ರಿಕವರಿ ಮತ್ತು ಮರುಸಂಸ್ಕರಣೆ ಸೌಲಭ್ಯಗಳನ್ನು ಸ್ಥಾಪಿಸಲು, ಸಮರ್ಥನೀಯ ಮತ್ತು ಸ್ಥಿತಿಸ್ಥಾಪಕ ಕಟ್ಟಡಗಳು ಮತ್ತು ಸ್ಥಳೀಯ, ವಿಷಕಾರಿಯಲ್ಲದ ಮತ್ತು ಮರುಸಂಸ್ಕರಿಸಿದ ಸಾಮಗ್ರಿಗಳ ಮತ್ತು ಲೆಡ್-ಅಡಿಟಿವ್-ಮುಕ್ತ ಬಣ್ಣಗಳು ಮತ್ತು ಲೇಪನಗಳ ಬಳಕೆಗೆ ಆದ್ಯತೆ ನೀಡಲು ನಮ್ಮನ್ನು ಬದ್ಧರನ್ನಾಗಿಸಿಕೊಂಡಿದ್ದೇವೆ.

77. ನಾವು ಆಘಾತಗಳು ಅಥವಾ ಸುಪ್ತ ಒತ್ತಡಗಳನ್ನು ಒಳಗೊಂಡು ಅಪಾಯಗಳ ಪರಿಣಾಮಗಳಿಂದ ಸಿದ್ಧಗೊಳ್ಳಲು, ಪ್ರತಿಕ್ರಿಯಿಸಲು, ಅಳವಡಿಸಿಕೊಳ್ಳಲು ಮತ್ತು ತ್ವರಿತವಾಗಿ ಪುನಃಸ್ಥಾಪನೆಗೊಳ್ಳಲು ಕೊಳಚೆ ಪ್ರದೇಶಗಳನ್ನು ಒಳಗೊಂಡು, ಮನೆಗಳು, ಸಮುದಾಯಗಳು, ಸಂಸ್ಥೆಗಳು ಮತ್ತು ಸೇವೆಗಳನ್ನು ಸಕ್ರಿಯಗೊಳಿಸಲು, ಔಪಚಾರಿಕ ಮತ್ತು ಅನೌಪಚಾರಿಕ ವಸಾಹತುಗಳ ಅಪಾಯ-ಪೀಡಿತ ಪ್ರದೇಶಗಳಲ್ಲಿ, ದೌರ್ಬಲ್ಯತೆ ಮತ್ತು ಅಪಾಯಗಳನ್ನು ಕಡಿಮೆ ಮಾಡಲು ಎಲ್ಲಾ ಮಟ್ಟದಲ್ಲಿಯೂ ಸಮಗ್ರತೆ ಮತ್ತು ಡೇಟಾ-ಮಾಹಿತಿಯುಕ್ತ ದುರಂತ ಅಪಾಯ ಇಳಿಕೆ ಮತ್ತು ನಿರ್ವಹಣೆಯನ್ನು ಮುಖ್ಯವಾಹಿನಿಗೆ ತರುವ ಮತ್ತು 2015-2030ರ ವೇಳೆಗೆ ದುರಂತ ಅಪಾಯ ಇಳಿಕೆಗಾಗಿ ಸೈಡೈ ಚೌಕಟ್ಟಿನೊಂದಿಗೆ ಸಾಲಿನಲ್ಲಿ ಸಮಗ್ರ, ಪ್ರಾಯ ಮತ್ತು ಲಿಂಗ-ಪ್ರತಿಕ್ರಿಯಾ ನೀತಿಗಳು ಮತ್ತು ಯೋಜನೆಗಳು ಮತ್ತು ಪರಿಸರ ವ್ಯವಸ್ಥೆ-ಆಧಾರಿತ ಪ್ರವೇಶಗಳನ್ನು ಅಳವಡಿಸಿಕೊಳ್ಳುವ ಮತ್ತು ಅನುಷ್ಠಾನಕ್ಕೆ ತರುವ ಮೂಲಕ, ಗುಣಮಟ್ಟದ ನಿರ್ಮಾಣ ಪ್ರದೇಶ ಯೋಜನೆಯನ್ನು ಅಭಿವೃದ್ಧಿಪಡಿಸುವ ಮೂಲಕ ಇವುಗಳನ್ನು ಒಳಗೊಂಡು, ನಗರ ಮತ್ತು ಮಾನವ ವಸಾಹತುಗಳ ಸ್ಥಿತಿಸ್ಥಾಪಕತೆಯನ್ನು ಬಲಪಡಿಸಲು ನಮ್ಮನ್ನು ಬದ್ಧರನ್ನಾಗಿಸಿಕೊಂಡಿದ್ದೇವೆ. ನಾವು ಸ್ಥಿತಿಸ್ಥಾಪಕತೆ ಮತ್ತು ಸಂಪನ್ಮೂಲ ದಕ್ಷತೆಯಾಗಿರುವ ನಿರ್ಮಾಣದ ಅಭಿವೃದ್ಧಿಯನ್ನು ಹೆಚ್ಚಿಸುತ್ತೇವೆ ಮತ್ತು ಪುನರ್ವಸತಿ ಮತ್ತು ಕೊಳಚೆ ಪ್ರದೇಶ




Jakarta, Indonesia - AsiaTravel ©

ಮತ್ತು ಔಪಚಾರಿಕ ವಸಾಹತುಗಳ ಉನ್ನತೀಕರಣವನ್ನು ಒಳಗೊಂಡು, ದುರಂತದ ಅಪಾಯ ಮತ್ತು ಪರಿಣಾಮಗಳನ್ನು ಕಡಿಮೆ ಮಾಡುತ್ತೇವೆ. ನಾವು ಸ್ಥಳೀಯ ಪ್ರಾಧಿಕಾರಗಳು ಮತ್ತು ಸ್ಟೇಕ್ಹೋಲ್ಡರ್ಗಳ ಸಹಕಾರದೊಂದಿಗೆ, ದುರಂತಕ್ಕೆ ಇದು ಸ್ಥಿತಿಸ್ಥಾಪಕವನ್ನಾಗಿಸಲು, ಕೊಳಚೆ ಮತ್ತು ಅನೌಪಚಾರಿಕ ವಸಾಹತುಗಳನ್ನು ಒಳಗೊಂಡು, ಎಲ್ಲಾ ಅಪಾಯಕಾರಿ ಹೌಸಿಂಗ್ ಸ್ಟಾಕನ್ನು ಬಲಪಡಿಸುವುದಕ್ಕಾಗಿ ಮತ್ತು ಮರುಜೋಡಿಸುವುದಕ್ಕಾಗಿ ಮಾನದಂಡಗಳನ್ನೂ ಹೆಚ್ಚಿಸುತ್ತೇವೆ.

78. ನಾವು ಅಪಾಯಗಳನ್ನು ತಡೆಯಲು ಮತ್ತು ಸ್ಥಿತಿಸ್ಥಾಪಕತೆಯನ್ನು ಹೆಚ್ಚಿಸಲು ಅಪಾಯಗಳ ಸಾರ್ವಜನಿಕ ಅರಿವನ್ನು ಹೆಚ್ಚಿಸುವ ಮತ್ತು ಮುಂಚಿನ ಹೂಡಿಕೆಗಳಂತಹ, ಹೆಚ್ಚು ಪೂರ್ವಭಾವಿಯಾದ ಅಪಾಯ-ಆಧಾರಿತ, ಎಲ್ಲಾ-ಅಪಾಯಗಳು ಮತ್ತು ಎಲ್ಲಾ ಸಮಾಜ ಪ್ರವೇಶಗಳಿಗೆ ಪ್ರತಿಕ್ರಿಯೆಯಿಂದ ಸಾಗುವ ನೆರವಿಗೆ ನಮ್ಮನ್ನು ಬದ್ಧರಾಗಿಸಿಕೊಂಡಿದ್ದೇವೆ. ಹಾಗೆಯೇ ನೈಸರ್ಗಿಕ ಮತ್ತು ಮಾನವ-ನಿರ್ಮಿತ ದುರಂತಗಳು ಮತ್ತು ಸಂಘರ್ಷಗಳಿಂದ ಬಾಧಿತರಾದ ನಿವಾಸಿಗಳ ತಕ್ಷಣದ ಅಗತ್ಯತೆಗಳನ್ನು ಗಮನಿಸಲು ಸಕಾಲಿಕ ಮತ್ತು ಪರಿಣಾಮಕಾರಿ ಸ್ಥಳೀಯ ಪ್ರತಿಕ್ರಿಯೆಗಳನ್ನು ಖಾತರಿಪಡಿಸಿಕೊಳ್ಳುತ್ತೇವೆ. ಇದು 'ಉತ್ತಮವಾದುದನ್ನು ಮತ್ತೆ ಕಟ್ಟಿರಿ ತತ್ವಗಳನ್ನು ಸ್ಥಿತಿಸ್ಥಾಪಕತ್ವ ರಚನೆಯನ್ನು ಸಮಗ್ರಗೊಳಿಸಲು ದುರಂತ ನಂತರದ ಮರುಸ್ಥಾಪನೆ ಪ್ರಕ್ರಿಯೆಯ ಸಮಗ್ರತೆಯನ್ನು, ಪರಿಸರಾತ್ಮಕ ಮತ್ತು ಪ್ರಾದೇಶಿಕ ಮಾನದಂಡಗಳು ಮತ್ತು ಹಿಂದಿನ ದುರಂತಗಳಿಂದ ಪಾಠ ಹಾಗೂ ಹೊಸ ಅಪಾಯಗಳನ್ನು ಭವಿಷ್ಯದ ಯೋಜನೆಗೆ ಅರಿವನ್ನೂ ಒಳಗೊಳ್ಳಬೇಕು.

79. ನಾವು ಮುಖ್ಯ ಅನುಷ್ಠಾನಗಳಾಗಿ ನಗರಗಳು ಮತ್ತು ಮಾನವ ವಸಾಹತುಗಳು, ಅವುಗಳ ನಿವಾಸಿಗಳು ಮತ್ತು ಎಲ್ಲಾ ಸ್ಥಳೀಯ ಸ್ಟೇಕ್ಹೋಲ್ಡರ್ಗಳ ಪ್ರಯತ್ನಗಳನ್ನು ಬೆಂಬಲಿಸಲು, ಮತ್ತು ಹವಾಮಾನ ಬದಲಾವಣೆ ಅಳವಡಿಸಿಕೊಳ್ಳುವಿಕೆ ಮತ್ತು ಕಡಿಮೆ ಮಾಡುವಿಕೆಯನ್ನು ಒಳಗೊಂಡು, ಅಂತರರಾಷ್ಟ್ರೀಯ, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಹವಾಮಾನ ಕ್ರಮವನ್ನು ಹೆಚ್ಚಿಸಲು ನಮ್ಮನ್ನು ಬದ್ಧರನ್ನಾಗಿಸಿಕೊಂಡಿದ್ದೇವೆ. ನಾವು ಎಲ್ಲ ಸುಸಂಬದ್ಧ ವಲಯಗಳಿಂದ ಹಸಿರುಮನೆ ಅನಿಲಗಳ ಹೊರಹೊಮ್ಮುವಿಕೆಯನ್ನು ಕಡಿಮೆ ಮಾಡುವುದು ಮತ್ತು ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುವಲ್ಲಿ ನೆರವು ನೀಡಲು ನಮ್ಮನ್ನು ಬದ್ಧರನ್ನಾಗಿಸಿಕೊಂಡಿದ್ದೇವೆ. ಅಂತಹ ಮಾನದಂಡಗಳು ಪೂರ್ವ-ಕೈಗಾರಿಕಾ ಮಟ್ಟಕ್ಕಿಂತ ಹೆಚ್ಚಾಗಿ 2 ಡಿಗ್ರಿ ಸೆಲ್ಸಿಯಸ್ಗಿಂತ ಕೆಳಗೆ ಜಾಗತಿಕ ಸರಾಸರಿ ತಾಪಮಾನದಲ್ಲಿ ಹೆಚ್ಚಳವನ್ನಿಟ್ಟುಕೊಳ್ಳುವುದನ್ನು ಒಳಗೊಂಡು, ಹವಾಮಾನ ಬದಲಾವಣೆಯ ಮೇಲೆ ವಿಶ್ವಸಂಸ್ಥೆಯ ಚೌಕಟ್ಟಿನ ಕನ್ವೆನ್ಷನ್ ಅಡಿಯಲ್ಲಿ ಅಳವಡಿಸಿಕೊಂಡ ಪ್ಯಾರಿಸ್ ಒಪ್ಪಂದ ಗುರಿಗಳೊಂದಿಗೆ ನಿರಂತರತೆಯಲ್ಲಿರಬೇಕು ಮತ್ತು ಮಾಡುತ್ತಿರುವ ಪ್ರಯತ್ನಗಳು ಪೂರ್ವ-ಕೈಗಾರಿಕ ಮಟ್ಟಗಳ ಮೇಲೆ 1.5 ಡಿಗ್ರಿ ಸೆಲ್ಸಿಯಸ್ಗೆ ತಾಪಮಾನ ಹೆಚ್ಚಳವನ್ನು ಮಿತಗೊಳಿಸಿಕೊಳ್ಳಬೇಕು.

೮೦. ನಾವು ಪರಿಸರವ್ಯವಸ್ಥೆ ಆಧಾರಿತ ಅಳವಡಿಕೆಯ ಬಳಕೆಯ ಮೂಲಕ ಅದನ್ನು ಒಳಗೊಂಡು, ನಗರ ನಿವಾಸಿಗಳ ಸ್ಥಿತಿಸ್ಥಾಪಕತೆಯನ್ನು ಕಟ್ಟುವ ಅಳವಡಿಕೆ ಯೋಜನೆಗಳು, ನೀತಿಗಳು, ಪ್ರೋಗ್ರಾಂಗಳು ಮತ್ತು ಕ್ರಮಗಳನ್ನು ತಿಳಿಸಲು ಹವಾಮಾನ ದೌರ್ಬಲ್ಯತೆ ಮತ್ತು ಪರಿಣಾಮದ ಮಧ್ಯಮದಿಂದ ದೀರ್ಘಾವಧಿ ಅಳವಡಿಕೆ ಯೋಜನಾ ಪ್ರಕ್ರಿಯೆ ಹಾಗೂ ನಗರ-ಮಟ್ಟದ ಮೌಲ್ಯಾಂಕನವನ್ನು ಬೆಂಬಲಿಸಲು ಬದ್ದರನ್ನಾಗಿಸಿಕೊಂಡಿದ್ದೇವೆ.

## ಪರಿಣಾಮಕಾರಿ ಅನುಷ್ಠಾನ

೮1. ನಾವು ಹೊಸ ನಗರ ಅಜೆಂಡಾದಲ್ಲಿ ನಿಗದಿಪಡಿಸಿದ ಪರಿವರ್ತಕ ಬದ್ಧತೆಗಳ ಕಂಡುಕೊಳ್ಳುವಿಕೆಯು ಎಲ್ಲಾ ಮಟ್ಟದಲ್ಲಿಯೂ ಸರ್ಕಾರಗಳಲ್ಲಿ ಉತ್ತಮ ಪದ್ದತಿಗಳು, ನೀತಿಗಳು ಮತ್ತು ಪ್ರೋಗ್ರಾಂಗಳನ್ನು ಹಂಚಿಕೊಳ್ಳುವುದನ್ನು ಒಳಗೊಂಡು, ಸಾಮರ್ಥ್ಯ ಅಭಿವೃದ್ಧಿಯಲ್ಲಿ ಅಂತರರಾಷ್ಟ್ರೀಯ ಸಹಕಾರ ಹಾಗೂ ಪ್ರಯತ್ನಗಳ ಮೂಲಕ ಕೊಡುಗೆಗೊಳಿಸಿದ, ಅನುಷ್ಠಾನದ ಮೂಲಕ ನಗರ ಪ್ರದೇಶ ಅಭಿವೃದ್ಧಿ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆ ಯೋಜನೆ ಮತ್ತು ನಿರ್ವಹಣೆಯ ಮೂಲಕ ಸಮಗ್ರಗೊಳಿಸಲ್ಪಟ್ಟ, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟಗಳಲ್ಲಿ ನೀತಿಯ ಚೌಕಟ್ಟುಗಳನ್ನು ಸಮರ್ಥಗೊಳಿಸಲು ಅಗತ್ಯವಿರುವಿಕೆಯನ್ನು ನಾವು ಗುರುತಿಸುತ್ತೇವೆ.

೮2. ನಾವು ಹೊಸ ನಗರ ಅಜೆಂಡಾದ ಸಮರ್ಥನೀಯ, ನಗರೀಕರಣ, ಮುಖ್ಯಪ್ರವಹಿಸುವಿಕೆಯನ್ನು ಅನುಷ್ಠಾನಗೊಳಿಸಲು ಸಮಗ್ರ ಪ್ರವೇಶಕ್ಕೆ ಅನ್ವಯಿಸಲು ಅವರ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯತಂತ್ರಗಳು ಮತ್ತು ಪ್ರೋಗ್ರಾಂಗಳ ಸಹಕಾರವನ್ನು ವರ್ಧಿಸಲು, ವಿಶ್ವಸಂಸ್ಥೆ ವ್ಯವಸ್ಥೆ ಮತು ಬಹುಪಾರ್ಶ್ವಿಕ ಪರಿಸರಾತ್ಮಕ ಒಪ್ಪಂದಗಳು, ಅಭಿವೃದ್ಧಿ ಪಾಲುದಾರರು, ಅಂತರರಾಷ್ಟ್ರೀಯ ಮತ್ತು ಬಹುಪಾರ್ಶ್ವಿಕ ಹಣಕಾಸು ಸಂಸ್ಥೆಗಳು, ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕುಗಳು, ಖಾಸಗಿ ವಲಯ ಮತ್ತು ಇತರೆ ಸ್ಟೇಕ್ಹೋಲ್ಡರ್ಗಳನ್ನು ಒಳಗೊಂಡು, ಅಂತರರಾಷ್ಟ್ರೀಯ ಮತ್ತು ಪ್ರಾದೇಶಿಕ ಸಂಸ್ಥೆಗಳು ಮತ್ತು ಪ್ರಾಧಿಕಾರಗಳನ್ನು ಆಹ್ವಾನಿಸುತ್ತೇವೆ.

೮3. ಇದಕ್ಕೆ ಸಂಬಂಧಿಸಿದಂತೆ, ನಾವು ಸಮರ್ಥನೀಯ ಅಭಿವೃದ್ಧಿಗಾಗಿ 2030 ಅಜೆಂಡಾದ ಪ್ಯಾರಾ ೮೮ರಲ್ಲಿ ಒತ್ತಿಹೇಳಲಾದಂತೆ, ವ್ಯವಸ್ಥೆ-ವ್ಯಾಪಕ ಕಾರ್ಯತಂತ್ರ ಯೋಜನೆ, ಕಾರ್ಯರೂಪಗೊಳಿಸುವಿಕೆ ಮತ್ತು ವರದಿ ಮಾಡುವಿಕೆಯ ಚೌಕಟ್ಟಿನೊಳಗೆ, ಸಮರ್ಥನೀಯ ನಗರ ಅಭಿವೃದ್ಧಿಯ ವಲಯದಲ್ಲಿ ವಿಶ್ವಸಂಸ್ಥೆಯ ವ್ಯವಸ್ಥೆ-ವ್ಯಾಪಕ ಸಹಕಾರ ಮತ್ತು ಸುಸಂಬದ್ಧತೆಯನ್ನು ಹೆಚ್ಚಿಸಲು ಇರುವ ಅಗತ್ಯತೆಯನ್ನು ಒತ್ತಿಹೇಳುತ್ತೇವೆ.

84. ನಾವು ನಿರ್ದಿಷ್ಟವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಸಂಪೂರ್ಣ ಸಾಧನೆಯನ್ನು ಅಡ್ಡಿಪಡಿಸುವ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಕಾನೂನು ಮತು ಚಾರ್ಟರ್ನ ಪ್ರಕಾರವಾಗಿ ಇಲ್ಲದಿರುವ ಯಾವುದೇ ಏಕಪಕ್ಷೀಯ ಆರ್ಥಿಕತೆ, ಹಣಕಾಸು ಅಥವಾ ವ್ಯಾಪಾರ ಮಾನದಂಡಗಳನ್ನು ಪ್ರಚಾರ ಮಾಡುವ ಮತ್ತು ಅನ್ವಯಿಸುವುದರಿಂದ ತಡೆಹಿಡಿಯುವಿಕೆಗೆ ರಾಜ್ಯಗಳನ್ನು ಬಲವಾಗಿ ಪ್ರಚೋದಿಸುತ್ತೇವೆ.

## ನಗರ ರಚನೆಯನ್ನು ಕಟ್ಟುವುದು: ನೆರವು ಚೌಕಟ್ಟನ್ನು ಸ್ಥಾಪಿಸುವುದು

85. ವಿಶ್ವಸಂಸ್ಥೆಯ ಮಾನವ ವಸಾಹತು ಕಾರ್ಯಕ್ರಮದ ಆಡಳಿತ ಮಂಡಳಿಯು 2007[15] ಏಪ್ರಿಲ್ 20ರಂದು 21/3 ಹಾಗೂ 2009[16] ಏಪ್ರಿಲ್ 3ರಂದು 22/8 ನಿರ್ಣಯಗಳಲ್ಲಿ ಅಳವಡಿಸಿಕೊಂಡಿರುವ ಅಂತಾರಾಷ್ಟ್ರೀಯ ಮಾರ್ಗಸೂಚಿಯಲ್ಲಿರುವಂತೆ ವಿಕೇಂದ್ರೀಕರಣ ಹಾಗೂ ಸ್ಥಳೀಯ ಆಡಳಿತಗಳನ್ನು ಬಲಪಡಿಸುವ ಕುರಿತ ತತ್ವಗಳು, ತಂತ್ರಗಳನ್ನು ಮತ್ತು ಮೂಲಭೂತ ಸೌಕರ್ಯಗಳು ಎಲ್ಲರಿಗೂ ತಲುಪಬೇಕೆಂಬ ಆಶಯ ವನ್ನು ನಾವು ಅಂಗೀಕರಿಸುತ್ತೇವೆ.

86. ಸಮಗ್ರ ಅಭಿವೃದ್ಧಿಯ ಕಾರ್ಯತಂತ್ರಗಳು ಹಾಗೂ ಯೋಜನೆಗಳ ಭಾಗವಾಗಿ ಪ್ರಾದೇಶಿಕ ಹಾಗೂ ನಗರಾಭಿವೃ ದ್ಧಿಗಾಗಿ ನಗರ ನೀತಿಗಳಲ್ಲಿ ಹೊಸ ನಗರಗಳನ್ನು ಅಂತರ್ಗತ, ಕಾರ್ಯಗತಗೊಳಿಸುವಂಥ ನೀತಿಗಳ ಕಾರ್ಯಸೂಚಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತೇವೆ. ಇದಕ್ಕೆ ರಾಷ್ಟ್ರೀಯ, ಉಪರಾಷ್ಟ್ರೀಯ ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ನಿಯಂತ್ರಣ ಚೌಕಟ್ಟುಗಳ ಬೆಂಬಲ ಪಡೆಯುತ್ತೇವೆ. ಯೋಜನೆಗಳ ಅನುಷ್ಠಾನದ ಪ್ರತಿ ಹಂತದಲ್ಲೂ ಪಾರದರ್ಶಕತೆ ಮತ್ತು ಉತ್ತರದಾಯಿ ಹಣಕಾಸು ವ್ಯವಸ್ಥೆ ಖಾತರಿಪಡಿಸುತ್ತೇವೆ.

87. ರಾಷ್ಟ್ರೀಯ, ಉಪರಾಷ್ಟ್ರೀಯ ಹಾಗೂ ಸ್ಥಳೀಯ ಸರಕಾರಗಳ ನಡುವೆ ಬಲವಾದ ಹೊಂದಾಣಿಕೆ ಹಾಗೂ ಸಹಕಾರವನ್ನು ನಾವು ಗಳಿಸಿ ಬೆಳೆಸುತ್ತೇವೆ. ನಮ್ಮ ಸಾಮರ್ಥ್ಯ, ಸಂಪನ್ಮೂಲಗಳು ಹಾಗೂ ಉಪಕರಣಗಳ ಕುರಿತು ಪ್ರತಿ ಹಂತದ ಸರಕಾರಕ್ಕೆ ಸ್ಪಷ್ಟ ವಿವರಣೆ ನೀಡುತ್ತೇವೆ ಹಾಗೂ ಬಹುಮಟ್ಟದ ಸಮಾಲೋಚನಾ ವಿಧಾನಗಳನ್ನು ಅನುಸರಿಸುತ್ತೇವೆ.

88. ರಾಜ್ಯಾಡಳಿತದ ಎಲ್ಲ ಹಂತಗಳಲ್ಲೂ ವಲಯ ನೀತಿಗಳು, ಗ್ರಾಮೀಣಾಭಿವೃದ್ಧಿ, ಭೂಬಳಕೆ, ಆಹಾರ ಭದ್ರತೆ ಹಾಗೂ ಪೌಷ್ಟಿಕಾಂಶಗಳು, ನೈಸರ್ಗಿಸ ಸಂಪನ್ಮೂಲಗಳ ನಿರ್ವಹಣೆ,

---

15 ಸಾಮಾನ್ಯ ಸಭೆಯ ಅಧಿಕೃತ ವರದಿಗಳನ್ನು ನೋಡಿ ,ಅರುವತ್ತೆರಡನೆಯ ಅಧಿವೇಶನ ,ಪೂರಕ ಸಂ. 8 (ಎ/62/8), ಲಗತ್ತು I.

16 ಇಬಿಡ್, ಅರುವತ್ತನಾಲ್ಕನೆಯ ಅಧಿವೇಶನ, ಪೂರಕ ಸಂ. 8 (ಎ/64/8), ಲಗತ್ತು I.


Barcelona, Spain

ಸಾರ್ವಜನಿಕ ಸೇವೆಗಳ ಪೂರೈಕೆ, ನೀರು ಮತ್ತು ನೈರ್ಮಲ್ಯ, ಆರೋಗ್ಯ, ಪರಿಸರ, ಇಂಧನ, ವಸತಿ ಮತ್ತು ಚಲಮಶೀಲತೆ ನೀತಿಗಳ ಸಂಬಂಧ ಗುರಿ ಹಾಗೂ ಕ್ರಮಗಳ ನಡುವೆ ಸಮನ್ವಯತೆ ಇರುವಂತೆ ನೋಡಿಕೊಳ್ಳುತ್ತೇವೆ. ನಗರ ಮತ್ತು ಪ್ರಾದೇಶಿಕ ಯೋಜನಾತಂತ್ರಗಳ ಅನುಷ್ಠಾನಕ್ಕಾಗಿ ಹಾಗೂ ಸರಿಯಾದ ಕಾರ್ಯಕಾರಿ ಪ್ರದೇಶದಲ್ಲಿ ನಗರೀಕರಣ ಬಲಪಡಿಸಲು ಸಮಗ್ರ ವಿಧಾನಗಳ ಮೊರೆ ಹೋಗುತ್ತೇವೆ.

೮೯. ರಾಷ್ಟ್ರೀಯ ನಗರ ನೀತಿಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವಂತೆ ಸರಕಾರದ ಸಾಮರ್ಥ್ಯ ಹೆಚ್ಚಿಸಲು, ಸಮಾನತೆ ಹಾಗೂ ತಾರತಮ್ಯರಹಿತ ಕಾನೂನು ಹಾಗೂ ನೀತಿ ಚೌಕಟ್ಟುಗಳ ರಚನೆಗೆ ನಾವು ಕ್ರಮ ಕೈಗೊಳ್ಳುತ್ತೇವೆ. ಸಹಾಯಕ ನೀತಿ ಆಧಾರಕ್ಕನುಗುಣವಾಗಿ ಹಣಕಾಸು, ರಾಜಕೀಯ ಹಾಗೂ ಆಡಳಿತಾತ್ಮಕ ವಿಕೇಂದ್ರೀಕರಣ ಖಾತರಿಪಡಿಸುತ್ತೇವೆ.

೯೦. ದೇಶಗಳ ರಾಷ್ಟ್ರೀಯ ಕಾನೂನುಗಳಿಗನುಗುಣವಾಗಿ ಸ್ಥಳೀಯ ಮತ್ತು ಮಹಾನಗರಗಳ ಬಹುಹಂತದ ಆಡಳಿತವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳ ಸಾಮರ್ಥ್ಯವನ್ನು ಬಲಪಡಿಸಲು ಸಹಕರಿಸುತ್ತೇವೆ. ಆಡಳಿತಾತ್ಮಕ ಗಡಿಗಳಲ್ಲಿ, ಮತ್ತು ಕಾರ್ಯಾಚರಣೆಯ ಪ್ರದೇಶಗಳಲ್ಲಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸುತ್ತೇವೆ. ಮಹಾನಗರ, ನಗರ ಹಾಗೂ ಪ್ರಾದೇಶಿಕ ಆಡಳಿತದ ಗಂಭೀರ ಸಂಗತಿಗಳ ನಿರ್ವಹಣೆಯಲ್ಲಿ ಮೇಲುಸ್ಥರದ ಸರ್ಕಾರಗಳಿಗೆ ಅಗತ್ಯ ಸಂಪನ್ಮೂಲ, ಅಧಿಕಾರಗಳನ್ನು ನೀಡಿ ಸಹಕರಿಸುತ್ತೇವೆ. ಎಲ್ಲರನ್ನೂ ಒಳಗೊಂಡಂಥ, ಕಾನೂನು ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುವ, ವಿಶ್ವಾಸಾರ್ಹತೆಯಿಂದ ಹಣಕಾಸು ವ್ಯವಸ್ಥೆ ನಿಭಾಯಿಸುವ ಮಹಾನಗರ ಆಡಳಿತವನ್ನು ಉತ್ತೇಜಿಸುತ್ತೇವೆ. ಸ್ಥಳೀಯ ಸರಕಾರಗಳು ಸೇರಿದಂತೆ ಆಡಳಿತದ ಪ್ರತಿ ಹಂತದಲ್ಲೂ ಮಹಿಳೆಯರಿಗೆ ಸಮಾನ ಅವಕಾಶ, ಸ್ಥಾನಮಾನ, ಹಕ್ಕು, ನಿರ್ಧಾರ ತೆಗೆದುಕೊಳ್ಳುವಾಗ ಪರಿಣಾಮಕಾರಿ ಭಾಗವಹಿಸುವಿಕೆ ಇರುವಂತೆ ನೋಡಿಕೊಳ್ಳುತ್ತೇವೆ. ಇದಕ್ಕೆ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

91. ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ಆಡಳಿತಾತ್ಮಕ ಮತ್ತು ನಿರ್ವಹಣಾ ಚೌಕಟ್ಟು ರೂಪಿಸುವಾಗ ರಾಷ್ಟ್ರೀಯ ಶಾಸನಗಳು ಹಾಗೂ ನೀತಿಗಳಿಗೆ ಅನುಗುಣವಾಗಿಯೇ ಎಲ್ಲವೂ ರೂಪುಗೊಳ್ಳುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತೇವೆ. ಸಮುದಾಯಗಳು, ನಾಗರಿಕ ಸಮಾಜ ಹಾಗೂ ಖಾಸಗಿ ವಲಯಗಳೊಂದಿಗೆ ಸ್ಥಳೀಯ ಸರಕಾರಗಳು ಸಹಭಾಗಿತ್ವ ಮೂಲಭೂತ ಸೌಕರ್ಯ ಯೋಜನೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಅಗತ್ಯ ನಿಯಂತ್ರಣ ಹಾಗೂ ನಿಯಮಗಳ

ಚೌಕಟ್ಟು ರೂಪಿಸುವುದನ್ನು ಪ್ರೋತ್ಸಾಹಿಸುತ್ತೇವೆ. ಸಾರ್ವಜನಿಕ ಹಿತಾಸಕ್ತಿ ಕಾಪಾಡಿಕೊಳ್ಳಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತೇವೆ.

92. ನಗರ ಹಾಗೂ ಪ್ರಾದೇಶಿಕ ನೀತಿಗಳು ಹಾಗೂ ಯೋಜನಾ ವಿಧಾನಗಳ ಹಣಕಾಸು, ಯೋಜನೆಯ ವಿನ್ಯಾಸ ರೂಪಿಸುವಿಕೆ, ಅನುಷ್ಠಾನ, ಮೌಲ್ಯಮಾಪನ, ವಿಮರ್ಶೆ ಸೇರಿದಂತೆ ಪ್ರತಿ ಹಂತಗಳಲ್ಲೂ ಭಾಗವಹಿಸುವಿಕೆಯ ವಯಸ್ಸು ಹಾಗೂ ಲಿಂಗಾಧಾರಿತ ತಲುಪುವಿಕೆಯನ್ನು ನಾವು ಉತ್ತೇಜಿಸುತ್ತೇವೆ. ಪ್ರತಿಯೊಂದರಲ್ಲೂ ಸಮಾಜದ ಎಲ್ಲ ಸ್ಥರಗಳನ್ನು ಸರಕಾರ ನೇರವಾಗಿ ತಲುಪುವಂತೆ ಮಾಡಲು ಆಧುನಿಕ ಮಾಹಿತಿ ಹಾಗೂ ಸಂವಹನ ತಂತ್ರಜ್ಞಾನಗಳನ್ನು ಬಳಸುತ್ತೇವೆ.

93. ನಗರ ಹಾಗೂ ಪ್ರಾದೇಶಿಕ ಯೋಜನೆಯ ತತ್ವಗಳು ಹಾಗೂ ತಂತ್ರಗಳು ವಿಶ್ವಸಂಸ್ಥೆಯ ವಾಸಸ್ಥಳ ಆಡಳಿತ ಮಂಡಳಿ ಅನುಮೋದಿಸಿರುವ ಅಂತಾರಾಷ್ಟ್ರೀಯ ಗೈಡ್ಲೈನ್ಸ್ (ಏ.23, 2015[17]- 25/6ನಿರ್ಣಯ )ನಲ್ಲಿ ಇರುವುದೇ ಆಗಿವೆ ಎಂದು ನಾವು ದೃಢೀಕರಿಸುತ್ತೇವೆ.

94. ತಾತ್ಕಾಲಿಕ ಅಗತ್ಯಗಳನ್ನು ಹಾಗೂ ಧೀರ್ಘಕಾಲೀನ ನಿರೀಕ್ಷಿತ ಫಲಿತಾಂಶಳನ್ನು ಸರಿದೂಗಿಸುವಂಥ ಸಮಗ್ರ ಯೋಜನೆಯನ್ನು ನಾವು ಅನುಷ್ಠಾನ ಮಾಡುತ್ತೇವೆ. ಈ ಧೀರ್ಘಕಾಲೀನ ಗುರಿಯು ಸ್ಪರ್ಧಾತ್ಮಕ ಆರ್ಥಿಕತೆ, ಉತ್ತಮ ಜೀವನ ಗುಣಮಟ್ಟ ಹಾಗೂ ಪರಿಸರ ಉಳಿಕೆ ಒಳಗೊಂಡಿರುತ್ತದೆ. ಕಾಲಕ್ರಮದಲ್ಲಿ ಬದಲಾಗುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಿಗೆ ಹೊಂದಾಣಿಕೆಯಾಗುವಂತೆ ನಮ್ಮ ಯೋಜನೆಗಳಲ್ಲಿ ಸುಲಭವಾಗಿ ಹೊಂದಾಣಿಕೆ ಅಳವಡಿಸುವತ್ತ ಗಮನಹರಿಸುತ್ತೇವೆ. ಈ ಯೋಜನೆ ಗಳಲ್ಲಿ ಹೊಸ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಉತ್ತಮ ವಾಸಯೋಗ್ಯ ಪರಿಸರ ನಿರ್ಮಾಣದತ್ತ ಚಿತ್ತಹರಿಸಿ ವ್ಯವಸ್ಥಿತ ಅನುಷ್ಠಾನ ಕೈಗೊಳ್ಳುತ್ತೇವೆ.

95. ಸಮಗ್ರ, ಬಹುಕೇಂದ್ರಿತ ಹಾಗೂ ಸರಿತೂಗುವ ಪ್ರಾದೇಶಿಕ ಅಭಿವೃದ್ಧಿ ನೀತಿಗಳು ಹಾಗೂ ಯೋಜನೆಗಳ ಅನುಷ್ಠಾನವನ್ನು ನಾವು ಬೆಂಬಲಿಸುತ್ತೇವೆ. ವಿವಿಧ ನಗರಗಳು, ಪಟ್ಟಣಗಳು, ಉಪನಗರಗಳ ನಡುವಿನ ಪರಸ್ಪರ ಸಹಕಾರ, ಬೆಂಬಲ ಕಾಯ್ದುಕೊಂಡು ಆಹಾರ ಭದ್ರತೆ ಹೆಚ್ಚಿಸುತ್ತೇವೆ. ಎಟುಕುವಂಥ, ಗುಣಮಟ್ಟದ ಸಾಕಾಗುವಷ್ಟು ಸ್ಥಳ ಹೊಂದಿದ ಸುರಕ್ಷಿತ ವಸತಿ, ಮೂಲಸೌಕರ್ಯಗಳು ಹಾಗೂ ಸೇವೆಗಳನ್ನು ನೀಡುತ್ತೇವೆ. ನಗರ ಹಳ್ಳಿಗಳ ನಡುವೆ ವ್ಯಾಪಾರ ಸಂಬಂಧಿ ಸಂಪರ್ಕ ಸಾಧಿಸಿ ಸಣ್ಣಮಟ್ಟದ ರೈತರು, ಮೀನುಗಾರರು ಸ್ಥಳೀಯ, ಉಪರಾಷ್ಟ್ರೀಯ, ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಜಾಗತಿಕ ಮಾರುಕಟ್ಟೆಯ ಸಂಪರ್ಕಕೊಂಡಿಗಳೊಂದಿಗೆ ಬೆಸೆಯುತ್ತೇವೆ. ನಗರ ಕೃಷಿ ಹಾಗೂ ತೋಟಗಾರಿಕೆಗೆ ಬೆಂಬಲ ನೀಡುತ್ತೇವೆ.

17 ಇಬಿಡ್. ಹದಿನೇಳನೇ ಅಧಿವೇಶನ, ಪೂರಕ ಸಂಖ್ಯೆ. 8 (ಎ/70/8), ಲಗತ್ತು.




Hyderabad, Telangana, India - Ryan ©

೯೬. ನಗರ, ಮಹಾನಗರ, ಹೊರವಲಯ ಸೇರಿದಂತೆ ನಗರದ ಎಲ್ಲಾ ಸ್ಥರದ ಪ್ರದೇಶಗಳ ನಡುವೆ ಸಂಪರ್ಕವನ್ನು ಪ್ರೋತ್ಸಾಹಿಸುತ್ತೇವೆ. ಪ್ರಾದೇಶಿಕ ಮೂಲಸೌಕರ್ಯ ಯೋಜನೆಗಳ ಅಭಿವೃದ್ಧಿಯಿಂದಾಗಿ ಬಲಿಷ್ಠ ಅರ್ಥಿಕ ಉತ್ಪಾದಕತೆ ಉತ್ತೇಜಿಸಿ ಹಳ್ಳಿ ನಗರಗಳ ನಡುವಿನ ಸಮಾನ ಬೆಳವಣಿಗೆಯನ್ನು ಬೆಂಬಲಿಸುತ್ತೇವೆ. ನಗರಸಭೆ-ಪುರಸಭೆ-ಪಾಲಿಕೆ-ಗ್ರಾಮಪಂಚಾಯತ್ ನಡುವೆ ಸಹಕಾರ ವ್ಯವಸ್ಥೆ ಕಲ್ಪಿಸಿ, ಕಾರ್ಯಕಾರಿ ಪ್ರದೇಶಗಳಲ್ಲಿ ಸಾರ್ವಜನಿಕ ಸೇವೆ ಸುಸಂಬದ್ಧವಾಗಿ ಜರುಗುವಂತೆ ನೋಡಿಕೊಳ್ಳುತ್ತೇವೆ.

೯೭. ಸ್ಲಮ್ಗಳು ಹಾಗೂ ಇತರೆ ಬಡ ವಾಸಸ್ಥಳಗಳ ಉನ್ನತೀಕರಣಕಕ್ಕೆ ಯತ್ನಿಸುವ ಜೊತೆಗೆ ನಗರದ ವಿಸ್ತರಣೆ, ಮರುನವೀಕರಣ, ಇತ್ಯಾದಿ ಯೋಜನೆಗಳನ್ನು ಪ್ರೋತ್ಸಾಹಿಸುತ್ತೇವೆ. ಉತ್ತಮ ಗುಣಮಟ್ಟದ ಕಟ್ಟಡಗಳು ಹಾಗೂ ಸಾರ್ವಜನಿಕ ಸ್ಥಳಗಳನ್ನು ನಿರ್ಮಿಸಿ, ಎಲ್ಲ ಪ್ರಸ್ತುತ ಪಾಲುದಾರರು ಹಾಗೂ ನಿವಾಸಿಗಳ ಸಮಗ್ರ ಹಾಗೂ ಒಳಗೊಳ್ಳುವಿಕೆಯನ್ನು ಬೆಂಬಲಿಸುವ ಕ್ರಮಗಳನ್ನು ಕೈಗೊಳ್ಳುತ್ತೇವೆ. ಆರ್ಥಿಕ ಅಸಮಾನತೆ ತಡೆದು ಸಾಂಸ್ಕೃತಿಕ ಪರಂಪರೆ ಉಳಿಸುವತ್ತ ಗಮನ ಹರಿಸುತ್ತೇವೆ.

೯೮. ಸಮಾನ, ಸಾಮರ್ಥ್ಯವುಳ್ಳ ಹಾಗೂ ಉಳಿಕೆ ನೆಲ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಬಳಕೆ, ಬಹುಕೇಂದ್ರೀಯತೆ, ಉತ್ತಮ ಸಾರಿಗೆ ಸಂಪರ್ಕ ವ್ಯವಸ್ಥೆ, ಸ್ಥಳವೊಂದರ ಬಹೂಪಯೋಗಪಡಿಸಿಕೊಳ್ಳುವುದು ಇತ್ಯಾದಿ ತತ್ವದ ಆಧಾರದಲ್ಲಿ ನಗರ ಹಾಗೂ ಪ್ರಾದೇಶಿಕ ಸಮಗ್ರ ಯೋಜನೆಯನ್ನು ಪ್ರೋತ್ಸಾಹಿಸುತ್ತೇವೆ.

೯೯. ವೈವಿಧ್ಯತೆಯನ್ನು ಪ್ರೋತ್ಸಾಹಿಸುವ ಸಲುವಾಗಿ ತಲೆಮಾರುಗಳ ನಡುವೆ ಸಂವಹನ ಹೆಚ್ಚಿಸಿ, ಭದ್ರತೆಗೆ ಒತ್ತು ನೀಡಿ, ಸಾಮಾಜಿಕ ನ್ಯಾಯ ಒದಗಿಸುವಂಥ ಖರೀದಿಸಬಲ್ಲ ವಸತಿ ಆಯ್ಕೆಗಳನ್ನು ಎಲ್ಲರಿಗೂ ಒದಗಿಸುತ್ತೇವೆ. ನಗರ ಹಿಂಸಾಚಾರಕ್ಕೀಡಾದ ಸಮುದಾಯಕ್ಕೆ ಸೇವೆ ಒದಗಿಸುವ ವೃತತ್ತಿಪರರಿಗೆ ನಾವು ಸರಿಯಾದ ತರಬೇತಿ ಹಾಗೂ ಬೆಂಬಲ ನೀಡುತ್ತೇವೆ.

೧೦೦. ಉತ್ತಮ ವಿನ್ಯಾಸ ಹೊಂದಿದ, ಸುರಕ್ಷಿತ, ಎಟುಕಬಲ್ಲ ಹಾಗೂ ಹಸಿರಿನಿಂದ ಕೂಡಿದ ಗುಣಮಟ್ಟದ ಬೀದಿಗಳು ಹಾಗೂ ಇತರೆ ಸಾರ್ವಜನಿಕ ಸ್ಥಳಾವಕಾಶ ನಿರ್ಮಿಸಿ ಸರ್ವರಿಗೂ ಉಪಯೋಗಕಾರಿ ಯೋಜನೆಗಳನ್ನು ನಾವು ಬೆಂಬಲಿಸುತ್ತೇವೆ. ಇಂಥ ಸ್ಥಳಗಳಲ್ಲಿ ಅಪರಾಧ, ಹಿಂಸಾಚಾರ, ಲೈಂಗಿಕ ದೌರ್ಜನ್ಯ, ಲಿಂಗಾಧಾರಿತ ಹಿಂಸಾಚಾರ ಮುಂತಾದವಕ್ಕೆ ಆಸ್ಪದ ಕೊಡದಂತೆ ಕ್ರಮ ಕೈಗೊಳ್ಳುತ್ತೇವೆ. ಸ್ಥಳೀಯ ಮಾರುಕಟ್ಟೆಗಳು ಹಾಗೂ ವಾಣಿಜ್ಯೋದ್ಯಮಗಳನ್ನು ಬೆಳೆಸಿ, ಲಾಭರಹಿತ ಸಮುದಾಯ ಕಲ್ಯಾಣ ಯೋಜನೆ ಕೈಗೊಳ್ಳುತ್ತೇವೆ. ಜನರನ್ನು ಮನೆಯಿಂದ ಹೊರ ಕರೆತರಬಲ್ಲಂಥ ಸಾರ್ವಜನಿಕ ಸ್ಥಳಗಳನ್ನು ನಿರ್ಮಿಸಿ, ಅವರ ಆರೋಗ್ಯ ಕಾಪಾಡುವಂಥ ವಾಕಿಂಗ್ ಹಾಗೂ ಸೈಕಲ್ ಬಳಕೆಗೆ ಪ್ರೋತ್ಸಾಹಿಸುತ್ತೇವೆ.

101. ಹಸಿರುಮನೆ ಅನಿಲ ಹೊರಸೂಸುವಿಕೆಗಳು, ಸ್ಥಳಗಳ ಸ್ಥಿತಸ್ಥಾಪಕತ್ವ-ಆಧಾರಿತ ಹಾಗೂ ಹವಾಮಾನ-ಪರಿಣಾಮಕಾರಿ ವಿನ್ಯಾಸಗಳು, ಕಟ್ಟಡಗಳು ಹಾಗೂ ನಿರ್ಮಾಣಗಳು, ಸೇವೆಗಳು ಹಾಗೂ ಮೂಲಸೌಕರ್ಯಗಳು ಮತ್ತು ಪ್ರಕೃತಿ ಆಧಾರಿತ ಪರಿಹಾರಗಳನ್ನೊಳಗೊಂಡು ವಯಸ್ಸು ಮತ್ತು ಲಿಂಗ-ಪ್ರತಿಕ್ರಿಯಾಶೀಲ ನಗರ ಮತ್ತು ಪ್ರಾದೇಶಿಕ ಅಭಿವೃದ್ಧಿ ಮತ್ತು ಯೋಜನಾ ಪ್ರಕ್ರಿಯೆಗಳಲ್ಲಿ, ದುರಂತದ ಅಪಾಯದ ಕಡಿತ ಮತ್ತು ವಾತಾವರಣದ ಬದಲಾವಣೆಯ ರೂಪಾಂತರ ಮತ್ತು ಉಪಶಮನದ ಪರಿಗಣನೆಗಳು ಮತ್ತು ಕ್ರಮಗಳನ್ನು ನಾವು ಸಂಯೋಜಿಸುತ್ತೇವೆ. ಕ್ಷೇತ್ರಗಳಾದ್ಯಂತ ನಾವು ಸಹಕಾರ ಮತ್ತು ಹೊಂದಾಣಿಕೆಯನ್ನು ಉತ್ತೇಜಿಸುತ್ತೇವೆ ಮತ್ತು ಪ್ರಸ್ತುತ ಮತ್ತು ಭವಿಷ್ಯದ ಸಾರ್ವಜನಿಕ ಸೌಲಭ್ಯಗಳ ಸ್ಥಳಕ್ಕೆ ಸಂಬಂಧಿಸಿದ ಅಪಾಯದ ಮೌಲ್ಯಮಾಪನಗಳಂತಹ ದುರಂತದ ಅಪಾಯ ತಗ್ಗಿಸುವಿಕೆ ಮತ್ತು ಪ್ರತಿಕ್ರಿಯಾ ಯೋಜನೆಗಳನ್ನು ಸುಧಾರಿಸಲು ಮತ್ತು ಅನುಷ್ಠಾನಕ್ಕೆ ತರಲು ಮತ್ತು ಸೂಕ್ತ ಆಕಸ್ಮಿಕ ಮತ್ತು ಸ್ಥಳಾಂತರಿಸುವ ಕಾರ್ಯವಿಧಾನಗಳನ್ನು ರೂಪಿಸಲು ಸ್ಥಳೀಯ ಅಧಿಕಾರಿಗಳ ಸಾಮರ್ಥ್ಯವನ್ನು ಹೆಚ್ಚಿಸುತ್ತೇವೆ.

102. ರಾಷ್ಟ್ರೀಯ, ಉಪರಾಷ್ಟ್ರೀಯ ಹಾಗೂ ಸ್ಥಳೀಯ ಮಟ್ಟಗಳಲ್ಲಿ ನಗರ ಯೋಜನೆ ಹಾಗೂ ವಿನ್ಯಾಸ ಮತ್ತು ನಗರ ಯೋಜಕರಿಗೆ ತರಬೇತಿ ಕಲ್ಪಿಸುವತ್ತ ಚಿತ್ತ ಹರಿಸುತ್ತೇವೆ.

103. ನಗರ ಸುರಕ್ಷತೆಗಾಗಿ ಭಯೋತ್ಪಾದನೆ, ಹಿಂಸಾಚಾರ, ಉಗ್ರವಾದ ಸೇರಿದಂತೆ ಇತರೆ ಅಪರಾಧಗಳ ತಡೆಗೆ ನಾವು ಸಮಗ್ರ ಕ್ರಮ ಕೈಗೊಳ್ಳುತ್ತೇವೆ. ಇದಕ್ಕಾಗಿ ಸರ್ಕಾರೇತರ ವ್ಯಕ್ತಿಗಳು ಹಾಗೂ ಸ್ಥಳೀಯ ಸಮುದಾಯಗಳನ್ನು ನಗರ ಅಭಿವೃದ್ಧಿ ತಂತ್ರಗಳು ಹಾಗೂ ಉದ್ಯಮಶೀಲತೆಗಳಲ್ಲಿ ತೊಡಗಿಸಿಕೊಳ್ಳುತ್ತೇವೆ. ಸ್ಲಮ್ಗಳು, ಅನೌಪಚಾರಿ ನೆಲೆಗಳ ಆರ್ಥಿಕ, ಸಾಂಸ್ಕೃತಿಕ ವಿಷಯಗಳನ್ನು ಪರಿಗಣಿಸಿ ಅಪರಾಧ ತಡೆಯತ್ತ ಗಮನ ಹರಿಸುತ್ತೇವೆ. ಕೆಲ ನಿರ್ದಿಷ್ಟ ಗುಂಪುಗಳನ್ನು ಪೂರ್ವಾಗ್ರಹಪೀಡಿತರಾಗಿ ಅಪರಾಧಿಗಳಂತೆ ನೋಡುವ ಮನೋಭಾವ ತಡೆಯುತ್ತೇವೆ.

104. ಭೂ ನೋಂದಣಿ ಹಾಗೂ ಆಡಳಿತಗಳನ್ನು ಒಳಗೊಂಡ ಸ್ಥಗಳನ್ನು ಕಾನೂನು ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುತ್ತೇವೆ. ಆಸ್ತಿ ಹಾಗೂ ಭೂ ನೋಂದಣಿಯಲ್ಲಿ ಪಾರದರ್ಶಕತೆ ತಂದು ಉತ್ತಮ ನಿರ್ವಹಣಾ ವ್ಯವಸ್ಥೆ ಕಲ್ಪಿಸುತ್ತೇವೆ. ನಿವೇಶನ ಹಾಗೂ ಗೃಹ ಬೆಲೆ ದಾಖಲೆಗಳು, ಭೂ ಮೌಲ್ಯಮಾಪ ಹಾಗೂ ಅಪಾಯ ಪ್ರದೇಶಗಳ ಗುರುತಿಸುವಿಕೆ ಇತ್ಯಾದಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಸ್ಥಳೀಯ ಆಡಳಿತ ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಬೆಂಬಲಿಸುತ್ತೇವೆ. ಈ ಮಾಹಿತಿಗಳನ್ನು ವಂಚನೆಗೆ ಬಳಸದಂತೆ ನೋಡಿಕೊಳ್ಳುತ್ತೇವೆ.

105. ಅರ್ಹ ವಸತಿಹಕ್ಕನ್ನು ಅರ್ಹ ಜೀವನಮಟ್ಟದ ಹಕ್ಕಿಗೆ ಸಂಬಂಧಿಸಿದಂತೆ ಪರಿಗಣಿಸುತ್ತೇವೆ. ಗೃಹನೀತಿಗಳನ್ನು ಎಲ್ಲ ಮಟ್ಟದಲ್ಲೂ ಅಭಿವೃದ್ಧಿಪಡಿಸಿ, ರಾಷ್ಟ್ರೀಯ, ಉಪರಾಷ್ಟ್ರೀಯ ಹಾಗೂ ಸ್ಥಳೀಯಾಭಿವೃದ್ಧಿ ತಂತ್ರಗಳು, ಭೂನೀತಿಗಳು ಹಾಗೂ ವಸತಿ ಪೂರೈಕೆಗನುಗುಣವಾಗಿ ಅನುಷ್ಠಾನಗೊಳಿಸುತ್ತೇವೆ.

106. ಸಾಮಾಜಿಕ ಒಳಗೊಳ್ಳುವಿಕೆ, ಪರಿಣಾಮಕಾರಿ ಆರ್ಥಿಕತೆ ಹಾಗೂ ಪರಿಸರ ರಕ್ಷಣೆ ತತ್ವಗಳ ಮೇಲೆ ಗೃಹನೀತಿಗಳನ್ನು ನಾವು ಪ್ರೋತ್ಸಾಹಿಸುತ್ತೇವೆ. ನಗರದ ಕೇಂದ್ರಭಾಗದಲ್ಲಿರುವ ಭೂಮಿ ಹಾಗೂ ಏಕೀಕರಣ ಪ್ರದೇಶಗಳಲ್ಲಿರುವ ಭೂಮಿಯ ಸಾರ್ವಜನಿಕ ಸಂಪನ್ಮೂಲಗಳನ್ನು ಎಟುಕಬಲ್ಲ ವಸತಿನಿರ್ಮಾಣಕ್ಕಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು, ಮಿಶ್ರ ಆದಾಯ ಅಭಿವೃದ್ಧಿಗೆ ಪ್ರೋತ್ಸಾಹಿಸಿ ಸಾಮಾಜಿಕ ಒಳಗೊಳ್ಳುವಿಕೆ ಹಾಗೂ ಸಂಯೋಜಿತ ಸ್ಥಿತಿಯನ್ನು ಪ್ರೋತ್ಸಾಹಿಸುತ್ತೇವೆ.

107. ಬಾಡಿಗೆ ಮನೆಗಳು, ಸಮುದಾಯ ವಸತಿ ಸೇರಿದಂತೆ ಇತರೆ ಭೋಗ್ಯದ ಆಯ್ಕೆ ನೀಡುವಂತ ಹಲವು ರೀತಿಯ ಗೃಹ ಆಯ್ಕೆಗಳನ್ನು ನೀಡಲು ನೆರವಾಗುವ ನೀತಿನಿಯಮಗಳು, ವ್ಯವಸ್ಥೆ, ಹಣಕಾಸು ಮಾದರಿಗಳ ಅಭಿವೃದ್ಧಿಗೆ ನಾವು ಪ್ರೋತ್ಸಾಹಿಸುತ್ತೇವೆ. ಇವು ವ್ಯಕ್ತಿಗಳ ಹಾಗೂ ಸಮುದಾಯಗಳ ಅಗತ್ಯಗಳನ್ನು ಪೂರೈಸಿ ಕಡಿಮೆ ಆದಾಯ ಹೊಂದಿದವರಿಗೂ ವಸತಿ ವ್ಯವಸ್ಥೆ ಎಟುಕುವಂಥ ಯೋಜನೆಗಳಿಗೆ ಬೆಂಬಲಿಸುತ್ತೇವೆ.

108. ನಾವು ಬಹಿರ್ವೇಶನ ಮತ್ತು ಪ್ರತ್ಯೇಕತೆಯನ್ನು ತಡೆದು, ಶಿಕ್ಷಣ, ಉದ್ಯೋಗ, ಹೌಸಿಂಗ್ ಮತ್ತು ಆರೋಗ್ಯದ ನಡುವೆ ಬಲಿಷ್ಠ ಕೊಂಡಿಗಳನ್ನು ಗಮನಿಸುವ ಮೂಲಕ ಸ್ಥಳೀಯ ಸಮಗ್ರ ಹೌಸಿಂಗ್ ಪ್ರವೇಶಗಳನ್ನು ಪೋಷಿಸುವ ಹೌಸಿಂಗ್ ನೀತಿಗಳ ಅಭಿವೃದ್ಧಿಯನ್ನು ಬೆಂಬಲಿಸುತ್ತೇವೆ. ಮುಂದುವರಿದು, ನಾವು ಮನೆಯಿಲ್ಲದವರಿಗಾಗಿ ಹೋರಾಡಲು ಹಾಗೂ ಸಮಗ್ರ, ಅಂತರ್ವೇಶನ ಮತ್ತು ಸಮರ್ಥನೀಯ ಮನೆ-ಮೊದಲ ಪ್ರೋಗ್ರಾಂಗಳಂತಹ ಸಮರ್ಪಿತ ನೀತಿಗಳು ಮತ್ತು ಉದ್ದೇಶಿತ ಸಕ್ರಿಯ ಅಂತರ್ವೇಶನಗಳ ಮೂಲಕ ತನ್ನ ಹೋರಾಟ ಮತ್ತು ಹೊರಹಾಕುವಿಕೆಯ ಬಗ್ಗೆ ಹೋರಾಡಲು ನಮ್ಮನ್ನು ಬದ್ಧರನ್ನಾಗಿಸಿಕೊಳ್ಳುತ್ತೇವೆ.

109. ನಾವು ಉನ್ನತೀಕರಣಕ್ಕಾಗಿ, ಸಾಧ್ಯವಿರುವ ಮಟ್ಟಕ್ಕೆ, ಕೊಳಚೆ ಪ್ರದೇಶಗಳು ಮತ್ತು ಔಪಚಾರಿಕ ವಸಾಹತುಗಳು ನಗರಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಆಯಾಮಗಳಿಗೆ ಸಮಗ್ರವಾಗಿರುತ್ತವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ಭೌತಿಕ ಮತ್ತು ಪರಿಸರಾತ್ಮಕ ಸುಧಾರಣೆಗಳನ್ನು ಮೀರುವ ಕಾರ್ಯತಂತ್ರಗಳೊಂದಿಗೆ ಕೊಳಚೆ ಪ್ರದೇಶ ಮತ್ತು ಔಪಚಾರಿಕ ವಸಾಹತುಗಳ ತಡೆಯುವಿಕೆಗೆ ಸಮುಚಿತವಾದಂತೆ, ಹಣಕಾಸು ಮತ್ತು ಮಾನವ ಸಂಪನ್ಮೂಲಗಳ ಹೆಚ್ಚಳವಾದ ಗೊತ್ತುಪಡಿಸುವಿಕೆಯನ್ನು ಪರಿಗಣಿಸುತ್ತೇವೆ. ಈ ಕೌಶಲ್ಯಗಳು ಅನ್ವಯವಾಗುವಂತೆ, ಸಮರ್ಥನೀಯ, ಪ್ರವೇಶಸಾಧ್ಯ, ಹಸಿರು ಮತ್ತು

ಭರಿಸಬಹುದಾದ ಗೃಹ, ಮೂಲಭೂತ ಮತ್ತು ಸಾಮಾಜಿಕ ಸೇವೆಗಳು ಹಾಗೂ ಸುರಕ್ಷಿತ, ಅಂತರ್ವೇಶನ, ಪ್ರವೇಶಸಾಧ್ಯ, ಹಸಿರು ಮತ್ತು ಗುಣಮಟ್ಟದ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವನ್ನು ಈ ಕಾರ್ಯತಂತ್ರಗಳು ಒಳಗೊಂಡಿರಬೇಕು, ಹಾಗೂ ಅವುಗಳು ಅವಧಿಯ ಭದ್ರತೆಯನ್ನು ಹಾಗೂ ಅದರ ನಿಯಂತ್ರಣವನ್ನು ಮತ್ತು ಸಂಘರ್ಷ ತಡೆ ಮತ್ತು ಮಧ್ಯಸ್ಥಿಕೆಗಾಗಿ ಕ್ರಮಗಳನ್ನು ಹೆಚ್ಚಿಸಬೇಕು.

110. ನಾವು ಕೊಳಚೆ ಪ್ರದೇಶ ಮತ್ತು ಅನೌಪಚಾರಿಕ-ವಸಾಹತು ನಿವಾಸಿಗಳ ಬದುಕಿನ ಸ್ಥಿತಿಗಳನ್ನು ಸುಧಾರಿಸಲು ಹಿಂದಿನ ಪ್ರಯತ್ನಗಳಿಂದ ಗಳಿಸಿದ ಅನುಭವವನ್ನು ಪರಿಗಣನೆಗೆ ತೆಗೆದುಕೊಂಡು ಕೊಳಚೆ ಪ್ರದೇಶ ಮತ್ತು ಅನೌಪಚಾರಿಕ ವಸಾಹತುಗಳಲ್ಲಿ ವಾಸಿಸುವ ಜನರ ಪ್ರಮಾಣವನ್ನು ಕಡಿಮೆ ಮಾಡುವುದಕ್ಕಾಗಿ ಅಂತರ್ವೇಶನ ಮತ್ತು ಪಾರದರ್ಶಕ ನಿಗಾ ವ್ಯವಸ್ಥೆಗಳನ್ನು ವ್ಯಾಖ್ಯಾನಿಸುವ ಮತ್ತು ಬಲವರ್ಧನೆಗೊಳಿಸುವ ಪ್ರಯತ್ನವನ್ನು ಬೆಂಬಲಿಸುತ್ತೇವೆ.

111. ನಾವು, ವಸತಿ ವಲಯದಲ್ಲಿ ಅಗತ್ಯವಿರುವಷ್ಟು ಮತ್ತು ಜಾರಿಗೆ ತರಬಲ್ಲ ನಿಯಮಗಳನ್ನು ಅಭಿವೃದ್ಧಿಪಡಿಸುವುದನ್ನು ಉತ್ತೇಜಿಸುತ್ತೇವೆ. ಇವುಗಳಲ್ಲಿ ಅಗತ್ಯಕ್ಕನುಸಾರವಾಗಿ, ಹೊಂದಿಕೊಳ್ಳುವ ಕಟ್ಟಡದ ಕೋಡ್ ಗಳು, ಗುಣಮಟ್ಟಗಳು, ಅಭಿವೃದ್ಧಿಯ ಪರವಾನಿಗೆಗಳು, ಕಾನೂನಿನ ಪ್ರಕಾರ ಭೂಮಿಯ ಬಳಕೆ ಮತ್ತು ಸುಗ್ರೀವಾಜ್ಞೆಗಳು ಮತ್ತು ಯೋಜನಾ ನಿಬಂಧನೆಗಳು, ಗಾಳಿಸುದ್ದಿಗಳನ್ನು ಎದುರಿಸುವುದು ಮತ್ತು ತಡೆಯುವುದು, ಸ್ಥಳಾಂತರ, ಮನೆಯಿಲ್ಲದಿರುವುದು ಮತ್ತು ಅನಿಯಂತ್ರಿತ ಬಲವಂತದ ಒಕ್ಕಲೆಬ್ಬಿಸುವುದು ಮತ್ತು ಸ್ಥಿರತೆ, ಗುಣಮಟ್ಟ, ಕಡಿಮೆ ವೆಚ್ಚದ, ಆರೋಗ್ಯ, ಸುರಕ್ಷತೆ, ಕೈಗೆಟುವಿಕೆ, ಶಕ್ತಿ ಮತ್ತು ಸಂಪನ್ಮೂಲದ ಸಾಮರ್ಥ್ಯ ಮತ್ತು ಹೊಂದಿಕೊಳ್ಳುವಿಕೆಯನ್ನು ಖಚಿತಪಡಿಸಬೇಕು. ಉನ್ನತ ಗುಣಮಟ್ಟದ ಆಧಾರದ ಮೇಲೆ ಮನೆಯ ಪೂರೈಕೆ ಮತ್ತು ಅಗತ್ಯತೆಯ ಪ್ರತ್ಯೇಕ ವಿಶ್ಲೇಷಣೆ, ಇದು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಹಂತಗಳಲ್ಲಿ ನಿರ್ದಿಷ್ಟ ಸಾಮಾಜಿಕ, ಆರ್ಥಿಕ, ವಾತಾವರಣ ಮತ್ತು ಸಾಂಸ್ಕೃತಿಕ ಆಯಾಮಗಳ ಆಧಾರದ ಮೇಲೆ ನಡೆಯಬೇಕು.


112. ನಾವು ಅವರನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ಕಡಿಮೆ ಆದಾಯದ ಗುಂಪುಗಳ ಹೌಸಿಂಗ್ ಅಗತ್ಯತೆಗಳಿಗಾಗಿ ಪರಿಹಾರಗಳನ್ನು ಒದಗಿಸಿ, ಸಾಮಾಜಿಕ ಮತ್ತು ಆರ್ಥಿಕ ವಲಯವನ್ನು ಹೊರತುಪಡಿಸಿ, ನಗರ ವ್ಯವಸ್ಥೆಗಳಿಂದ ಬೇರ್ಪಡಿಸಿದ ಬಾಹ್ಯ ಮತ್ತು ಪ್ರತ್ಯೇಕ ಸಮೂಹ ಹೌಸಿಂಗ್ ಅಭಿವೃದ್ಧಿಗಳನ್ನು ತಪ್ಪಿಸುವುದಕ್ಕಾಗಿ ಉತ್ತಮ ಸ್ಥಳ ಮತ್ತು ಉತ್ತಮ-ವಿತರಿಸಲ್ಪಟ್ಟ ಹೌಸಿಂಗ್ ಯೋಜನೆಗಳಿಗೆ ಆದ್ಯತೆ ನೀಡಿ, ಕಾರ್ಯತಂತ್ರದ ಕೇಂದ್ರದಲ್ಲಿ ಹೌಸಿಂಗ್ ಮತ್ತು ಜನರ ಅಗತ್ಯತೆಗಳೊಂದಿಗೆ ಸಮರ್ಥನೀಯ ನಗರ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ಹೆಚ್ಚಿಸುತ್ತೇವೆ.

113. ನಾವು ರಸ್ತೆ ಸುರಕ್ಷತೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ಸಮರ್ಥನೀಯ ಚಲನಶೀಲತೆ ಮತ್ತು ಸಾರಿಗೆ ನಿರ್ಮಾಣ ಯೋಜನೆ ಮತ್ತು ವಿನ್ಯಾಸಕ್ಕೆ ಸಮಗ್ರಗೊಳಿಸುತ್ತೇವೆ. ಅರಿವಿನ ಜೊತೆಗೆ - ಉಪಕ್ರಮಗಳನ್ನು ಹೆಚ್ಚಿಸುವುದು, ನಾವು ಎಲ್ಲಾ ಮಹಿಳೆಯರು ಮತ್ತು ಹುಡುಗಿಯರು, ಹಾಗೂ ಮಕ್ಕಳು, ಯುವಜನತೆ, ವಯಸ್ಸಾದ ವ್ಯಕ್ತಿಗಳು ಮತ್ತು ಅಂಗವಿಕಲ ಜನರು ಮತ್ತು ದೌರ್ಬಲ್ಯ ಪರಿಸ್ಥಿತಿಗಳಲ್ಲಿರುವವರ ಅಗತ್ಯತೆಗಳಿಗೆ ವಿಶೇಷ ಗಮನದೊಂದಿಗೆ, ರಸ್ತೆ ಸುರಕ್ಷತೆಗಾಗಿ ಕ್ರಮ ದಶಕ ಎಂದು ಕರೆಯಲಾಗುವ ಸುರಕ್ಷತಾ-ವ್ಯವಸ್ಥೆಯ ಪ್ರವೇಶವನ್ನು ಹೆಚ್ಚಿಸುತ್ತೇವೆ. ನಾವು ವಿಶೇಷವಾಗಿ ಹಾನಿ ಮತ್ತು ಸಂವಹನೇತರ ರೋಗಗಳನ್ನು ತಡೆಯಲು, ಸಕ್ರಿಯವಾಗಿ ಆರೋಗ್ಯ ಫಲಿತಾಂಶಗಳ ದೃಷ್ಟಿಯೊಂದಿಗೆ, ಪಾದಚಾರಿಗಳ ಸುರಕ್ಷತೆ ಮತ್ತು ಸೈಕಲಿಂಗ್ ಚಲನಶೀಲತೆಯನ್ನು ಹೆಚ್ಚಿಸುತ್ತೇವೆ ಮತ್ತು ನೀತಿಗಳನ್ನು ಅಳವಡಿಸಿಕೊಳ್ಳಲು, ಅನುಷ್ಠಾನಗೊಳಿಸಲು ಮತ್ತು ಜಾರಿಗೆ ತರುವುದಕ್ಕಾಗಿ ಸಕ್ರಿಯವಾಗಿ ಕ್ರಮ ಕೈಗೊಳ್ಳುತ್ತೇವೆ, ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ, ಅಪ್ರಮಾಣಾನುಗತವಾಗಿ ಅಧಿಕ ಮತ್ತು ಜಾಗತಿಕವಾಗಿ ಹೆಚ್ಚಾಗುತ್ತಿರುವ ಮೋಟಾರ್ಸೈಕಲ್ ಅಪಘಾತದ ಮರಣ ಮತ್ತು ಹಾನಿಯ ಪ್ರಮಾಣದ ಮೇಲಿನ ಸಮಗ್ರ ಶಾಸನ ಮತ್ತು ನೀತಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಅನುಷ್ಠಾನಗೊಳಿಸಲು ಕೆಲಸ ಮಾಡುತ್ತೇವೆ. ನಾವು ಒಂದು ಆದ್ಯತೆಯಾಗಿ ಪ್ರತಿ ಮಗುವಿಗೆ ಶಾಲೆಗೆ ಸುರಕ್ಷಿತ ಮತ್ತು ಆರೋಗ್ಯದಿಂದ ಹೋಗಿಬರುವುದನ್ನು ಉತ್ತಮಪಡಿಸುತ್ತೇವೆ.

114. ನಾವು ಸುರಕ್ಷಿತ, ಪ್ರಾಯ ಮತ್ತು ಲಿಂಗ-ಪ್ರತಿಕ್ರಿಯೆ, ಭರಿಸಬಹುದಾದ, ಪ್ರವೇಶಸಾಧ್ಯ ಮತ್ತು ಸಮರ್ಥನೀಯ ನಗರ ಚಲನಶೀಲತೆ ಹಾಗೂ ಭೂಮಿ ಮತ್ತು ಜಲ ಸಾರಿಗೆ ವ್ಯವಸ್ಥೆಗೆ ಎಲ್ಲರಿಗೂ ಪ್ರವೇಶವನ್ನು ಹೆಚ್ಚಿಸುತ್ತೇವೆ, ನಾವು ಸಾರಿಗೆ ಮತ್ತು ಚಲನಶೀಲ ಯೋಜನೆಗಳನ್ನು ಒಟ್ಟಾರೆ ನಗರ ಮತ್ತು ಪ್ರಾದೇಶಿಕ ಯೋಜನೆಗಳಿಗೆ ಸಮಗ್ರಗೊಳಿಸುವ ಮೂಲಕ ಮತ್ತು ನೆರವು ನೀಡುವ ಮೂಲಕ ನಿರ್ದಿಷ್ಟವಾಗಿ ಒಟ್ಟಾರೆ ನಗರಕ್ಕೆ ಹೆಚ್ಚಿಸುವ ಮೂಲಕ ನಗರ ಮತ್ತು ಮಾನವ ವಸಾಹತುಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಅರ್ಥಪೂರ್ಣ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸುತ್ತೇವೆ.

(ಎ) ಸಾರ್ವಜನಿಕ ಸಾರಿಗೆಗಾಗಿ ಪ್ರವೇಶಸಾಧ್ಯ, ಸುರಕ್ಷಿತ, ದಕ್ಷ, ಭರಿಸಬಹುದಾದ ಮತ್ತು ಸಮರ್ಥನೀಯ ನಿರ್ಮಾಣದಲ್ಲಿ ಹಾಗೂ ಖಾಸಗಿ ಮೋಟಾರೀಕೃತ ಸಾರಿಗೆಯ ಮೇಲೆ ಅವರಿಗೆ ಆದ್ಯತೆ ನೀಡಿ, ನಡಿಗೆ ಮತ್ತು ಸೈಕ್ಲಿಂಗ್ ನಂತರ ಮೋಟಾರುರಹಿತ ಸಾರಿಗೆಯಲ್ಲಿ ಪ್ರಧಾನ ಹೆಚ್ಚಳ.

(ಬಿ) ನಿರ್ದಿಷ್ಟವಾಗಿ ಕಳಪೆ, ಮತ್ತು ವೈಶಿಷ್ಟ್ಯ ಭರಿಸುವಿಕೆ, ಮಿಶ್ರಣ-ಆದಾಯ ಹೌಸಿಂಗ್ ಮತ್ತು ಉದ್ಯೋಗ ಮತ್ತು ಸೇವೆಗಳ ಮಿಶ್ರಣದ ವಿಷಯದಲ್ಲಿ, ಸ್ಥಳಾಂತರ ಕಡಿಮೆ ಮಾಡುವ ಈಕ್ವಿಟೇಬಲ್ "ಟ್ರಾನ್ಸಿಟ್-ಓರಿಯಂಟೆಡ್ ಅಭಿವೃದ್ಧಿ"


Toluca, Mexico

(ಸಿ) ಪ್ರಯಾಣ ಮತ್ತು ಸಾಗಾಣಿಕ ಅಗತ್ಯತೆಗಳ ಇಳಿಕೆಗೆ ಕಾರಣವಾಗುವ, ಉತ್ತಮ ಮತ್ತು ಸಂಯೋಜನಾ ಸಾರಿಗೆ ಮತ್ತು ಭೂಬಳಕೆ ಯೋಜನೆ, ಜಲಮಾರ್ಗಗಳು, ಮತ್ತು ಸಾರಿಗೆ ಮತ್ತು ಚಲನಶೀಲ ಯೋಜನೆಯನ್ನು ಒಳಗೊಂಡು ನಗರ, ಅರೆ-ನಗರ ಮತ್ತು ಗ್ರಾಮೀಣ ಪ್ರದೇಶಗಳು, ನಿರ್ದಿಷ್ಟವಾಗಿ ಚಿಕ್ಕ ದ್ವೀಪ ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳು ಕರಾವಳಿ ನಗರಗಳಿಗಾಗಿ.

(ಡಿ) ಉತ್ಪನ್ನಗಳು ಮತ್ತು ಸೇವೆಗಳನ್ನು ಸಮರ್ಥವಾಗಿ ಸಕ್ರಿಯಗೊಳಿಸುವ ನಗರ ಸರಕು ಯೋಜನೆ ಮತ್ತು ಲಾಜಿಸ್ಟಿಕ್ಸ್ ಪರಿಕಲ್ಪನೆಗಳು, ಪರಿಸರದ ಮೇಲೆ ಮತ್ತು ನಗರದ ಜೀವನೀಯತೆಯ ಮೇಲೆ ಅವುಗಳ ಪರಿಣಾಮವನ್ನು ಕಡಿಮೆ ಮಾಡುವುದು ಹಾಗೂ ಸಮರ್ಥನೀಯ, ಅಂತರ್ವೇಶನ ಮತ್ತು ಸಮರ್ಥನೀಯ ಆರ್ಥಿಕ ಬೆಳವಣಿಗೆಗೆ ಆವುಗಳ ಕೊಡುಗೆಯನ್ನು ಹೆಚ್ಚಿಸುವುದು.

115. ನಾವು ಬೇರೆ ವಿಷಯಗಳಲ್ಲಿ ಪರಿಸರ, ಆರ್ಥಿಕತೆ, ಸಾಮಾಜಿಕ ಒಗ್ಗಟ್ಟು, ಗುಣಮಟ್ಟದ ಜೀವನ, ಪ್ರವೇಶಸಾಧ್ಯತೆ, ರಸ್ತೆ ಸುರಕ್ಷತೆ, ಸಾರ್ವಜನಿಕ ಆರೋಗ್ಯ ಮತ್ತು ಹವಾಮಾನ ಬದಲಾವಣೆಯ ಮೇಲೆ ಕ್ರಮದ ಮೇಲಿನ ಪರಿಣಾಮಗಳನ್ನು ಒಳಗೊಂಡು ನಗರ ಮತ್ತು ಮೆಟ್ರೊಪಾಲಿಟನ್ ಸಾರಿಗೆ ಯೋಜನೆಗಳ ವ್ಯಾಪಕ ಪ್ರಯೋಜನಗಳನ್ನು ಮೌಲ್ಯಮಾಪನ ಮಾಡಲು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದಲ್ಲಿ ಯಾಂತ್ರಿಕತೆ ಮತ್ತು ಸಾಮಾನ್ಯ ಚೌಕಟ್ಟುಗಳನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ಕೈಗೊಳ್ಳುತ್ತೇವೆ.

116. ನಾವು ಸಮರ್ಥನೀಯ, ಮುಕ್ತ ಮತ್ತು ಪಾರದರ್ಶಕ ಸಂಗ್ರಹಣೆ ಹಂಚಿಕೊಂಡ ಚಲನಶೀಲ ಸೇವೆಗಳನ್ನು ಸಕ್ರಿಯಗೊಳಿಸುವ ಹೊಸ ತಂತ್ರಜ್ಞಾನವನ್ನು ಒಳಗೊಂಡು, ನಗರ ಮತ್ತು ಮೆಟ್ರೊಪಾಲಿಟನ್ ಪ್ರದೇಶಗಳಲ್ಲಿ ಸಾರಿಗೆ ಮತ್ತು ಚಲನಶೀಲತೆಯೆ ಮುಕ್ತ ಮತ್ತು ಪಾರದರ್ಶಕ ಸಂಗ್ರಹಣೆ ಮತ್ತು ನಿಯಂತ್ರಣವನ್ನು ಸಮರ್ಥನೀಯತೆಗಾಗಿ ಸಮರ್ಥನೀಯ, ಸಮರ್ಥನೀಯ ರಾಷ್ಟ್ರೀಯ ನಗರ ಸಾರಿಗೆ ಮತ್ತು ಚಲನಶೀಲ ನೀತಿಗಳ ಆಧಾರದ ಮೇಲೆ ಈ ಯಾಂತ್ರಿಕತೆ ಮತ್ತು ಚೌಕಟ್ಟುಗಳ ಅಭಿವೃದ್ಧಿಗೆ ನೆರವು ನೀಡುತ್ತೇವೆ. ನಾವು ಸಾರ್ವಜನಿಕ ಹಿತಾಸಕ್ತಿ ಮತ್ತು ವೈಯಕ್ತಿ ಖಾಸಗಿತ್ವ ಮತ್ತು ಪರಸ್ಪರ ಉದ್ದೇಶಗಳನ್ನು ವ್ಯಾಖ್ಯಾನಿಸುವ, ಡೇಟಾ ನಿರ್ವಹಣೆಯನ್ನು ಒಳಗೊಂಡು ಸ್ಥಳೀಯ ಸರ್ಕಾರಗಳು ಮತ್ತು ಸಾರಿಗೆ ಹಾಗೂ ಚಲನಶೀಲ ಸೇವಾ ಪೂರೈಕೆದಾರರ ನಡುವೆ ಸ್ಪಷ್ಟ, ಪಾರದರ್ಶಕ ಮತ್ತು ಗಮನಾರ್ಹ ಕರಾರು ಸಂಬಂಧಗಳ ಅಭಿವೃದ್ಧಿಯನ್ನು ಬೆಂಬಲಿಸುತ್ತೇವೆ.

117. ನಾವು ಸಮರ್ಥನೀಯ ನಗರ ಮತ್ತು ಮೆಟ್ರೊಪಾಲಿಟನ್ ಸಾರಿಗೆ ಮತ್ತು ಚಲನಶೀಲ ಯೋಜನೆಗಳ ಮೂಲಕ ಒಳಗೊಂಡ, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದಲ್ಲಿ,

ಯೋಜನೆ ಮತ್ತು ನೀತಿ ಚೌಕಟ್ಟುಗಳ ಪರಸ್ಪರ ತಿಳುವಳಿಕೆಯಲ್ಲಿ ಸಾರಿಗೆ ಮತ್ತು ನಗರ ಮತ್ತು ಪ್ರಾದೇಶಿಕ ಯೋಜನಾ ವಿಭಾಗಗಳ ನಡುವೆ ಉತ್ತಮ ಸಹಕಾರವನ್ನು ಬೆಂಬಲಿಸುತ್ತೇವೆ. ನಾವು ಅಂತಹ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಜಾರಿಗೆ ತರಲು ಅವಶ್ಯಕ ಜ್ಞಾನ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳಿಗೆ ನೆರವು ನೀಡುತ್ತೇವೆ.

118. ನಾವು ಹಣಕಾಸು ಸಲಕರಣೆಗಳನ್ನು ಅಭಿವೃದ್ಧಿಪಡಿಸಲು ಮತ್ತು ವಿಸ್ತರಿಸಲು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳನ್ನು ಪ್ರೋತ್ಸಾಹಿಸುತ್ತೇವೆ, ಸಮೂಹ ತ್ವರಿತ-ಸಾಗಾಣೆ ವ್ಯವಸ್ಥೆಗಳು, ಸಮಗ್ರ ಸಾರಿಗೆ ವ್ಯವಸ್ಥೆಗಳು, ವಾಯು ಮತ್ತು ರೈಲು ವ್ಯವಸ್ಥೆಗಳು, ಮತ್ತು ಸುರಕ್ಷಿತ, ತೃಪ್ತಿಕರ ಮತ್ತು ಸಮರ್ಪಕ ಪಾದಚಾರಿ ಮತ್ತು ಸೈಕ್ಲಿಂಗ್ ಇನ್ಫ್ರಾಸ್ಟ್ರಕ್ಚರ್ ಹಾಗೂ ದಕ್ಷತೆ, ಸಂಪರ್ಕ, ಪ್ರವೇಶಸಾಧ್ಯತೆ, ಆರೋಗ್ಯ ಮತ್ತು ಗುಣಮಟ್ಟದ ಜೀವನವನ್ನು ಹೆಚ್ಚಿಸುವಾಗ, ದಟ್ಟಣೆ ಮತ್ತು ಮಾಲಿನ್ಯವನ್ನು ಕಡಿಮೆ ಮಾಡಲು ಸಾರಿಗೆ ಮತ್ತು ಸಾಗಾಣೆಗೆ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಆಧಾರಿತ ನಾವಿನ್ಯತೆಗಳಂತಹ ಅವರ ಸಾರಿಗೆ ಮತ್ತು ಚಲನಶೀಲ ನಿರ್ಮಾಣ ಮತ್ತು ವ್ಯವಸ್ಥೆಗಳನ್ನು ಸುಧಾರಿಸಲು ಅವರನ್ನು ಸಮರ್ಥರನ್ನಾಗಿಸುತ್ತೇವೆ.

119. ನಾವು ಜಲ ಸಂಬಂಧಿತ ದುರಂತಗಳಾದ ಸಂದರ್ಭದಲ್ಲಿ ಸುರಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ, ವಾಯು ಮಾಲಿನ್ಯ ಮತ್ತು ಚಂಡಮಾರುತ ಜಲನಿರ್ವಹಣೆಯಲ್ಲಿ ಇಳಿಕೆ, ನೀರು, ನೈರ್ಮಲ್ಯತೆ, ಸ್ವಚ್ಛತೆ, ಚರಂಡಿ, ಗಡುಸು ನೀರು ನಿರ್ವಹಣೆ, ನಗರ ಚರಂಡಿ ವ್ಯವಸ್ಥೆಗಾಗಿ ರಕ್ಷಣಾತ್ಮಕ, ಪ್ರವೇಶಸಾಧ್ಯ ಮತ್ತು ಸಮರ್ಥನೀಯ ನಿರ್ಮಾಣ ಮತ್ತು ಸೇವಾ ಉಪಬಂಧ ವ್ಯವಸ್ಥೆಗಳಲ್ಲಿ ಸಮರ್ಪಕ ಹೂಡಿಕೆಗಳನ್ನು ಹೆಚ್ಚಿಸುತ್ತೇವೆ, ಆರೋಗ್ಯವನ್ನು ಹೆಚ್ಚಿಸುತ್ತೇವೆ, ಎಲ್ಲರಿಗೂ ಸುರಕ್ಷಿತ ಮತ್ತು ಭರಿಸಬಹುದಾದ ಕುಡಿಯುವ ನೀರಿನ ಜಾಗತಿಕ ಮತ್ತು ನ್ಯಾಯಸಮ್ಮತ ಪ್ರವೇಶವನ್ನು ಹಾಗೂ ಎಲ್ಲಾ ಮತ್ತು ದೌರ್ಬಲ್ಯದ ಪರಿಸ್ಥಿತಿಯಲ್ಲಿ ಇರುವವರಿಗಾಗಿ ಮತ್ತು ಮಹಿಳೆಯರು ಹಾಗೂ ಹುಡುಗಿಯರ ಅಗತ್ಯತೆ ಮತ್ತು ಸುರಕ್ಷತೆಗೆ ವಿಶೇಷ ಗಮನಹರಿಸುವುದರೊಂದಿಗೆ, ತೆರೆದ ಮಲವಿಸರ್ಜನೆಯನ್ನು ಕೊನೆಗೊಳಿಸುವುದನ್ನು ಖಾತರಿಪಡಿಸುತ್ತೇವೆ. ನಾವು ಈ ನಿರ್ಮಾಣವು ಹವಾಮಾನ ಸ್ಥಿತಿಸ್ಥಾಪಕತೆ ಮತ್ತು ಬೇರೆ ವಿಷಯಗಳಲ್ಲಿ ಹೌಸಿಂಗ್ ಹಾಗೂ ಚಲನಶೀಲತೆಯನ್ನು ಒಳಗೊಂಡು ಸಮಗ್ರ ನಗರ ಮತ್ತು ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳ ಭಾಗವನ್ನು ರೂಪಿಸುತ್ತದೆ ಹಾಗೂ ನವೀನ, ಸಂಪನ್ಮೂಲ ಸಮರ್ಥ, ಪ್ರವೇಶಸಾಧ್ಯ, ಪ್ರಸಂಗ-ನಿರ್ದಿಷ್ಟ ಮತ್ತು ಸಾಂಸ್ಕೃತಿಕ ಸೂಕ್ಷ್ಮ ಸಮರ್ಥನೀಯ ಪರಿಹಾರೋಪಾಯಗಳನ್ನು ಪರಿಗಣಿಸಿ ಭಾಗವಹಿಸುವಿಕೆಯ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ.

120. ನಾವು ಎಲ್ಲಾ ಮತ್ತು ಸಮರ್ಪಕ ಹಾಗೂ ನ್ಯಾಯಸಮ್ಮತ ನೈರ್ಮಲ್ಯತೆ ಮತ್ತು ಎಲ್ಲರಿಗೂ ಆರೋಗ್ಯಕ್ಕಾಗಿ ಸುರಕ್ಷಿತ ಮತ್ತು ಭರಿಸಬಹುದಾದ ಕುಡಿಯುವ ನೀರಿಗೆ ಜಾಗತಿಕ ಮತ್ತು ನ್ಯಾಯಸಮ್ಮತ ಪ್ರವೇಶಗಳೆರಡನ್ನೂ ಹೆಚ್ಚಿಸುವ ಮತ್ತು ಪ್ರಗತಿಯುತವಾಗಿ ಅಸಮಾನತೆಗಳನ್ನು ಹೊರಹಾಕುವ ಗುರಿಯೊಂದಿಗೆ, ಸಾಮರ್ಥ್ಯ ಅಭಿವೃದ್ಧಿಯ ಮೂಲಕ, ನಗರ ನಿರ್ಮಾಣ ಸೇವೆಗಳ ಸಮರ್ಥನೀಯ ನಿರ್ವಹಣೆಯನ್ನು ಒಳಗೊಂಡು, ಸಮರ್ಥನೀಯ ನೀರಿನ ನಿರ್ವಹಣಾ ವ್ಯವಸ್ಥೆಗಳನ್ನು ಅನುಷ್ಠಾನಗೊಳಿಸುವ ಸಾಮರ್ಥ್ಯದೊಂದಿಗೆ ಸಾರ್ವಜನಿಕ ನೀರು ಮತ್ತು ನೈರ್ಮಲ್ಯತೆಯ ಉಪಯುಕ್ತತೆಗಳನ್ನು ಸಜ್ಜುಗೊಳಿಸುವುದಕ್ಕಾಗಿ ಕೆಲಸ ಮಾಡುತ್ತೇವೆ.

121. ನಾವು ಶಕ್ತಿಯ ದಕ್ಷತೆ ಮತ್ತು ಸಮರ್ಥನೀಯ ನವೀಕರಿಸಬಹುದಾದ ಶಕ್ತಿ ಮತ್ತು ಬೆಂಬಲಿಸುವ ಉಪರಾಷ್ಟ್ರೀಯ ಮತ್ತು ಸ್ಥಳೀಯ ಪ್ರಯತ್ನಗಳನ್ನು ಸಾರ್ವಜನಿಕ ಕಟ್ಟಡಗಳು, ನಿರ್ಮಾಣ ಮತ್ತು ಸೌಲಭ್ಯಗಳಲ್ಲಿ, ಹಾಗೂ ಅನ್ವಯವಾಗುವಲ್ಲಿ, ನೇರ ನಿಯಂತ್ರಣದ ಅನುಕೂಲತೆಯನ್ನು ಪಡೆಯಲು ಹೆಚ್ಚಿಸುವ ಮೂಲಕ, ರೆಸಿಡೆನ್ಸಿಯಲ್, ವಾಣಿಜ್ಯ ಮತ್ತು ಕೈಗಾರಿಕಾ ಕಟ್ಟಗಳು, ಉದ್ದಿಮೆ, ಸಾರಿಗೆ, ತ್ಯಾಜ್ಯ ಮತ್ತು ನೈರ್ಮಲ್ಯತೆಯಂತಹ ಕೊನೆಯ ಬಳಕೆ ವಲಯಗಳಲ್ಲಿ ಮೇಲೆತ್ತಿ ಬೆಳೆಸಲು ಉಪರಾಷ್ಟ್ರೀಯ ಮತ್ತು ಸ್ಥಳೀಯ ನಿರ್ಮಾಣ ಮತ್ತು ಸಂಹಿತೆಗಳಲ್ಲಿ ಸ್ಥಳೀಯ ಸರ್ಕಾರಗಳ ಮೂಲಕ ಭರಿಸಬಹುದಾದ, ವಿಶ್ವಾಸಾರ್ಹ ಮತ್ತು ಆಧುನಿಕ ಶಕ್ತಿಗೆ ಜಾಗತಿಕ ಪ್ರವೇಶವನ್ನು ಖಾತರಿಪಡಿಸುತ್ತೇವೆ. ನಾವು ನೆರವೇರಿಕೆ ಸಂಹಿತೆಗಳನ್ನು ಮತ್ತು ಸ್ಟಾಂಡರ್ಡ್ಗಳನ್ನು, ನವೀಕರಿಸಬಹುದಾದ ಪೋರ್ಟ್ಫೋಲಿಯೊ ಉದ್ದೇಶಗಳು, ಶಕ್ತಿ-ಸಮರ್ಥ ಲೇಬಲಿಂಗ್, ಅಸ್ಥಿತ್ವದಲ್ಲಿರುವ ಕಟ್ಟಡಗಳ ಮತ್ತು ಶಕ್ತಿಯ ಮೇಲೆ ಸಾರ್ವಜನಿಕ ಸಂಗ್ರಹಣಾ ನೀತಿಗಳ ಮರುಜೋಡಣೆ, ಶಕ್ತಿಯನ್ನು ಸಾಧಿಸಲು ಸಮುಚಿತವಾಗಿ ಇತರೆ ವಿಧಾನಗಳನ್ನು ಹೆಚ್ಚಿಸುವ ಅಳವಡಿಕೆಯನ್ನೂ ಪ್ರೋತ್ಸಾಹಿಸುತ್ತೇವೆ. ನಾವು ಸ್ಮಾರ್ಟ್ ಗ್ರಿಡ್, ಜಿಲ್ಲಾ ಶಕ್ತಿ ವ್ಯವಸ್ಥೆಗಳು ಮತ್ತು ಸಮುದಾಯ ಶಕ್ತಿ ಯೋಜನೆಗಳನ್ನು ನವೀಕರಿಸಬಹುದಾದ ಶಕ್ತಿ ಮತ್ತು ಶಕ್ತಿ ಮರ್ಥತೆಯ ನಡುವಿನ ಸಹಕ್ರಿಯೆಗಳನ್ನು ಹೆಚ್ಚಿಸಲು ಆದ್ಯತೆಯನ್ನೂ ನೀಡುತ್ತೇವೆ.

122. ಸಮರ್ಥ ಕಸ ವಿಲೇವಾರಿ ವ್ಯವಸ್ಥೆಗಳು ಎಲ್ಲರಿಗೂ ಸಿಗುವಂತಾಗಲು, ಕಸ ವಿಲೇವಾರಿಯ ಬಗೆಗಿನ ವಿಕೇಂದ್ರೀಕರಣ ನಿರ್ಧಾರವನ್ನು ನಾವು ಬೆಂಬಲಿಸುತ್ತೇವೆ. ಕಸವನ್ನು ಸೃಷ್ಟಿಸುವ ಮತ್ತು ನಿರ್ಮಿಸುವವರಿಂದಲೇ ಬಂಡವಾಳ ಹೂಡಲ್ಪಟ್ಟ ನಗರ ಕಸ ವಿಲೇವಾರಿ ಯೋಜನೆಗಳೂ ಸೇರಿದ ವಿಸ್ತೃತ ನಿರ್ಮಾಪಕನ ಜವಾಬ್ದಾರಿಯ ಯೋಜನೆಗಳು ಕಸದ ಅಪಾಯ ಮತ್ತು ಆರ್ಥಿಕ, ಸಾಮಾಜಿಕ ಪರಿಣಾಮಗಳು ಮತ್ತು ಉತ್ತಮ ವಿನ್ಯಾಸದ ಉತ್ಪನ್ನದ ಮುಖಾಂತರ ಮರುಬಳಕೆ ಪ್ರಮಾಣವನ್ನು ಹೆಚ್ಚಿಸುತ್ತದೆ.

123. ನಾವು ಆಹಾರ ಭದ್ರತೆಯ ಏಕೀಕರಣವನ್ನು ಉತ್ತೇಜಿಸುತ್ತೇವೆ ಮತ್ತು ನಗರ ವಾಸಿಗಳ ಪೋಷಕಾಂಶದ ಅಗತ್ಯತೆಗಳು, ನಿರ್ದಿಷ್ಟವಾಗಿ ನಗರದ ಬಡವರು. ನಗರ ಮತ್ತು ಪ್ರಾದೇಶಿಕ

ಯೋಜನೆಯಲ್ಲಿ, ಹಸಿವು ಮತ್ತು ಪೋಷಕಾಂಶದ ಕೊರತೆಯನ್ನು ನೀಗಿಸಲು ಇದು ಸಹಾಯಕ. ಸಮರ್ಥ ಆಹಾರ ಭದ್ರತೆ ಮತ್ತು ಕೃಷಿ ನೀತಿಗಳ ನಡುವೆ, ನಗರ, ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಂದಾಣಿಕೆ ಅಗತ್ಯ. ಆಹಾರದ ಉತ್ಪಾದನೆ, ಸಂಗ್ರಹಣೆ, ಸಾಗಾಟ ಮತ್ತು ಕಡಿಮೆ ವೆಚ್ಚದಲ್ಲಿ ಸಮರ್ಥ ಮಾರುಕಟ್ಟೆ, ಆಹಾರದ ನಷ್ಟಗಳು ಮತ್ತು ನಷ್ಟವಾದ ಆಹಾರದ ಮರುಬಳಕೆಯನ್ನು ನಾವು ಉತ್ತೇಜಿಸುತ್ತೇವೆ. ಜೊತೆಗೆ ಆಹಾರ ನೀತಿಗಳು ಮತ್ತು ಶಕ್ತಿ, ನೀರು, ಆರೋಗ್ಯ, ಸಾರಿಗೆ ಮತ್ತು ಕಸದ ಕುರಿತ ತತ್ವಗಳ ನಡುವೆ ಹೊಂದಾಣಿಕೆ ಅಗತ್ಯ. ಬೀಜದ ಅನುವಂಶಿಕ ಜೀವ ವೈವಿಧ್ಯತೆ ಕಾಪಾಡಿಕೊಳ್ಳಿ, ಅಪಾಯಕಾರಿ ರಾಸಾಯನಿಕಗಳನ್ನು ಕಡಿಮೆ ಬಳಸಿ ಮತ್ತು ಸಾಮರ್ಥ್ಯವನ್ನು ಹೆಚ್ಚಿಸಲು, ನಿರುಪಯುಕ್ತತೆಯನ್ನು ಕಡಿಮೆ ಮಾಡಲು ನಗರ ಪ್ರದೇಶಗಳಲ್ಲಿ ತತ್ವಗಳನ್ನು ಜಾರಿಗೊಳಿಸಲು ನಾವು ಉತ್ತೇಜಿಸುತ್ತೇವೆ.

124. ನಾವು ಸಂಸ್ಕೃತಿಯನ್ನು ನಗರ ಯೋಜನೆ ಮತ್ತು ಯೋಜನಾ ಪರಿಕರಗಳನ್ನು ಒಪ್ಪಿಕೊಳ್ಳುವಾಗ ತಂತ್ರಗಾರಿಕೆಯ ಆಧ್ಯತೆಯ ಅಂಶವಾಗಿ ಸೇರಿಸುತ್ತೇವೆ. ಇವುಗಳಲ್ಲಿ ಮುಖ್ಯ ಯೋಜನೆಗಳು, ವಲಯ- ಮಾರ್ಗದರ್ಶನಗಳು, ಕಟ್ಟಡದ ಸಂಕೇತ, ಕರಾವಳಿ ನಿರ್ವಹಣಾ ತತ್ವಗಳು ಮತ್ತು ತಾಂತ್ರಿಕ ಅಭಿವೃದ್ಧಿ ತತ್ವಗಳು- ಇವು ಅನೇಕ ರೀತಿಯ ವಾಸ್ತವ ಮತ್ತು ಅವಾಸ್ತವ ಸಾಂಸ್ಕೃತಿಕ ಬಳುವಳಿ ಮತ್ತು ಭೂದೃಶ್ಯಗಳು, ಮತ್ತು ನಾವು ಅವರನ್ನು ಸಂಭವನೀಯ ತೊಂದರೆಯುಂಟುಮಾಡುವ ನಗರಾಭಿವೃದ್ಧಿಯ ಪರಿಣಾಮಗಳಿಂದ ರಕ್ಷಿಸುತ್ತೇವೆ.

125. ನಾವು ಸಮರ್ಥ ನಗರಾಭಿವೃದ್ಧಿಯಲ್ಲಿ ಸಾಂಸ್ಕೃತಿಕ ಪರಂಪರೆಯ ಪ್ರಭಾವವನ್ನು ಬೆಂಬಲಿಸುತ್ತೇವೆ ಮತ್ತು ಭಾಗವಹಿಸುವಿಕೆ ಮತ್ತು ಜವಾಬ್ದಾರಿಯನ್ನು ಉತ್ತೇಜಿಸುವುದರಲ್ಲಿ ಇದರ ಪಾತ್ರವನ್ನು ಗುರುತಿಸುತ್ತೇವೆ. ನಾವು ಹೊಸತನ ಮತ್ತು ರೂಪಾಂತರದ ಮೂಲಕ, ಪುನರ್ನಿರ್ಮಾಣ ಮತ್ತು ಮೌಲ್ಯ ಸೃಷ್ಟಿಯ ದೃಷ್ಟಿಯಿಂದ ಕೆತ್ತನೆ ಕಲಾಕೃತಿಗಳು ಹಾಗೂ ಸ್ಥಳದ ಸರಿಯಾದ ಬಳಕೆಯನ್ನು ಉತ್ತೇಜಿಸಬಹುದು. ಮೂಲ ಜನರು ಮತ್ತು ಸ್ಥಳೀಯ ಸಮುದಾಯಗಳು ಜ್ಞಾನದ ಉತ್ತೇಜನ, ಹಂಚುವಿಕೆಯಲ್ಲಿ ತೊಡಗಿರಬೇಕು ಮತ್ತು ಶಾಸ್ತ್ರೀಯ ಅಭಿವ್ಯಕ್ತಿಗಳು ಮತ್ತು ಭಾಷೆಗಳ ರಕ್ಷಣೆ. ಹೊಸ ತಂತ್ರಜ್ಞಾನ ಮತ್ತು ಕೌಶಲವೂ ಸೇರಿದಂತೆ, ಕಾಣುವ ಮತ್ತು ಅಗೋಚರ ಸಾಂಸ್ಕೃತಿಕ ಪರಂಪರೆಯ ರಕ್ಷಣೆ.

## ಜಾರಿಯ ವಿಧಗಳು

126. ಹೊಸ ನಗರ ನೀತಿಗಳ ಜಾರಿಗೆ ಸೂಕ್ತವಾದ ವಾತಾವರಣ ಮತ್ತು ವಿಶಾಲ ವ್ಯಾಪ್ತಿಯ ದಾರಿಗಳ ಅಗತ್ಯವಿದೆ ಎಂಬುದರ ಅರಿವಿದೆ. ಇದರಲ್ಲಿ ವಿಜ್ಞಾನ, ಸಂಶೋಧನೆ ಮತ್ತು ತಂತ್ರಜ್ಞಾನ

ಕೈಗೆಟುಕಬೇಕು ಮತ್ತು ಪರಸ್ಪರ ಒಪ್ಪಿದ ವಿಧಾನಗಳ ಮೂಲಕ ಜ್ಞಾನದ ಹಂಚಿಕೆ, ಸಾಮರ್ಥ್ಯ ವೃದ್ಧಿ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಒಂದುಗೂಡಿಸುವಿಕೆ, ಮುಂದುವರಿದ ಮತ್ತು ಬೆಳೆಯುತ್ತಿರುವ ದೇಶಗಳ ಬದ್ಧತೆಗಳು ಮತ್ತು ಜಾಗತಿಕ, ಪ್ರಾದೇಶಿಕ, ರಾಷ್ಟ್ರೀಯ,ಉಪರಾಷ್ಟ್ರೀಯ ಮತ್ತು ಸ್ಥಳೀಯ ಹಂತಗಳ ಅಗತ್ಯತೆ, ಉತ್ತಮ ಅಂತಾರಾಷ್ಟ್ರೀಯ ಸಹಕಾರ ಮತ್ತು ಸರಕಾರದ ವಿವಿಧ ಹಂತಗಳ ಪಾಲುದಾರಿಕೆ, ಖಾಸಗಿ ವಲಯ, ನಾಗರಿಕ ಸಮಾಜ, ಸಮಾನತೆ, ತಾರತಮ್ಯರಹಿತ, ಮಾನವ ಹಕ್ಕುಗಳು ಮತ್ತು ಒಗ್ಗೂಡುವಿಕೆಯ ಬಗ್ಗೆ ಗೌರವದ ತತ್ವಗಳ ವಿಶ್ವಸಂಸ್ಥೆಯ ವ್ಯವಸ್ಥೆಯೂ ಒಳಗೊಂಡಿದೆ. ವಿಶೇಷವಾಗಿ ಇದು ಅತ್ಯಂತ ಬಡವರು ಮತ್ತು ಸಂಕಷ್ಟದಲ್ಲಿರುವವರಿಗೆ ಸಹಾಯಕ.

127. ನಾವು 2030ರ ಸಮರ್ಥ ಅಭಿವೃದ್ಧಿ ಮತ್ತು ಅಡ್ಡಿಸ್ ಅಡಬಾ ಕ್ರಿಯಾನೀತಿಯ ಜಾರಿ ಕುರಿತಂತೆ ವಿವಿಧ ದಾರಿಗಳ ಬಗ್ಗೆ ನಮ್ಮ ಬದ್ಧತೆಯನ್ನು ಮರುದೃಢೀಕರಿಸುತ್ತೇವೆ.

128. ನಾವು ಸದಸ್ಯ ರಾಜ್ಯಗಳು, ಸ್ಥಳೀಯ ಪ್ರಾಧಿಕಾರಗಳು, ಮುಖ್ಯ ಗುಂಪುಗಳು ಮತ್ತು ಇತರೆ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳು ಹಾಗೂ ತಜ್ಞರ ಚಲನಶೀಲತೆಯೊಂದಿಗೆ ಸಹಭಾಗಿತ್ವದಲ್ಲಿ ಸಮರ್ಥನೀಯ ಅಭಿವೃದ್ಧಿ ಗುರಿಗಳ ಹೊಸ ನಗರ ಅಜೆಂಡಾ ಮತ್ತು ನಗರ ಆಯಾಮದ ಅನುಷ್ಠಾನಕ್ಕಾಗಿ ಸಾಕ್ಷ್ಯ-ಆಧಾರಿತ ಮತ್ತು ಪ್ರಾಯೋಗಿಕ ಸಲಹೆಯನ್ನು ಉತ್ಪಾದಿಸಲು ಯುಎನ್-ವಾಸಸ್ಥಾನ, ಇತರೆ ವಿಶ್ವಸಂಸ್ಥೆಯ ಕಾರ್ಯಕ್ರಮಗಳು ಮತ್ತು ಏಜೆನ್ಸಿಗಳು ಮತ್ತು ಇತರೆ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳನ್ನು ಪ್ರೋತ್ಸಾಹಿಸುತ್ತೇವೆ. ನಾವು ಪ್ರಾದೇಶಿಕ ಮತ್ತು ವಿಷಯಾಧಾರಿತ ಸಭೆಗಳನ್ನು ಒಳಗೊಂಡು ಇದರಪೂರ್ವಭಾವಿ ಪ್ರಕ್ರಿಯೆಯಿಂದ ಕಲಿತ ವಾಸಸ್ಥಾನ 3 ಸಮ್ಮೇಳನ ಮತ್ತು ಪಾಠಗಳ ಪರಂಪರೆಯನ್ನು ಹೆಚ್ಚಿಸುತ್ತೇವೆ. ಈ ಪ್ರಸಂಗದಲ್ಲಿ, ಇತರೆ ವಿಷಯಗಳ ನಡುವೆ, ಈ ಮೌಲ್ಯಯುತ ಕೊಡುಗೆಗಳು ವಿಶ್ವ ನಗರ ಪ್ರಚಾರ, ವಾಸಸ್ಥಾನ 3ಕ್ಕೆ ಸಾಮಾನ್ಯ ಸಭೆ ಪಾಲುದಾರರು ಮತ್ತು ಜಾಗತಿಕ ಭೂ ಪರಿಕರ ನೆಟ್ವರ್ಕ್ ಅನ್ನು ಟಿಪ್ಪಣಿ ಮಾಡಿಕೊಳ್ಳುತ್ತೇವೆ.

129. ನಾವು ಇದರ ಪ್ರಮಾಣಕ ಜ್ಞಾನವನ್ನು ಅಭಿವೃದ್ಧಿಪಡಿಸಲು ಇದರ ಕೆಲಸ ಮುಂದುವರಿಸಲು ಯುಎನ್-ವಾಸಸ್ಥಾನವನ್ನು ಕೇಳಿಕೊಳ್ಳುತ್ತೇವೆ ಮತ್ತು ಸಮರ್ಥನೀಯ ನಗರ ಅಭಿವೃದ್ಧಿಯನ್ನು ವಿನ್ಯಾಸಗೊಳಿಸುವಲ್ಲಿ, ಯೋಜಿಸುವಲ್ಲಿ ಮತ್ತು ನಿರ್ವಹಣೆ ಮಾಡುವ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳಿಗೆ ಸಾಮರ್ಥ್ಯ ಅಭಿವೃದ್ಧಿ ಮತ್ತು ಪರಿಕರಗಳನ್ನು ಒದಗಿಸುತ್ತೇವೆ.

130. ನಾವು ಸಮುಚಿತವಾದಂತೆ, ಚಾಲ್ತಿಯಲ್ಲಿರುವ ನಗರ ನೀತಿಗಳು ಮತ್ತು ಕಾರ್ಯತಂತ್ರಗಳಿಂದ ಮಾರ್ಗದರ್ಶಿಸಲ್ಪಟ್ಟ ಸಮರ್ಥನೀಯ ನಗರ ಅಭಿವೃದ್ಧಿಯು ಎಲ್ಲಾ



Tel Aviv, Israel - Boris-B ©

ಹಂತದಲ್ಲಿಯೂ ಪರಿಸರವನ್ನು ಸಕ್ರಿಯಗೊಳಿಸುವ ಮೂಲಕ ಬೆಂಬಲಿಸಲ್ಪಡುವ ಸಮಗ್ರ ಹಣಕಾಸು ಚೌಕಟ್ಟಿನಿಂದ ಪ್ರಯೋಜನ ಪಡೆಯಬಹುದು ಎಂಬುದನ್ನು ಗುರುತಿಸಿದ್ದೇವೆ. ನಾವು ಅನುಷ್ಠಾನದ ಎಲ್ಲಾ ಹಣಕಾಸು ಮೂಲಗಳು ಲಭ್ಯವಿರುವಲ್ಲಿ ಸುಸಂಬದ್ಧ ನೀತಿಯ ಚೌಕಟ್ಟುಗಳು ಮತ್ತು ಆರ್ಥಿಕ ವಿಕೇಂದ್ರೀಕರಣ ಪ್ರಕ್ರಿಯೆಗಳನ್ನು ಖಾತರಿಪಡಿಸುವ ಮತ್ತು ಎಲ್ಲಾ ಹಂತದಲ್ಲಿಯೂ ಅಭಿವೃದ್ಧಿಗೊಂಡ ಸಮರ್ಪಕ ಸಾಮರ್ಥ್ಯಗಳ ಪ್ರಾಮುಖ್ಯತೆಯನ್ನು ಮಾನ್ಯ ಮಾಡುತ್ತೇವೆ.

131. ನಾವು ಹಣಕಾಸು ನಗರೀಕರಣಕ್ಕೆ ಪ್ರಸಂಗ-ಸೂಕ್ಷ್ಮ ಪ್ರವೇಶಗಳನ್ನು ಬೆಂಬಲಿಸುತ್ತೇವೆ ಮತ್ತು ಸಮರ್ಥನೀಯ ನಗರ ಅಭಿವೃದ್ಧಿಯನ್ನು ಸಾಧಿಸಲು ಅವಶ್ಯಕವಾದ ನಿರ್ದಿಷ್ಟ ಸಲಕರಣೆಗಳು ಮತ್ತು ಯಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ಮೂಲಕ ಸರ್ಕಾರದ ಎಲ್ಲಾ ಮಟ್ಟಗಳಲ್ಲಿ ಹಣಕಾಸು ನಿರ್ವಹಣಾ ಸಾಮರ್ಥ್ಯಗಳನ್ನು ವರ್ಧಿಸುತ್ತೇವೆ, ಪ್ರತಿಯೊಂದು ದೇಶವೂ ತನ್ನ ಸ್ವಂತ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಪ್ರಾಥಮಿಕ ಜವಾಬ್ದಾರಿಯನ್ನು ಹೊಂದಿದೆ.

132. ನಾವು ನಗರೀಕರಣದ ಪ್ರಯೋಜನಗಳನ್ನು ಸೆರೆಹಿಡಿಯುವುದು, ಹಾಗೂ ಹೊಸ ನಗರ ಅಜೆಂಡಾದ ಅನುಷ್ಠಾನವನ್ನು ಒಳಗೊಂಡು ಸಮರ್ಥನೀಯ ನಗರ ಅಭಿವೃದ್ಧಿಯ ನಮ್ಮ ಸಾಮಾನ್ಯ ಬೆಂಬತ್ತುವಿಕೆಗೆ ಕೇಂದ್ರವಾಗಿರುವ, ರಾಷ್ಟ್ರೀಯ ಮಾಲೀಕತ್ವದ ತತ್ವದಿಂದ ದೇಶೀಯ ಸಂಪನ್ಮೂಲಗಳು, ಪುಷ್ಟಿಕೊಡುವ ಚಲನಶೀಲತೆ ಮತ್ತು ಪರಿಣಾಮಕಾರಿ ಬಳಕೆ ಮತ್ತು ನಗರ ಅಭಿವೃದ್ಧಿಗಾಗಿ ಹಣಕಾಸು ಪರಿಸ್ಥಿತಿಗಳನ್ನು ಹೆಚ್ಚಿಸುವುದಕ್ಕಾಗಿ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಗಳ ಗರಿಷ್ಠತೆ ಪರಿಣಾಮ ಮತ್ತು ಅದನ್ನು ಗುರುತಿಸುವ ಹೆಚ್ಚುವರಿ ಮೂಲಗಳಿಗೆ ಮುಕ್ತ ಪ್ರವೇಶಾವಕಾಶವನ್ನು ಸಜ್ಜುಗೊಳಿಸುತ್ತೇವೆ.

133. ನಾವು ಖಾಸಗಿ ಉದ್ಯಮ ಚಟುವಟಿಕೆ, ಹೂಡಿಕೆ ಮತ್ತು ನವೀನತೆಯು ಉತ್ಪಾದಕತೆ, ಅಂತರ್ವೇಶನ ಬೆಳವಣಿಗೆಯು ಉದ್ಯೋಗ ಸೃಷ್ಟಿಯ ಮುಖ್ಯ ಡ್ರೈವರ್ಗಳಾಗಿವೆ ಮತ್ತು ಸ್ಥಿರ ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯೊಂದಿಗೆ ನಿರ್ದಿಷ್ಟವಾಗಿ ವಿದೇಶಿ ನೇರ ಹೂಡಿಕೆ, ಖಾಸಗಿ ಹೂಡಿಕೆಗಳು ಅಭಿವೃದ್ಧಿ ಪ್ರಯತ್ನಗಳ ಅವಶ್ಯಕ ಅಂಶಗಳಾಗಿವೆ ಎಂಬುದನ್ನು ಮಾನ್ಯ ಮಾಡಿ, ನಗರ ಪ್ರದೇಶಗಳಲ್ಲಿ ಸಮರ್ಥನೀಯ ಅಭಿವೃದ್ಧಿ ಸವಾಲುಗಳನ್ನು ಪರಿಹರಿಸಲು ಅವರ ಕ್ರಿಯಾಶೀಲತೆ ಮತ್ತು ನಾವಿನ್ಯತೆಯನ್ನು ಅನ್ವಯಿಸಲು ಉದ್ದಿಮೆಗೆ ಕರೆನೀಡುತ್ತೇವೆ.

134. ನಾವು ಅವರ ಸಂಭಾವ್ಯ ಆದಾಯ ಮೂಲವನ್ನು ನೋಂದಾಯಿಸಲು ಮತ್ತು ವಿಸ್ತರಿಸಲು ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳನ್ನು ಸಕ್ರಿಯಗೊಳಿಸುವ ಸಮುಚಿತ ನೀತಿಗಳು ಮತ್ತು ಸಾಮರ್ಥ್ಯವನ್ನು ಬೆಂಬಲಿಸುತ್ತೇವೆ, ಉದಾಹರಣೆಗೆ, ಬಹುಉದ್ದೇಶಿತ ಕ್ಯಾಡಸ್ಟ್ರೆಸ್, ಸ್ಥಳೀಯ ತೆರಿಗೆಗಳು, ಶುಲ್ಕಗಳು ಮತ್ತು ಸೇವಾ ಶುಲ್ಕಗಳು, ರಾಷ್ಟ್ರೀಯ ನೀತಿಗಳೊಂದಿಗೆ

ಸಾಲಿನಲ್ಲಿ, ಮಹಿಳೆಯರು ಮತ್ತು ಹುಡುಗಿಯರು, ಮಕ್ಕಳು ಮತ್ತು ಯುವಜನತೆ, ವೃದ್ಧರು, ಅಂಗವಿಕಲರು, ದಿವಾಳಿಯಾದ ಜನರು ಮತ್ತು ಸ್ಥಳೀಯ ಸಮುದಾಯಗಳು ಮತ್ತು ಬಡಜನರ ಮನೆಗಳಿಗೆ ಅನುಚಿತವಾಗಿ ಧಕ್ಕೆಯಾಗುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳುತ್ತೇವೆ.

135. ನಾವು ಅವರಿಗೆ ಸಮರ್ಪಕ, ಸಕಾಲಿಕ ಮತ್ತು ಊಹಿಸಬಹುದಾದ ಸಂಪನ್ಮೂಲಗಳನ್ನು ಒದಗಿಸಲು ಮತ್ತು ಆದಾಯವನ್ನು ಹೆಚ್ಚಿಸುವ ಅವರ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ವೆಚ್ಚಗಳನ್ನು ನಿರ್ವಹಣೆ ಮಾಡಲು, ಸಮುಚಿತವಾದಂತೆ, ನಂತರದ ಅಗತ್ಯತೆಗಳು, ಆದ್ಯತೆಗಳು, ಕಾರ್ಯಗಳು, ಆದೇಶಗಳು ಮತ್ತು ನೆರವೇರಿಕೆ-ಆಧಾರಿತ ಪ್ರೋತ್ಸಾಹಧನಗಳ ಅಧಾರದ ಮೇಲೆ ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳಿಗೆ ರಾಷ್ಟ್ರೀಯ ಸರ್ಕಾರಗಳಿಂದ ಹಣಕಾಸು ವರ್ಗಾವಣೆಗಾಗಿ ಸ್ವಸ್ಥ ಮತ್ತು ಪಾರದರ್ಶಕ ವ್ಯವಸ್ಥೆಗಳನ್ನು ಹೆಚ್ಚಿಸುತ್ತೇವೆ.

136. ನಾವು, ಆರ್ಥಿಕ ಸಂಪನ್ಮೂಲಗಳ ಲಂಬ ಮತ್ತು ಸಮತಲ ಹಂಚಿಕೆ ಮಾದರಿಗಳ ಬೆಳವಣಿಗೆಗಳನ್ನು ಬೆಂಬಲಿಸುತ್ತೇವೆ. ಇದು ಉಪರಾಷ್ಟ್ರೀಯ ಪ್ರದೇಶಗಳಲ್ಲಿ ಅಸಮಾನತೆಯನ್ನು ಕಡಿಮೆ ಮಾಡಲು, ನಗರ ಕೇಂದ್ರಗಳು ಮತ್ತು, ನಗರ ಮತ್ತು ಗ್ರಾಮೀಣ ಭಾಗಗಳ ಮಧ್ಯೆ ಮತ್ತು ಸಮಗ್ರ, ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಈ ನಿಟ್ಟಿನಲ್ಲಿ, ನಾವು ಖರ್ಚು ಮತ್ತು ಸಂಪನ್ಮೂಲಗಳ ಹಂಚಿಕೆ ಕುರಿತಾದ ಅಂಕಿಅಂಶಗಳಲ್ಲಿ ಪಾರದರ್ಶಕತೆ, ಸಮಾನತೆಯೆಡೆಗೆ ಪ್ರಗತಿಯ ಮೌಲ್ಯಮಾಪನ ಮಾಡಲು ಮತ್ತು ಸ್ಥಳೀಯ ಒಗ್ಗಟ್ಟಿಗೆ ಪ್ರಾಮುಖ್ಯತೆಗೆ ಒತ್ತು ನೀಡುತ್ತೇವೆ.

137. ನಾವು ಭೂಮಿ ಮತ್ತು ಆಸ್ತಿ ಮೌಲ್ಯದಲ್ಲಾದ ಏರಿಕೆಯನ್ನು ಪಡೆಯಲು ಮತ್ತು ಹಂಚಿಕೊಳ್ಳಲು ಇರುವ ಅತ್ಯುತ್ತಮ ಅಭ್ಯಾಸಗಳನ್ನು ಉತ್ತೇಜಿಸುತ್ತೇವೆ. ಇದು ನಗರಾಭಿವೃದ್ಧಿಯ ಪರಿಣಾಮವಾಗಿ, ಮೂಲಸೌಕರ್ಯ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಹೂಡಿಕೆಯಿಂದ ಹುಟ್ಟಿಕೊಳ್ಳುವ ಮೌಲ್ಯ. ಆರ್ಥಿಕ ನೀತಿಗಳಿಗೆ ಸಂಬಂದಪಟ್ಟ ಲಾಭದಂತಹ ಅಳತೆಗಳನ್ನು ಸೂಕ್ತವಾಗಿ ನಿರ್ವಹಿಸಬಹುದು. ಇದು ಖಾಸಗಿಯವರ ಏಕಸ್ವಾಮ್ಯತೆ, ಭೂಮಿ ಮತ್ತು ರಿಯಲ್ ಎಸ್ಟೇಟ್ ಕುರಿತ ಕಲ್ಪನೆಗಳನ್ನು ಹೋಗಲಾಡಿಸುತ್ತದೆ. ಭೂ ಮಾರುಕಟ್ಟೆ ನಿಯಂತ್ರಣ ಸೇರಿದಂತೆ ಆರ್ಥಿಕ ವ್ಯವಸ್ಥೆ ಮತ್ತು ನಗರ ಯೋಜನೆ, ನಗರ ನಿರ್ವಹಣಾ ಸಾಧನಗಳ ನಡುವಿನ ಸಂಬಂಧವನ್ನು ನಾವು ಗಟ್ಟಿಗೊಳಿಸುತ್ತೇವೆ. ನಾವು ಭೂ-ಆಧಾರಿತ ಹಣಕಾಸು ಸೃಷ್ಟಿಸಲು ಮಾಡುವ ಪ್ರಯತ್ನಗಳು, ಅಸಮರ್ಥ ಭೂಮಿಯ ಹೊಂದುವಿಕೆ ಮತ್ತು ಬಳಕೆಗೆ ಕಾರಣವಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳುತ್ತೇವೆ.

138. ನಾವು, ಉಪರಾಷ್ಟ್ರ ಮತ್ತು ಸ್ಥಳೀಯ ಆಡಳಿತಗಳು ಪಾರದರ್ಶಕತೆ ಮತ್ತು ಜವಾಬ್ದಾರಿಯುತ, ಅಗತ್ಯತೆಯ ಅಂದಾಜಿಗೆ ಖರ್ಚು ನಿಯಂತ್ರಣ ವಿಧಾನಗಳ ಜಾರಿಗೆ

ಪಡುತ್ತಿರುವ ಶ್ರಮವನ್ನು ಬೆಂಬಲಿಸುತ್ತೇವೆ. ಸ್ಥಳೀಯ ಹೂಡಿಕೆ ಮತ್ತು ಯೋಜನೆಗಳ ಪ್ರಭಾವ, ಶಾಸಕಾಂಗದ ನಿಯಂತ್ರಣ, ಜನರ ಭಾಗವಹಿಸುವಿಕೆ, ಟೆಂಡರ್ ಪ್ರಕ್ರಿಯೆ, ಗಳಿಸುವ ವಿಧಾನ ಮತ್ತು ಸಮರ್ಥ ಬಜೆಟ್ ಜಾರಿಯೂ ಸೇರಿದೆ. ಒಗ್ಗಟ್ಟು, ರಾಷ್ಟ್ರೀಯ ನೀತಿಗಳಿಗೆ ಸರಿಯಾಗಿ ಜವಾಬ್ದಾರಿ, ಪರಿಣಾಮಕಾರಿ ನಿರ್ವಹಣೆ ಮತ್ತು ಕೈಗೆಟುಕುವ ದರದಲ್ಲಿ ಸಾರ್ವಜನಿಕ ಆಸ್ತಿ ಮತ್ತು ಭೂಮಿಯಂತಹ ಭ್ರಷ್ಟಾಚಾರ ತಡೆ ಕ್ರಮಗಳನ್ನು ನಾವು ಬೆಂಬಲಿಸುತ್ತೇವೆ.

139. ನಾವು, ಸಮರ್ಥ ಸಾಲ ನಿರ್ವಹಣೆಯ ಆಧಾರದ ಮೇಲೆ, ಆಧಾಯ ಮತ್ತು ಸಾಮರ್ಥ್ಯಗಳ ಬೆಂಬಲದೊಂದಿಗೆ, ಸಮರ್ಥ ರಾಷ್ಟ್ರೀಯ ಮತ್ತು ಪಾಲಿಕೆ ಸಾಲ ಪಡೆಯುವಿಕೆಗೆ ಸರಿಯಾದ ಸಮಯದಲ್ಲಿ ಸ್ಥಳೀಯ ಜೊತೆಗೆ ಮಾರುಕಟ್ಟೆಗಳ ಸಾಲ ಮರುಪಾವತಿಸುವ ಸಾಮರ್ಥ್ಯದ ಮೇಲೆ ದೃಢ, ನ್ಯಾಯಯುತ ಮತ್ತು ನಿಯಂತ್ರಣ ಚೌಕಟ್ಟುಗಳ ರಚನೆಗೆ ಬೆಂಬಲಿಸುತ್ತೇವೆ. ನಗರದಲ್ಲಿ ಹಣಹೂಡಲು ಸೂಕ್ತ ಆರ್ಥಿಕ ಮಧ್ಯವರ್ತಿಗಳು ಅಥವಾ ಸಂಸ್ಥೆ, ಪ್ರಾದೇಶಿಕ, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಅಭಿವೃದ್ಧಿ ನಿಧಿಗಳು ಮತ್ತು ಬ್ಯಾಂಕ್ ಗಳು, ಜೊತೆಗೆ ಒಗ್ಗಟ್ಟಾದ ಆರ್ಥಿಕತೆಯ ವಿಧಾನ. ಇದು ಸಾರ್ವಜನಿಕ, ಖಾಸಗಿ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಆರ್ಥಿಕತೆಗೆ ವೇಗ ತರುತ್ತವೆ. ಬಹುಪಕ್ಷೀಯ ಹೂಡಿಕೆ ಖಚಿತತೆ ಸಂಸ್ಥೆಯ ಮೂಲಕ ಅಪಾಯವನ್ನು ಕಡಿಮೆಗೊಳಿಸುವ ವಿಧಾನವನ್ನು ಅನುಸರಿಸಲಾಗುತ್ತಿದೆ. ನೋಟಿನ ಅಪಾಯವನ್ನು ನಿರ್ವಹಿಸುವ ಸಮಯದಲ್ಲೇ, ಅಸಲಿನ ಖರ್ಚನ್ನೇ ಕಡಿಮೆಗೊಳಿಸುವ ಮತ್ತು ಖಾಸಗಿ ಕ್ಷೇತ್ರವನ್ನು ಉತ್ತೇಜಿಸುವ ಮತ್ತು ಅಪಾಯವನ್ನು ಹಸ್ತಾಂತರಿಸುವ ವಿಧಾನವನ್ನು ಗಳಿಸಿಕೊಳ್ಳುವುದೂ ಸೇರಿದಂತೆ, ಸಮರ್ಥ ನಗರ ಅಭಿವೃದ್ಧಿಯಲ್ಲಿ ಮನೆಯವರು ಭಾಗವಹಿಸುವಂತೆ ಮತ್ತು ಹೊಂದಿಕೊಳ್ಳುವ ಪ್ರಯತ್ನ ಹೆಚ್ಚಿಸುವುದು,

140. ನಾವು, ಸೂಕ್ತವಾದ ಮತ್ತು ಕೈಗೆಟುಕುವ ಮನೆ ಸಾಲದ ಉತ್ಪನ್ನಗಳ ಅಭಿವೃದ್ಧಿಯನ್ನು ಬೆಂಬಲಿಸುತ್ತೇವೆ ಮತ್ತು ಭಿನ್ನ ವ್ಯಾಪ್ತಿಯ ಬಹುಪಕ್ಷೀಯ ಆರ್ಥಿಕ ಸಂಸ್ಥೆಗಳ ಭಾಗವಹಿಸುವಿಕೆಯನ್ನು, ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕ್ ಗಳು ಮತ್ತು ಆರ್ಥಿಕ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು, ಖಾಸಗಿ ವಲಯದ ಸಾಲ ಕೊಡುವವರು ಮತ್ತು ಹೂಡಿಕೆದಾರರು, ಸಹಕಾರಿಗಳು, ಹಣಕೊಡುವವರು ಮತ್ತು ಕಿರು ಆರ್ಥಿಕ ಬ್ಯಾಂಕ್ ಗಳು ಕಡಿಮೆ ದರದಲ್ಲಿ ಯಾವುದೇ ವಿಧದಲ್ಲಿ ಹಣ ಹೂಡುವುದನ್ನು ಪ್ರೋತ್ಸಾಹಿಸುತ್ತೇವೆ.

141. ಸಾರ್ವಜನಿಕ ದತ್ತಿಗಳು, ಇತರೆ ಸಾರ್ವಜನಿಕ ಸಂಸ್ಥೆಗಳು ಹಾಗೂ ಖಾಸಗಿ ವಲಯಗಳ ಕೊಡುಗೆಗಳನ್ನು ಆಧರಿಸಿ ನಗರ ಹಾಗೂ ಪ್ರಾದೇಶಿಕ ಸೌರಿಗೆ ಮೂಲಸೌಕರ್ಯ ನಿರ್ಮಾಣ ಹಾಗೂ ರಾಷ್ಟ್ರಮಟ್ಟದಲ್ಲಿ ಸೇವಾ ನಿಧಿಗಳನ್ನು ಪಡೆಯುವ ಆಯ್ಕೆಗಳನ್ನು ಯೋಜಿಸುತ್ತೇವೆ.

142. ಅಂತಾರಾಷ್ಟ್ರೀಯ ಬಹುಮುಖಿ ಹಣಕಾಸು ಸಂಸ್ಥೆಗಳು ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕ್ಗಳು, ಹಣಕಾಸು ಸಂಸ್ಥೆಗಳು ಹಾಗೂ ಸಹಕಾರ ಏಜೆನ್ಸಿಗಳನ್ನು ಆಹ್ವಾನಿಸಿ ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಹೊಸ ನಗರಾಭಿವೃದ್ಧಿ ಯೋಜನೆಗಳಿಗೆ ಆರ್ಥಿಕ ನೆರವು ಕೋರುತ್ತೇವೆ.

143. ಹಸಿರು ಹವಾಮಾನ ನಿಧಿ, ಜಾಗತಿಕ ಪರಿಸರ ವ್ಯವಸ್ಥೆ, ಹೊಂದಾಣಿಕೆ ನಿಧಿ ಮತ್ತು ಹವಾಮಾನ ಹೂಡಿಕೆ ನಿಧಿಗಳು ಸೇರಿದಂತೆ ವಿವಿಧ ಬಹುಪಕ್ಷೀಯ ನಿಧಿಗಳ ಹರಿವನ್ನು ನಾವು ಬೆಂಬಲಿಸುತ್ತೇವೆ. ಈ ಮೂಲಕ ಹವಾಮಾನ ಬದಲಾವಣೆಗಳಿಗೆ ಹೊಂದಿಕೊಳ್ಳುವ ಹಾಗೂ ಬದಲಾವಣೆಗಳನ್ನು ತಗ್ಗಿಸುವ ನೀತಿಗಳು, ಕಾರ್ಯಕ್ರಮಗಳಿಗೆ ಸಂಪನ್ಮೂಲ ಗಳಿಸುತ್ತೇವೆ. ಹವಾಮಾನ ಹಣಕಾಸು ವ್ಯವಸ್ಥೆ ಪರಿಹಾರ ಹಾಗೂ ಸರ್ಕಾರದ ಎಲ್ಲ ಮಟ್ಟದ ಸಾಲ ಮತ್ತು ಹಣಕಾಸು ನಿರ್ವಹಣೆಗೆ ರಾಷ್ಟ್ರೀಯ ಚೌಕಟ್ಟು ನಿರ್ಮಿಸಲು ನಾವು ಉಪರಾಷ್ಟ್ರೀಯ ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ಜಂಟಿಯಾಗಿ ಕಾರ್ಯ ನಿರ್ವಹಿಸುತ್ತೇವೆ.

144. ನಾವು ನಗರ ಮತ್ತು ಮೆಟ್ರೊಪಾಲಿಟನ್ ನಿರ್ಮಾಣ, ಕಟ್ಟಡಗಳು ಮತ್ತು ಇತರೆ ನಗರ ಸ್ವತ್ತುಗಳಲ್ಲಿ ಹಾಗೂ ಅವರ ಮನೆ ಮತ್ತು ಆರ್ಥಿಕ ಅಗತ್ಯತೆಗಳನ್ನು ಸುಭದ್ರವನ್ನಾಗಿಸಲು ಸ್ಥಳೀಯ ಜನತೆಗೆ ಹೂಡಿಕೆಗಳಿಗೆ ಸಂಬಂಧಿಸಿದಂತೆ ವಿಮೆ ಮತ್ತು ಮರುವಿಮಾ ಸಂಸ್ಥೆಗಳು ಹಾಗೂ ಇತರೆ ಸುಸಂಬದ್ಧ ಕಾರ್ಯಭಾಗಿಗಳೊಂದಿಗೆ ಸಹಭಾಗಿತ್ವ ಹೊಂದುವುದನ್ನು ಒಳಗೊಂಡು, ನಗರಗಳಲ್ಲಿ ಮತ್ತು ಮಾನವ ವಸಾಹತುವಿನಲ್ಲಿ ಹವಾಮಾನ ಮತ್ತು ದುರಂತ ಅಪಾಯಗಳಿಗೆ ಕಾರ್ಯಸಾಧ್ಯ ಪರಿಹಾರಗಳನ್ನು ಅನ್ವೇಷಿಸುತ್ತೇವೆ ಮತ್ತು ಅಭಿವೃದ್ಧಿಪಡಿಸುತ್ತೇವೆ.

145. ನಾವು ಅಧಿಕೃತ ಅಭಿವೃದ್ಧಿ ಸಹಾಯ, ಬೇರೆ ವಿಷಯಗಳಲ್ಲಿ, ಸಮರ್ಥನೀಯ ನಗರ ಮತ್ತು ಪ್ರಾದೇಶಿಕ ಅಭಿವೃದ್ಧಿಗಾಗಿ, ಎಲ್ಲಾ ಲಭ್ಯವಿರುವ ಮೂಲಗಳು, ಸಾರ್ವಜನಿಕ ಮತ್ತು ಖಾಸಗಿಗಳಿಂದ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣವನ್ನು ವೇಗವರ್ಧನೆಗೊಳಿಸಲು ಅಂತರರಾಷ್ಟ್ರೀಯ ಸಾರ್ವಜನಿಕ ಹಣಕಾಸಿನ ಬಳಕೆಯನ್ನು ಬೆಂಬಲಿಸುತ್ತೇವೆ. ಇದು ದೇಶೀಯವಾಗಿ ಸಾರ್ವಜನಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸಲು ದೇಶಗಳ ಪ್ರಯತ್ನಕ್ಕೆ ಪೂರಕವಾಗಿರುವಲ್ಲಿ ಅಂತರರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮುಖ್ಯ ಪಾತ್ರ ವಹಿಸುತ್ತದೆ ಎಂಬ ವಾಸ್ತವಾಂಶದ ಗುರುತಿಸುವಿಕೆಯಲ್ಲಿ ಸಂಭಾವ್ಯ ಹೂಡಿಕೆದಾರರಿಗಾಗಿ ಅಪಾಯಗಳನ್ನು ಕಡಿಮೆಗೊಳಿಸುವುದನ್ನು ಒಳಗೊಂಡಿರಬಹುದು.

146. ನಾವು, ಅವಕಾಶಗಳನ್ನು ಉತ್ತರ-ದಕ್ಷಿಣ, ದಕ್ಷಿಣ-ದಕ್ಷಿಣ ಮತ್ತು ತ್ರಿಕೋನಾಕೃತಿಯ ಪ್ರದೇಶಗಳಿಗೆ ವಿಸ್ತರಿಸುತ್ತೇವೆ ಮತ್ತು ಅಂತಾರಾಷ್ಟ್ರೀಯ ಸಹಕಾರ, ಜೊತೆಗೆ ಉಪರಾಷ್ಟ್ರೀಯ, ವಿಕೇಂದ್ರೀಕರಣ ಮತ್ತು ನಗರದಿಂದ- ನಗರಕ್ಕೆ ಸಹಕಾರ, ಸೂಕ್ತವಾದಲ್ಲಿ, ಸಮರ್ಥ

ನಗರಾಭಿವೃದ್ಧಿಗೆ ವಿಸ್ತರಿಸುತ್ತೇವೆ. ನಗರೀಕರಣದ ವಿವಿಧ ಪರಿಹಾರಗಳು, ಬೆಳವಣಿಗೆಯ ಸಾಮರ್ಥ್ಯ ಮತ್ತು ಸಂಬಂಧಗಳನ್ನು ಪೋಷಿಸುವುದು ಮತ್ತು ಎಲ್ಲಾ ಹಂತಗಳಲ್ಲೂ ಪರಸ್ಪರ ಅರಿತುಕೊಳ್ಳುವುದು ಮತ್ತು ಎಲ್ಲಾ ಪ್ರಸ್ತುತ ನಟರಿಂದ ಕೊಡುಗೆ ನೀಡುವುದು ಇಲ್ಲಿ ಪ್ರಮುಖ ಕೊಡುಗೆ ನೀಡುತ್ತವೆ.

147. ನಾವು, ಸಾಮರ್ಥ್ಯ ವೃದ್ಧಿಯನ್ನು ಬಹುಮುಖ ಮುಂದಡಿಯಿಡುವಿಕೆಯಾಗಿ ಉತ್ತೇಜಿಸುತ್ತೇವೆ. ಇದು ಅನೇಕ ಪಾಲುದಾರರ ಸಾಮರ್ಥ್ಯ ಮತ್ತು ಆಡಳಿತದ ಎಲ್ಲಾ ಹಂತಗಳಲ್ಲೂ ಸಂಸ್ಥೆಗಳು ಮತ್ತು ವ್ಯಕ್ತಿಯನ್ನು, ಸಮಾಜವನ್ನು ಮತ್ತು ಸಾಂಸ್ಥಿಕ ಸಾಮರ್ಥ್ಯವನ್ನು ರೂಪಿಸಲು, ಜಾರಿಗೊಳಿಸಲು, ಹೆಚ್ಚಿಸಲು, ನಿರ್ವಹಿಸಲು ಮತ್ತು ಸಮರ್ಥ ನಗರಾಭಿವೃದ್ಧಿಗೆ ಸಾರ್ವಜನಿಕ ನೀತಿಗಳ ಮೌಲ್ಯಮಾಪನವೂ ಸೇರಿದೆ.

148. ನಾವು ಸಮುಚಿತವಾದಂತೆ, ಮಹಿಳೆಯರು ಮತ್ತು ಹುಡುಗಿಯರು, ಮಕ್ಕಳು ಮತ್ತು ಯುವಜನತೆ, ವೃದ್ಧರು ಮತ್ತು ಅಂಗವಿಕಲರು, ದಿವಾಳಿಯಾದ ಜನರು ಮತ್ತು ಸ್ಥಳೀಯ ಸಮುದಾಯಗಳು ದೌರ್ಬಲ್ಯದ ಪರಿಸ್ಥಿತಿಯಲ್ಲಿರುವ ಜನರು ಹಾಗೂ ನಗರ ಮತ್ತು ಪ್ರಾದೇಶಿಕ ಅಭಿವೃದ್ಧಿಯ ಬಗ್ಗೆ ನಿರ್ಧಾರ ಮಾಡುವಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅವರನ್ನು ಸಕ್ರಿಯವಾಗಿಸಿ, ಸಂಘ ಮತ್ತು ಸಾಂಸ್ಥಿಕ ಆಡಳಿತವನ್ನು ರೂಪಿಸುವಲ್ಲಿ ನಾಗರೀಕ ಸಮಾಜ, ಅಕಾಡೆಮಿಯಾ ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳ ಸಾಮರ್ಥ್ಯವನ್ನು ಬಲಪಡಿಸುವಿಕೆಯನ್ನು ಹೆಚ್ಚಿಸುತ್ತೇವೆ.

149. ನಾವು ಸ್ಥಳೀಯ ಸರ್ಕಾರಿ ಸಂಘಟನೆಗಳು ಉತ್ತೇಜಕರೆಂದು ಮತ್ತು ಸಾಮರ್ಥ್ಯ ಅಭಿವೃದ್ಧಿಯನ್ನು ಒದಗಿಸುವವರೆಂದು, ಗುರುತಿಸುವಿಕೆ ಮತ್ತು ಬಲಪಡಿಸುವುದುದನ್ನು ಬೆಂಬಲಿಸುತ್ತೇವೆ. ಸರಿಯಾದ ರೀತಿಯಲ್ಲಿ ರಾಷ್ಟ್ರೀಯ ಸಮಾಲೋಚನೆಗಳಲ್ಲಿ ಭಾಗಿಯಾಗುವಿಕೆ, ನಗರ ನೀತಿಗಳು ಮತ್ತು ಅಭಿವೃದ್ಧಿಯ ಆದ್ಯತೆಗಳು, ಮತ್ತು ಉಪ ರಾಷ್ಟ್ರೀಯ ಮತ್ತು ಸ್ಥಳೀಯ ಆಡಳಿತದ ಜೊತೆ ಸಹಕಾರ, ನಾಗರಿಕ ಸಮಾಜದ ಜೊತೆ, ಖಾಸಗಿ ವಲಯ, ವೃತ್ತಿಪರರು, ಶಿಕ್ಷಣ ಸಂಸ್ಥೆಗಳು ಮತ್ತು ಸಂಶೋಧನಾ ಸಂಸ್ಥೆಗಳು, ಮತ್ತು ಅವುಗಳ ಜಾಲಗಳಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ವಿಸ್ತರಿಸುವುದು.

150. ನಾವು ಅಡ್ಡಿಸ್ ಅಬಬಾ ಆಕ್ಷನ್ ಅಜೆಂಡಾ ಮತ್ತು ಸಮರ್ಥನೀಯ ಅಭಿವೃದ್ಧಿಗಾಗಿ 2030 ರಲ್ಲಿ ಪ್ರಾರಂಭಿಸಿದ ಅಜೆಂಡಾ ಅಡಿಯಲ್ಲಿ ಸ್ಥಾಪಿತವಾದ ತಂತ್ರಜ್ಞಾನ ಸರಾಗ ತಾಂತ್ರಿಕತೆಯ ಪ್ರಕ್ರಿಯೆಗಳೊಂದಿಗೆ ಪೂರ್ಣ ಸುಸಂಬದ್ಧತೆ, ಸಹಕಾರ ಮತ್ತು ಸಹಕ್ರಿಯೆಯಲ್ಲಿ, ಸಮರ್ಥನೀಯ ನಗರ ಅಭಿವೃದ್ಧಿ ಪ್ರಯೋಜನಕ್ಕೆ ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತೆಯ ಮೇಲೆ ವರ್ಧಿತ ಸಹಕಾರ ಮತ್ತು ಜ್ಞಾನ ವಿನಿಮಯಕ್ಕಾಗಿ ಅಗತ್ಯತೆಯನ್ನು ಒತ್ತಿಹೇಳುತ್ತೇವೆ.

151. ನಾವು ಹಣಕಾಸು ಯೋಜನೆ ಮತ್ತು ನಿರ್ವಹಣೆಯಲ್ಲಿ ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳಿಗೆ ಸಹಾಯ ಮಾಡಲು ಸಾಮರ್ಥ್ಯ ಅಭಿವೃದ್ಧಿ ಪ್ರೋಗ್ರಾಮ್ಗಳನ್ನು ಹೆಚ್ಚಿಸುತ್ತೇವೆ, ಪರಿಸರ ಸೂಕ್ಷ್ಮತೆ ಮತ್ತು ಭ್ರಷ್ಟಾಚಾರ ವಿರೋಧಿ ಕ್ರಮಗಳನ್ನು ಒಳಗೊಂಡು, ಎಲ್ಲಾ ಹಂತಗಳಲ್ಲಿ ಸಾಂಸ್ಥಿಕ ಸಹಕಾರದಲ್ಲಿ ಆಸರೆಯಾಗಿದ್ದೇವೆ, ಪಾರದರ್ಶಕ ಮತ್ತು ಸ್ವತಂತ್ರ ಮೇಲುಸ್ತುವಾರಿಯನ್ನು ಅಪ್ಪಿಕೊಂಡಿದ್ದೇವೆ, ಇತರವುಗಳ ಪೈಕಿ ಅಕೌಂಟಿಂಗ್, ಸಂಗ್ರಹಣೆ, ವರದಿ ಮಾಡುವುದು, ಲೆಕ್ಕಪರಿಶೋಧನೆ ಮತ್ತು ನಿಗಾವಣೆ ಪ್ರಕ್ರಿಯೆಗಳು, ಮತ್ತು ಉಪರಾಷ್ಟ್ರೀಯ ಮತ್ತು ರಾಷ್ಟ್ರೀಯ ನೆರವೇರಿಕೆ ಮತ್ತು ಅನುವರ್ತನೆಯನ್ನು ಪುನರ್ವೀಕ್ಷಿಸಲು, ವಯಸ್ಸು ಮತ್ತು ಲಿಂಗ-ಪರಿವರ್ತಕ ಬಜೆಟಿಂಗ್ ಮತು ಅಕೌಂಟಿಂಗ್ ಪ್ರಕ್ರಿಯೆಗಳು ಮತ್ತು ದಾಖಲೆಗಳ ಸುಧಾರಣೆ ಮತ್ತು ಡಿಜಿಟಲೈಜೇಶನ್ಗೆ ನಿರ್ದಿಷ್ಟ ಗಮನದೊಂದಿಗೆ, ಫಲಿತಾಂಶ ಆಧಾರಿತ ಪ್ರವೇಶಗಳಿಗಾಗಿ ಮತ್ತು ಮಧ್ಯಮದಿಂದ ದೀರ್ಘಾವಧಿ ಆಡಳಿತಾತ್ಮಕ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತೇವೆ.

152. ನಾವು ಕಾನೂನು ಭೂ-ಆಧಾರಿತ ಆದಾಯ ಮತ್ತು ಹಣಕಾಸು ಪರಿಕರಗಳು ಬಳಕೆಯ ಮೇಲೆ ಮತ್ತು ಭೂಮೌಲ್ಯ ಹೆಚ್ಚಳದ ಪರಿಮಾಣ, ಸೆರೆಹಿಡಿಯುವುದು ಮತ್ತು ವಿತರಣೆಯನ್ನು ಒಳಗೊಂಡು, ಮೌಲ್ಯ ಸೆರೆಹಿಡಿಯುವ ಕಾನೂನು ಮತ್ತು ಆರ್ಥಿಕ ತಳಪಾಯದ ಮೇಲೆ ಕೇಂದ್ರೀಕರಿಸಿ, ನೀತಿ ಸೃಷ್ಟಿಸುವವರು ಮತ್ತು ಸ್ಥಳೀಯ ಸಾರ್ವಜನಿಕ ಅಧಿಕಾರಿಗಳಿಗಾಗಿ ರಿಯಲ್ ಎಸ್ಟೇಟ್ ಮಾರುಕಟ್ಟೆಯ ಕಾರ್ಯನಿರ್ವಹಿಸುವಿಕೆಯ ಬಳಕೆಯ ಮೇಲೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚಿಸುತ್ತೇವೆ.

153. ನಾವು ಸಮುಚಿತವಾದಂತೆ ನಗರ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಬಹು-ಸ್ಟೇಕ್ಹೋಲ್ಡರ್ ಪಾಲುದಾರಿಕೆಯ ವ್ಯವಸ್ಥಿತ ಬಳಕೆಯನ್ನು ಹೆಚ್ಚಿಸುತ್ತೇವೆ, ಸ್ಪಷ್ಟ ಮತ್ತು ಪಾರದರ್ಶಕ ನೀತಿಗಳು, ಹಣಕಾಸು ಮತ್ತು ಆಡಳಿತಾತ್ಮಕ ಚೌಕಟ್ಟುಗಳು ಮತ್ತು ಕಾರ್ಯವಿಧಿಗಳನ್ನು ಸ್ಥಾಪಿಸುತ್ತಿದ್ದೇವೆ, ಹಾಗೂ ಬಹು-ಸ್ಟೇಕ್ಹೋಲ್ಡರ್ ಪಾಲುದಾರಿಕೆಗಳಿಗಾಗಿ ಮಾರ್ಗಸೂತ್ರಗಳನ್ನು ಯೋಜಿಸುತ್ತಿದ್ದೇವೆ.

154. ನಾವು ಉಪರಾಷ್ಟ್ರೀಯ ನಿಕಾಯಗಳು, ಸ್ಥಳೀಯ ಸರ್ಕಾರಗಳು ಮತ್ತು ಇತರೆ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳ ನಡುವೆ ಸಹ-ಉತ್ಪಾದನಾ ನೆಟ್ವರ್ಕ್ ಹೆಚ್ಚಿಸುವ ಮೂಲಕ ಇವುಗಳನ್ನು ಒಳಗೊಂಡು, ಉತ್ತಮ ಪದ್ಧತಿಗಳು ಮತ್ತು ನವೀನ ಪರಿಹಾರೋಪಾಯಗಳನ್ನು ಒತ್ತಿಹೇಳುತ್ತಾ, ಹೊಸ ನಗರ ಅಜೆಂಡಾದ ಅನುಷ್ಠಾನವನ್ನು ಉಪಕ್ರಮಗೊಳಿಸಲು ಮತ್ತು ವರ್ಧಿಸಲು ಯೋಜಿಸುವ ಸ್ವಯಂಪ್ರೇರಿತ ಸಹಭಾಗಿ ಉಪಕ್ರಮಗಳು, ಪಾಲುದಾರಿಕೆಗಳು ಮತ್ತು ಒಕ್ಕೂಟಗಳ ಪ್ರಧಾನ ಕೊಡುಗೆಯನ್ನು ಗುರುತಿಸುತ್ತೇವೆ.



Pretoria, South Africa

155. ನಾವು ನಗರ ಮತ್ತು ಪ್ರಾದೇಶಿಕ ಅಭಿವೃದ್ಧಿ ನಿರ್ಧಾರ ಮಾಡುವಲ್ಲಿ ಅವರ ಪರಿಣಾಮಕಾರಿ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು, ಆಡಳಿತ ಪ್ರಕ್ರಿಯೆಗಳನ್ನು ಆಕೃತಿಗೊಳಿಸಲು, ಸಂವಾದದಲ್ಲಿ ತೊಡಗಲು, ಮತ್ತು ಮಾನವ ಹಕ್ಕುಗಳು ಮತ್ತು ತಾರತಮ್ಯ-ವಿರೋಧಿ ಮಾನವ ಹಕ್ಕುಗಳನ್ನು ರಕ್ಷಿಸಲು, ಮಹಿಳೆಯರು ಮತ್ತು ಹುಡುಗಿಯರು, ಮಕ್ಕಳು ಮತ್ತು ಯುವಜನರು, ವೃದ್ಧರು ಮತ್ತು ಅಂಗವಿಕಲರು, ದಿವಾಳಿಯಾದ ಜನರು ಮತ್ತು ಸ್ಥಳೀಯ ಸಮುದಾಯಗಳು ಹಾಗೂ ದೌರ್ಬಲ್ಯ ಪರಿಸ್ಥಿತಿಗಳಲ್ಲಿ ಜನರ ಕೌಶಲ್ಯಗಳು ಮತ್ತು ಸಾಮರ್ಥ್ಯಗಳನ್ನು ಸಬಲೀಕರಿಸಲು ಮತ್ತು ಬಲಪಡಿಸಲು ಸಾಮರ್ಥ್ಯ ಅಭಿವೃದ್ಧಿ ಉಪಕ್ರಮಗಳನ್ನು ಹೆಚ್ಚಿಸುತ್ತೇವೆ.

156. ನಾವು ನಾಗರೀಕ ಜವಾಬ್ದಾರಿ, ವ್ಯಾಪಕ ಭಾಗವಹಿಸುವಿಕೆ ಮತ್ತು ಜವಾಬ್ದಾರಿಯುತ ಆಡಳಿತದ ಪೋಷಣೆ ಹಾಗೂ ದಕ್ಷತೆಯನ್ನು ಹೆಚ್ಚಿಸಲು ಅವರನ್ನು ಸಮರ್ಥರನ್ನಾಗಿಸಲು ಮಹಿಳೆಯರು ಮತ್ತು ಹುಡುಗಿಯರು, ಮಕ್ಕಳು ಮತ್ತು ಯುವಜನರು, ಅಂಗವಿಕಲರು, ವೃದ್ಧರು ಮತ್ತು ದೌರ್ಬಲ್ಯ ಪರಿಸ್ಥಿತಿಗಳಲ್ಲಿರುವ ಜನರನ್ನು ಒಳಗೊಂಡು ಸಾರ್ವಜನಿಕರಿಗೆ ಪ್ರವೇಶಸಾಧ್ಯವಾದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು ಮಾಡುವುದಕ್ಕಾಗಿ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಳಗೊಂಡು ತಂತ್ರಜ್ಞಾನ ನಾವಿನ್ಯತೆಗಳಿಗೆ ತಟ್ಟುವ ಮೂಲಕ, ರಾಷ್ಟ್ರೀಯ ಮಾಹಿತಿ ಮತ್ತು ಸಂವಹನಗಳ ತಂತ್ರಜ್ಞಾನ ನೀತಿಗಳು ಮತ್ತು ಇ-ಸರ್ಕಾರ ಕೌಶಲ್ಯಗಳು ಹಾಗೂ ನಾಗರೀಕ ಕೇಂದ್ರಿತ ಅಂಕೀಯ ಆಡಳಿತ ಪರಿಕರಗಳ ಅಭಿವೃದ್ಧಿಯನ್ನು ಹೆಚ್ಚಿಸುತ್ತೇವೆ. ಭೌಗೋಳಿಕ ಮಾಹಿತಿ ವ್ಯವಸ್ಥೆಗಳನ್ನು ಒಳಗೊಂಡು, ಅಂಕೀಯ ವೇದಿಕೆಗಳು ಮತ್ತು ಪರಿಕರಗಳ ಬಳಕೆಯು ದೀರ್ಘಾವಧಿ ಸಮಗ್ರ ನಗರ ಮತ್ತು ಪ್ರಾದೇಶಿಕ ಯೋಜನೆ ಮತ್ತು ವಿನ್ಯಾಸ, ಭೂ ಆಡಳಿತ ಮತ್ತು ನಿರ್ವಹಣೆ ಮತ್ತು ನಗರ ಹಾಗೂ ಮೆಟ್ರೊಪಾಲಿಟನ್ ಸೇವೆಗಳ ಪ್ರವೇಶವನ್ನು ಹೆಚ್ಚಿಸಲು ಪ್ರೋತ್ಸಾಹ ನೀಡಲಾಗುತ್ತದೆ.

157. ನಾವು ಸಾಮಾಜಿಕ ತಂತ್ರಜ್ಞಾನೀಯ, ಅಂಕೀಯ ಮತ್ತು ಸ್ವರೂಪ-ಆಧಾರಿತ ನಾವಿನ್ಯತೆಯ ಮೇಲೆ ಕೇಂದ್ರೀಕರಣವನ್ನು ಒಳಗೊಂಡು ವಿಜ್ಞಾನ, ಸಂಶೋಧನೆ ಮತ್ತು ನಾವಿನ್ಯತೆಯನ್ನು ಬೆಂಬಲಿಸುತ್ತೇವೆ, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಪ್ರಸಂಗಗಳಲ್ಲಿ ಸುಸಂಬದ್ಧವಾದ ಆದಾಯ, ಲಿಂಗ, ಪ್ರಾಯ, ಜಾತಿ, ಸಂಸ್ಕೃತಿ, ವಲಸೆ, ಅಂತಸ್ತು, ಊನತೆ, ಭೌಗೋಳಿಕ ಸ್ಥಳ ಮತ್ತು ಲಕ್ಷಣಗಳಿಂದ ಭೌಗೋಳಿಕ ಆಧಾರಿತ ಸಮುದಾಯ-ಸಂಗ್ರಹಿತ, ಅಧಿಕ-ಗುಣಮಟ್ಟದ, ಸಕಾಲಿಕ ಮತ್ತು ನಂಬಲರ್ಹ ದತ್ತಾಂಶ ವಿಭಜನೆಯ ಸಂಗ್ರಹಣೆ, ವಿಶ್ಲೇಷಣೆ, ಸ್ಟಾಂಡರ್ಡೀಕರಣ ಮತ್ತು ಬೇರ್ಪಡಿಸುವಿಕೆಯನ್ನು ಒಳಗೊಂಡು ಮಾಹಿತಿ, ಜ್ಞಾನ ಮತ್ತು ಪ್ರಾವಿಣ್ಯತೆಯ ಹಂಚುವಿಕೆ ಮತ್ತು ವಿನಿಮಯಕ್ಕಾಗಿ ನಗರ ಮತ್ತು ಪ್ರಾದೇಶಿಕ ಯೋಜನೆ ಮತ್ತು ನೀತಿ ಸೂತ್ರೀಕರಣ ಮತ್ತು ಸಾಂಸ್ಥಿಕೀಕೃತ ಯಾಂತ್ರಿಕತೆಗಳಲ್ಲಿ ವಿಜ್ಞಾನ-ನೀತಿ ಅಂತರಕ್ರಿಯೆಯನ್ನು ಹೆಚ್ಚಿಸುತ್ತೇವೆ.

158. ನಾವು ಸಮರ್ಥನೀಯ ನಗರ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯತಂತ್ರಗಳಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಣಾಮಕಾರಿಯಾಗಿ ನಿಗಾವಹಿಸಲು ಮತ್ತು ನಿರ್ಧಾರ ಮಾಡುವ ಮತ್ತು ಸಮುಚಿತ ಪುನರ್ವೀಕ್ಷಣೆಗೆ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದಲ್ಲಿ ದತ್ತಾಂಶ ಮತ್ತು ಸಾಂಖ್ಯಿಕ ಸಾಮರ್ಥ್ಯಗಳನ್ನು ಬಲಪಡಿಸುತ್ತೇವೆ. ಅನುಸರಣೆಯ ಅನುಷ್ಠಾನಕ್ಕಾಗಿ ಮತ್ತು ಹೊಸ ನಗರ ಅಜೆಂಡಾ ಪುನರ್ವೀಕ್ಷಣೆಗಾಗಿ ದತ್ತಾಂಶ ಸಂಗ್ರಹಣೆಯು ಅಧಿಕೃ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ದತ್ತಾಂಶ ಮೂಲಗಳು, ಮತ್ತು ಸಮುಚಿತವಾದಂತೆ ಇತರೆ ಮೂಲಗಳ ಆಧಾರದ ಮೇಲೆ ಪ್ರಾಥಮಿಕವಾಗಿರಬೇಕು ಮತ್ತು ಸಂಬಂಧಿಸಿದ ಖಾಸಗಿ ಹಕ್ಕುಗಳು ಮತ್ತು ಎಲ್ಲಾ ಮಾನವ ಹಕ್ಕು ಬಾಧ್ಯತೆಗಳು ಮತ್ತು ಬದ್ಧತೆಗಳ ಉದ್ದೇಶದೊಂದಿಗೆ ಪಾರದರ್ಶಕ ಮತ್ತು ನಿರಂತರವಾಗಿರಬೇಕು. ನಗರಗಳು ಮತ್ತು ಮಾನವ ವಸಾಹತುಗಳ ಜಾಗತಿಕ ಆಧಾರಿತ ವ್ಯಾಖ್ಯಾನಗಳ ಬಗೆಗೆ ಪ್ರಗತಿಯು ಈ ಕೆಲಸವನ್ನು ಬೆಂಬಲಿಸಬಹುದು.

159. ನಾವು ದತ್ತಾಂಶ ಸಂಗ್ರಹಣೆ, ಮ್ಯಾಪಿಂಗ್, ವಿಶ್ಲೇಷಣೆ ಮತ್ತು ಪ್ರಸರಣದಲ್ಲಿ ಮತ್ತು ಸಾಕ್ಷ್ಯ - ಆಧಾರಿತ ಆಡಳಿತವನ್ನು ಹೆಚ್ಚಿಸುವಲ್ಲಿ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳ ಪಾತ್ರ ಮತ್ತು ವರ್ಧಿಸುವಿಕೆಯ ಪಾತ್ರವನ್ನು ಬೆಂಬಲಿಸುತ್ತೇವೆ, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಪ್ರಸಂಗಗಳಲ್ಲಿ ಸುಸಂಬದ್ಧವಾದ ಆದಾಯ, ಲಿಂಗ, ಪ್ರಾಯ, ಜಾತಿ, ಸಂಸ್ಕೃತಿ, ವಲಸೆ ಸ್ಥಿತಿ, ಊನತೆ, ಭೌಗೋಳಿಕ ಸ್ಥಳ ಮತ್ತು ಇತರೆ ಲಕ್ಷಣಗಳ ಮೂಲಕ ವಿಭಜಿಸಲ್ಪಟ್ಟ, ಸೆನ್ಸಸ್, ಮನೆಯ ಸಮೀಕ್ಷೆಗಳು, ಜನಸಂಖ್ಯೆ ರಿಜಿಸ್ಟರ್‌ಗಳು, ಸಮುದಾಯ- ಆಧಾರಿತ ನಿಗಾವಣೆ ಪ್ರಕ್ರಿಯೆಗಳು ಮತ್ತು ಇತರೆ ಸುಸಂಬದ್ಧ ಮೂಲಗಳ ಮೂಲಕ ಜಾಗತಿಕವಾಗಿ ಹೋಲಿಸಬಹುದಾದ ಮತ್ತು ಸ್ಥಳೀಯವಾಗಿ ಉತ್ಪಾದಿಸಲಾಗುವ ದತ್ತಾಂಶಗಳೆರಡನ್ನೂ ಬಳಸಿ ಹಂಚಿಕೊಂಡ ಜ್ಞಾನವನ್ನು ಹೆಚ್ಚಿಸುತ್ತೇವೆ.

160. ನಾವು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು, ಮತ್ತು ಪ್ರಾದೇಶಿಕ ಮಾಹಿತಿ ನಿರ್ವಹಣೆಯ ಮೂಲಕ ಸಹಾಯಕವಾದ ಇ-ಗವರ್ನೆನ್ಸ್ ಪವೇಶಗಳ ಮೂಲಕ ಪರಿಣಾಮಕಾರಿ ನಗರ ಯೋಜನೆ ಮತ್ತು ನಿರ್ವಹಣೆ, ದಕ್ಷತೆ ಮತ್ತು ಪಾರದರ್ಶಕತೆಯನ್ನು ವರ್ಧಿಸಲು ನಾನ್-ಸ್ಟೇಟ್ ಆಕ್ಟರ್‌ಗಳು ಮತ್ತು ಜನರನ್ನು ಒಳಗೊಂಡು, ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು ಮತ್ತು ಸುಸಂಬದ್ಧ ಸ್ಟೇಕ್‌ಹೋಲ್ಡರ್‌ಗಳಲ್ಲಿ ಜ್ಞಾನವನ್ನು ವರ್ಗಾಯಿಸಲು ಮತ್ತು ಹಂಚಿಕೊಳ್ಳಲು ಲಭ್ಯವಿರುವ ತಂತ್ರಜ್ಞಾನೀಯ ಮತ್ತು ಸಾಮಾಜಿಕ ಪರಿಕರಗಳನ್ನು ಬಳಸಿ ಮುಕ್ತ, ಬಳಕೆದಾರ-ಸ್ನೇಹಿ ಮತ್ತು ಭಾಗವಹಿಸುವಿಕೆ ದತ್ತಾಂಶ ವೇದಿಕೆಗಳ ಸೃಷ್ಟಿ, ಭಡ್ತಿ ಮತ್ತು ವರ್ಧಿಸುವಿಕೆಯನ್ನು ಪೋಷಿಸುತ್ತೇವೆ.


Quito, Ecuador - Ecuadorpostales ©

## ಅನುಸರಣೆ ಮತ್ತು ಪುನರ್ವೀಕ್ಷಣೆ

161. ನಾವು ಪ್ರಗತಿಯ ಜಾಡು ಇರಿಸಲು, ಪರಿಣಾಮವನ್ನು ಮೌಲ್ಯಾಂಕನ ಮಾಡಲು ಮತ್ತು ಅಜೆಂಡಾದ ಪರಿಣಾಮಕಾರಿತ್ವ ಮತ್ತು ಸಕಾಲಿಕ ಅನುಷ್ಠಾನ, ನಮ್ಮ ನಾಗರೀಕರಿಗೆ ಹೊಣೆಗಾರಿಕೆ ಮತ್ತು ಅಂತರ್ವೇಶನ ರೀತಿಯಲ್ಲಿ ಪಾರದರ್ಶಕತೆಗಾಗಿ ರಾಷ್ಟ್ರೀಯ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಸುಸಂಬದ್ಧತೆಯನ್ನು ಖಚಿತಪಡಿಸಿಕೊಂಡು ಹೊಸ ನಗರ ಅಜೆಂಡಾದ ಸಕಾಲಿಕ ಅನುಸರಣೆ ಮತ್ತು ಪುನರ್ವೀಕ್ಷಣೆಯನ್ನು ಮಾಡುತ್ತೇವೆ.

162. ನಾವು ಸ್ವಯಂಪ್ರೇರಿತ, ದೇಶ-ನೇತೃತ್ವದಲ್ಲಿ, ಮುಕ್ತ, ಅಂತರ್ವೇಶನ, ಬಹುಮಟ್ಟದ, ಭಾಗವಹಿಸುವಿಕೆಯ ಮತ್ತು ಪಾರದರ್ಶಕ ಅನುಸರಣೆಯನ್ನು ಮತ್ತು ಹೊಸ ನಗರ ಅಜೆಂಡಾದ ಪುನರ್ವೀಕ್ಷಣೆಯನ್ನು ಪ್ರೋತ್ಸಾಹಿಸುತ್ತೇವೆ. ಪ್ರಕ್ರಿಯೆಯು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸರ್ಕಾರದ ಸ್ಥಳೀಯ ಮಟ್ಟದ ಕೊಡುಗೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ ಮತ್ತು ವಿಶ್ವಸಂಸ್ಥೆ ವ್ಯವಸ್ಥೆ, ಪ್ರಾದೇಶಿಕ ಮತ್ತು ಉಪಪ್ರಾದೇಶಿಕ ಸಂಸ್ಥೆಗಳು, ಮುಖ್ಯ ಗುಂಪುಗಳು ಮತ್ತು ಸುಸಂಬದ್ಧ ಸ್ಟೇಕ್ಹೋಲ್ಡರ್ಗಳಿಂದ ಕೊಡುಗೆಯ ಮೂಲಕ ಪೂರಕಗೊಳಿಸಬೇಕು ಹಾಗೂ ಎಲ್ಲಾ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳಲ್ಲಿ ಪಾಲುದಾರಿಕೆಯನ್ನು ಸೃಷ್ಟಿಸುವ ಮತ್ತು ಬಲವರ್ಧಿಸುವ ಗುರಿಯನ್ನು ಹೊಂದಿರುವ ನಿರಂತರ ಪ್ರಕ್ರಿಯೆಯಾಗಿರಬೇಕು ಮತ್ತು ನಗರ ಪರಿಹಾರಗಳು ಮತ್ತು ಪರಸ್ಪರ ಕಲಿಯುವಿಕೆಯ ವಿನಿಮಯಗಳನ್ನು ಪೋಷಿಸಬೇಕು.

163. ನಾವು ಇದರ ಅನುಸರಣೆಯಲ್ಲಿ ಸಕ್ರಿಯ ಪಾಲುದಾರರಾಗಿ ಸ್ಥಳೀಯ ಸರ್ಕಾರಗಳ ಪ್ರಾಮುಖ್ಯತೆಯನ್ನು ಮಾನ್ಯ ಮಾಡುತ್ತೇವೆ ಮತ್ತು ಎಲ್ಲಾ ಹಂತದಲ್ಲಿಯೂ ಹೊಸ ನಗರ ಅಜೆಂಡಾವನ್ನು ಪುನರ್ವೀಕ್ಷಿಸುತ್ತೇವೆ ಮತ್ತು ಸ್ಥಳೀಯ ಮಟ್ಟದಲ್ಲಿ ಸುಸಂಬದ್ಧ ಸಂಘಗಳು ಮತ್ತು ಸಮುಚಿತ ವೇದಿಕೆಗಳನ್ನು ಒಳಗೊಂಡು, ಎಲ್ಲಾ ಹಂತದಲ್ಲಿಯೂ ಸಮುಚಿತ ಅನುಷ್ಠಾನಗೊಳಿಸಬಹುದಾದ ಸಂಘಗಳು ಮತ್ತು ಸಮುಚಿತವಾದಂತೆ, ಜಂಟಿಯಾಗಿ ರಾಷ್ಟ್ರೀಯ ಮತ್ತು ಉಪರಾಷ್ಟ್ರೀಯ ಸರ್ಕಾರಗಳನ್ನು ಅಭಿವೃದ್ಧಿಪಡಿಸುತ್ತೇವೆ. ನಾವು ಸಮುಚಿತವಾದಲ್ಲಿ, ಇದಕ್ಕೆ ಸಂಬಂಧಿಸಿದಂತೆ ಕೊಡುಗೆ ನೀಡುವ ತಮ್ಮ ಸಾಮರ್ಥ್ಯವನ್ನು ಬಲಪಡಿಸಲು ಪರಿಗಣಿಸುತ್ತೇವೆ.

164. ನಾವು ಅನುಸರಣೆಯನ್ನು ಒತ್ತಿಹೇಳುತ್ತೇವೆ ಮತ್ತು ಹೊಸ ನಗರ ಅಜೆಂಡಾದ ಪುನರ್ವೀಕ್ಷಣೆಯು ಅನುಸರಿಸಬೇಕಾದುದರೊಂದಿಗೆ ಮತ್ತು ಅವುಗಳ ಅನುಷ್ಠಾನಗೊಳಿಸುವಲ್ಲಿ ಸಹಕಾರ ಮತ್ತು ಸುಸಂಬದ್ಧತೆಯನ್ನು ಖಚಿತಪಡಿಸಿಕೊಳ್ಳಲು ಸಮರ್ಥನೀಯ ಅಭಿವೃದ್ಧಿಗಾಗಿ 2030 ಅಜೆಂಡಾದ ಪುನರ್ವೀಕ್ಷಣೆಗೆ ಪರಿಣಾಮಕಾರಿ ಕೊಂಡಿಗಳನ್ನು ಹೊಂದಿರಬೇಕು.

165. ನಾವು ಸಮರ್ಥನೀಯ ನಗರೀಕರಣ, ಇತರೆ ವಿಷಯಗಳ ನಡುವೆ, ಸಮರ್ಥನೀಯ ಅಭಿವೃದ್ಧಿ, ದುರಂತ ಅಪಾಯ ಇಳಿಕೆ ಮತ್ತು ಹವಾಮಾನ ಬದಲಾವಣೆಯ ನಡುವಿನ ಕೊಂಡಿಗಳನ್ನು ಗುರುತಿಸಿ, ಬೇರೆ ವಿಶ್ವಸಂಸ್ಥೆ ವ್ಯವಸ್ಥೆಯ ನಿಕಾಯಗಳೊಂದಿಗೆ ಸಹಭಾಗಿತ್ವದಲ್ಲಿ, ಸಮರ್ಥನೀಯ ನಗರೀಕರಣ ಮತ್ತು ಮಾನವ ವಸಾಹತುಗಳಿಗಾಗಿ ಕೇಂದ್ರಬಿಂದುವಾಗಿ, ಇದರ ಆದೇಶದೊಳಗೆ ಯುಎನ್-ವಾಸಸ್ಥಾನದ ಪಾತ್ರ ಮತ್ತು ಪ್ರಾವೀಣ್ಯತೆಯನ್ನು ಮರುದೃಢೀಕರಿಸುತ್ತೇವೆ.

166. ನಾವು ಸಭೆಯ ಎಪ್ಪತ್ತೆರಡನೆಯ ಅಧಿವೇಶನದ ಅವಧಿಯಲ್ಲಿ ಸಲ್ಲಿಸಬೇಕಾದ ಮೊದಲ ವರದಿಯೊಂದಿಗೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಹೊಸ ನಗರ ಅಜೆಂಡಾದ ಅನುಷ್ಠಾನದ ಪ್ರಗತಿಯ ಮೇಲೆ ವರದಿ ಮಾಡಲು, ದೇಶಗಳು ಮತ್ತು ಸುಸಂಬದ್ಧ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಸ್ವಯಂಪ್ರೇರಿತ ಪ್ರದಾನಗಳೊಂದಿಗೆ, ಪ್ರಧಾನ ಕಾರ್ಯದರ್ಶಿಯವರನ್ನು ಕೋರಿಕೊಳ್ಳಲು ಸಾಮಾನ್ಯ ಸಭೆಗೆ ಆಹ್ವಾನಿಸುತ್ತೇವೆ.

167. ವರದಿಯು ಹೊಸ ನಗರ ಅಜೆಂಡಾ ಮತ್ತು ಸಮರ್ಥನೀಯ ನಗರೀಕರಣ ಮತ್ತು ಮಾನವ ವಸಾಹತುಗಳಿಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯವಾಗಿ ಒಪ್ಪಿಕೊಂಡ ಗುರಿಗಳು ಮತ್ತು ಉದ್ದೇಶಗಳನ್ನು ಅನುಷ್ಠಾನಗೊಳಿಸುವಲ್ಲಿ ಮಾಡಲಾದ ಪ್ರಗತಿಯ ಗುಣಮಟ್ಟದ ಮತ್ತು ಪ್ರಮಾಣಾನುಗತ ವಿಶ್ಲೇಷಣೆಯನ್ನು ಒದಗಿಸುತ್ತವೆ. ವಿಶ್ಲೇಷಣೆಯು ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು, ಯುಎನ್-ವಾಸಸ್ಥಾನ, ವಿಶ್ವಸಂಸ್ಥೆ ವ್ಯವಸ್ಥೆಯ ಇತರೆ ಸುಸಂಬದ್ಧ ನಿಕಾಯಗಳು, ಹೊಸ ನಗರ ಅಜೆಂಡಾದ ಅನುಷ್ಠಾನದ ನೆರವಿನಲ್ಲಿ ಸುಸಂಬದ್ಧ ಸ್ಟೇಕ್ಹೋಲ್ಡರ್ಗಳು ಮತ್ತು ಯುಎನ್-ವಾಸಸ್ಥಾನ ನಿಯಂತ್ರಣ ಪರಿಷತ್ತಿನ ವರದಿಗಳ ಚಟುವಟಿಕೆಗಳ ಮೇಲೆ ಆಧಾರಿತವಾಗಿರುತ್ತದೆ. ವರದಿಯನ್ನು ಸಾಧ್ಯವಿರುವ ಮಟ್ಟಕ್ಕೆ ಕಾರ್ಯರೂಪಕ್ಕೆ ತರಬೇಕು, ಬಹುಪಕ್ಷೀಯ ಸಂಸ್ಥೆಗಳ ಪ್ರದಾನಗಳು ಮತ್ತು ಸಮುಚಿತವಾಗಿರುವಲ್ಲಿ ಪ್ರಕ್ರಿಯೆಗಳು, ನಾಗರೀಕ ಸಮಾಜ, ಖಾಸಗಿ ವಲಯ ಮತ್ತು ಅಕಾಡಮಿಯ ಮಟ್ಟಕ್ಕೆ ಕಾರ್ಯರೂಪಕ್ಕೆ ತರಬೇಕು. ಅದನ್ನು ಯುಎನ್-ವಾಸಸ್ಥಾನದಿಂದ ಸಂಚಾಲಕತ್ವದ ವಿಶ್ವ ನಗರ ವೇದಿಕೆಯಂತಹ ಅಸ್ತಿತ್ವದಲ್ಲಿರುವ ವೇದಿಕೆಗಳು ಮತ್ತು ಪ್ರಕ್ರಿಯೆಗಳ ಮೇಲೆ ರಚಿಸಬೇಕು. ವರದಿಯು ನಕಲನ್ನು ತಪ್ಪಿಸಬೇಕು ಮತ್ತು ಸ್ಥಳೀಯ, ಉಪರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂದರ್ಭಗಳು ಹಾಗೂ ಕಾನೂನೀಕರಣ, ಸಾಮರ್ಥ್ಯಗಳು, ಅಗತ್ಯತೆಗಳು ಮತ್ತು ಆದ್ಯತೆಗಳಿಗೆ ಪ್ರತಿಸ್ಪಂದಿಸಬೇಕು.

168. ವರದಿ ಸಿದ್ಧಪಡಿಸುವಿಕೆಯು ಅಂತರ್ವೇಶನ ವಿಶ್ವಸಂಸ್ಥೆ ವ್ಯವಸ್ಥೆ-ವಾರು ಸಂಘಟಿತ ಪ್ರಕ್ರಿಯೆಯನ್ನು ಖಚಿತಪಡಿಸಿಕೊಂಡು, ವಿಶ್ವಸಂಸ್ಥೆ ವ್ಯವಸ್ಥೆಯ ಇತರೆ ಸುಸಂಬದ್ಧ ನಿಕಾಯಗಳೊಂದಿಗೆ ಸಹಭಾಗಿತ್ವದಲ್ಲಿ ಯುಎನ್-ವಾಸಸ್ಥಾನದಿಂದ ಸಂಘಟಿಸಲ್ಪಡುತ್ತದೆ.

ವರದಿಯನ್ನು ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲ್[18] ಮೂಲಕ ಸಾಮಾನ್ಯ ಸಭೆಗೆ ಸಲ್ಲಿಸಲಾಗುತ್ತದೆ. ವರದಿಯನ್ನು ಅನುಸರಿಸಲು ಮತ್ತು ಸಮರ್ಥನೀಯ ಅಭಿವೃದ್ಧಿಗಾಗಿ 2030 ಅಜೆಂಡಾದ ಪುನರ್ವೀಕ್ಷಣೆಯೊಂದಿಗೆ ಸುಸಂಬದ್ಧತೆ, ಸಹಕಾರ ಮತ್ತು ಸಹಭಾಗಿತ್ವ ಕೊಂಡಿಗಳನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯೊಂದಿಗೆ, ಸಾಮನ್ಯ ಸಭೆಯ ಆಶ್ರಯದಡಿಯಲ್ಲಿ ಸಂಚಾಲಕತ್ವಗೊಳಿಸಿದ ಸಮರ್ಥನೀಯ ಅಭಿವೃದ್ಧಿಯ ಮೇಲೆ ಉನ್ನತ ಮಟ್ಟದ ರಾಜಕೀಯ ವೇದಿಕೆಗೂ ಸಲ್ಲಿಸಲಾಗುತ್ತದೆ.

169. ನಾವು ವಿಶ್ವ ವಾಸಸ್ಥಾನ ದಿನಾಚರಣೆ ಮತ್ತು ವಿಶ್ವ ನಗರಗಳ ದಿನಾಚರಣೆಯಂತಹ ಅಸ್ಥಿತ್ವದಲ್ಲಿರುವ ಉಪಕ್ರಮಗಳನ್ನು ಬಳಸಿ ಹೊಸ ನಗರ ಅಜೆಂಡಾದ ಅನುಷ್ಠಾನಕ್ಕೆ ಸಂಬಂಧಿಸಿದ ಪಾಲುದಾರಿಕೆ, ಸಮರ್ಥನೆ ಮತ್ತು ಅರಿವನ್ನು ಮೂಡಿಸುವ ಮೂಡಿಸುವ ಮೂಲಕ ಚಲನಶೀಲ ಪ್ರಯತ್ನಗಳ ಬಲಪಡಿಸುವಿಕೆಯನ್ನು ಮುಂದುವರಿಸುತ್ತೇವೆ. ಮತ್ತು ಚಲನಶೀಲತೆಗೆ ಹೊಸ ಉಪಕ್ರಮಗಳ ಸ್ಥಾಪಿಸುವಿಕೆಯನ್ನು ಪರಿಗಣಿಸುತ್ತೇವೆ ನಾಗರೀಕ ಸಮಾಜ, ನಾಗರೀಕರು ಮತ್ತು ಸುಸಂಬದ್ಧ ಸ್ಟೇಕ್ಹೋಲ್ಡರ್ಗಳಿಂದ ನೆರವು ಪಡೆಯುತ್ತೇವೆ. ನಾವು ಸ್ಥಳೀಯ ಮತ್ತು ಪ್ರಾದೇಶಿಕ ಸರ್ಕಾರಗಳ ವಿಶ್ವ ಸಭೆಯಲ್ಲಿ ಪ್ರತಿನಿಧಿಸಿದ ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರ ಸಂಘಗಳ ಪ್ರಾಮುಖ್ಯತೆಯನ್ನು ಟಿಪ್ಪಣಿ ಮಾಡುತ್ತೇವೆ.

170. ನಾವು 16 ಡಿಸೆಂಬರ್ 1976ರ 31/109 ಮತ್ತು 1 ಡಿಸೆಂಬರ್ 1977 32/162 ನಿರ್ಣಯಗಳನ್ನು ಒಳಗೊಂಡು, ಸಾಮಾನ್ಯ ಸಭೆಯ ನಿರ್ಣಯಗಳಾದ 16 ಡಿಸೆಂಬರ್ 1996 ರ 51/177, 21 ಡಿಸೆಂಬರ್ 2001 ರ 56/206, ಸಭೆಯ ಇತರೆ ಸುಸಂಬದ್ಧ ನಿರ್ಣಯಗಳ ಜೊತೆಗೆ 67/216, 68/239 ಮತ್ತು 69/226 ಅನ್ನು ಮರುದೃಢೀಕರಿಸುತ್ತೇವೆ. ನಾವು ಯುಎನ್-ಹ್ಯಾಬಿಟಟ್ನ ನೈರೊಬಿ ಹೆಡ್ಕ್ವಾರ್ಟರ್ಸ್ ಸ್ಥಳದ ಪ್ರಾಮುಖ್ಯತೆಯನ್ನು ಪುನರುಚ್ಚರಿಸುತ್ತೇವೆ.

171. ನಾವು ಇತರೆ ವಿಶ್ವಸಂಸ್ಥೆಗಳ ವ್ಯವಸ್ಥೆಯ ನಿಕಾಯಿಗಳೊಂದಿಗೆ ಸಹಭಾಗಿತ್ವದಲ್ಲಿ, ಹೊಸ ನಗರ ಅಜೆಂಡಾದ ಅನುಷ್ಠಾನ, ಅನುಸರಣೆ ಮತ್ತು ಪುನರ್ವೀಕ್ಷಣೆಯನ್ನು ಒಳಗೊಂಡು, ಸಮರ್ಥನೀಯ ನಗರೀಕರಣ ಮತ್ತು ಮಾನವ ವಸಾಹತುಗಳ ಮೇಲಿನ ಕೇಂದ್ರ ಬಿಂದುಗಳಾಗಿ ವಿಶ್ವಸಂಸ್ಥೆ ವ್ಯವಸ್ಥೆಯೊಳಗೆ ಇದರ ಪಾತ್ರವನ್ನು ನೀಡಲಾಗಿದ್ದು, ಯುಎನ್-ವಾಸಸ್ಥಾನದ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತೇವೆ.

18 ವರದಿಯು ಹ್ಯಾಬಿಟಟ್ ಅಜೆಂಡಾದ ಸಹಕಾರದ ಅನುಷ್ಠಾನದ ಮೇಲೆ ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲ್ಗೆ ಪ್ರಧಾನ ಕಾರ್ಯದರ್ಶಿಯ ವರದಿಯನ್ನು ಮರುಸ್ಥಾನಗೊಳಿಸಲು ಉದ್ದೇಶಿಸಿದೆ. ಇದು ಸುಸಂಬದ್ಧ ಅಜೆಂಡಾ ಐಟಂ ಅಡಿಯಲ್ಲಿನ ತನ್ನ ನಿರ್ಣಯಗಳಲ್ಲಿ ಸಾಮಾನ್ಯ ಸಭೆಯ ಮೂಲಕ ಕೋರಿಕೊಳ್ಳಲಾದ ಪ್ರಧಾನ ಕಾರ್ಯದರ್ಶಿಯ ವರದಿಯ ಭಾಗವಾಗಿರಬೇಕೆಂದು, ಅದಕ್ಕೆ ಹೆಚ್ಚುವರಿಯಾಗಿರಬಾರದೆಂದು ಉದ್ದೇಶಿಸಿದೆ.

172. ಹೊಸ ನಗರ ಅಜೆಂಡಾ ಬೆಳಕಿನಲ್ಲಿ ಮತ್ತು ಯುಎನ್-ವಾಸಸ್ಥಾನದ ಪರಿಣಾಮಕಾರಿತ್ವವನ್ನು ವರ್ಧಿಸುವ ದೃಷ್ಟಿಯೊಂದಿಗೆ, ನಾವು ಒಂದು ಸಾಕ್ಷಿ-ಆಧಾರಿತ ಮತ್ತು ಯುಎನ್-ವಾಸಸ್ಥಾನದ ಸ್ವತಂತ್ರ ಮೌಲ್ಯಾಂಕನವನ್ನು ತನ್ನ ಎಪ್ಪತೊಂದನೆಯ ಅಧಿವೇಶದ ಸಮಯದಲ್ಲಿ ಸಾಮಾನ್ಯ ಸಭೆಗೆ ಸಲ್ಲಿಸಲು ಪ್ರಧಾನ ಕಾರ್ಯದರ್ಶಿಯವರಿಗೆ ಕೇಳಿಕೊಂಡಿದ್ದೇವೆ. ಮೌಲ್ಯಾಂಕನದ ಫಲಿತಾಂಶವು ಯುಎನ್-ವಾಸಸ್ಥಾನದ ಪರಿಣಾಮಕಾರಿತ್ವ, ದಕ್ಷತೆ, ಹೊಣೆಗಾರಿಕೆ ಮತ್ತು ಮೇಲುಸ್ತುವಾರಿಗೆ ಶಿಫಾರಸುಗಳನ್ನು ಒಳಗೊಂಡ ಒಂದು ವರದಿಯಾಗಿರುತ್ತದೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಇದನ್ನು ವಿಶ್ಲೇಷಿಸಬೇಕಾಗಿದೆ.

(ಎ) ಯುಎನ್-ವಾಸಸ್ಥಾನದ ಪ್ರಮಾಣಕ ಮತ್ತು ಕಾರ್ಯಾಚರಣೆಯ ಆದೇಶ

(ಬಿ) ತನ್ನ ನಿಯಂತ್ರಣ ಪರಿಷತ್ತಿನ ಸದಸ್ಯತ್ವದ ಜಾಗತೀಕರಣವನ್ನು ಒಳಗೊಂಡು, ಪರ್ಯಾಯಗಳನ್ನು ಪರಿಗಣಿಸಿ, ಹೆಚ್ಚು ಪರಿಣಾಮಕಾರಿ, ಹೊಣೆಗಾರಿಕೆ ಮತ್ತು ಪಾರದರ್ಶಕ ನಿರ್ಧಾರ ಮಾಡುವುದಕ್ಕಾಗಿ, ಯುಎನ್-ವಾಸಸ್ಥಾನದ ನಿಯಂತ್ರಣ ರಚನೆ;

(ಸಿ) ಪಾಲುದಾರಿಕೆಯ ಸಂಪೂರ್ಣ ಸಂಭಾವ್ಯತೆಯನ್ನು ತಟ್ಟುವುದಕ್ಕಾಗಿ ರಾಷ್ಟ್ರೀಯ, ಉಪರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು ಮತ್ತು ಸುಸಂಬದ್ಧ ಸ್ಟೇಕ್ಹೋಲ್ಡರ್ಗಳೊಂದಿಗೆ ಯುಎನ್-ವಾಸಸ್ಥಾನದ ಕೆಲಸ;

(ಡಿ) ಯುಎನ್-ವಾಸಸ್ಥಾನದ ಹಣಕಾಸು ಸಾಮರ್ಥ್ಯ.

173. ನಾವು ಇದಕ್ಕೆ ಸಂಬಂಧಿಸಿದಂತೆ ಯುಎನ್-ವಾಸಸ್ಥಾನದ ಹೊಸ ನಗರ ಅಜೆಂಡಾ ಮತ್ತು ಸ್ಥಾನಗೊಳಿಸುವಿಕೆಯ ಪರಿಣಾಮಕಾರಿ ಅನುಷ್ಠಾನವನ್ನು ಚರ್ಚಿಸಲು, ಎಪ್ಪತ್ತೊಂದನೆಯ ಅಧಿವೇಶನದ ಸಮಯದಲ್ಲಿ ಸಾಮಾನ್ಯ ಸಭೆಯ ಅಧ್ಯಕ್ಷರ ಸಂಚಾಲಕತ್ವದಲ್ಲಿ, ಸಾಮಾನ್ಯ ಸಭೆಯ ಎರಡು ದಿನದ ಉನ್ನತ ಮಟ್ಟದ ಸಭೆಯನ್ನು ಆಯೋಜಿಸಲು ನಿರ್ಧರಿಸಿದ್ದೇವೆ. ಸಭೆಯಲ್ಲಿ ಇತರೆ ವಿಷಯಗಳ ಜೊತೆಗೆ, ಉತ್ತಮ ಪದ್ಧತಿಗಳು, ಯಶಸ್ವಿ ಕಥೆಗಳು ಮತ್ತು ಕ್ರಮಗಳು ವರದಿಯಲ್ಲಿ ಒಳಗೊಂಡಿರುತ್ತವೆ. ಸಭೆಯಲ್ಲಿ ಪೀಠದ ಸಾರಾಂಶವು ಸುಸಂಬದ್ಧ ಅಜೆಂಡಾ ಐಟಂ ಅಡಿಯಲ್ಲಿ ತನ್ನ ವಾರ್ಷಿಕ ಠರಾವಿನಲ್ಲಿ ತನ್ನ ಕ್ರಮದ ಪರಿಗಣನೆಗಾಗಿ ಎಪ್ಪತ್ತೆರಡನೆಯ ಅಧಿವೇಶನದ ಅವಧಿಯಲ್ಲಿ ಎರಡನೆಯ ಸಭೆಗೆ ಪ್ರದಾನವಾಗಿ ಜಾರಿಗೊಳ್ಳುತ್ತದೆ.

174. ನಾವು ಹೊಸ ನಗರ ಅಜೆಂಡಾದ ಮೇಲೆ ಮೌಲ್ಯಾಂಕನ ಮತ್ತು ಕ್ರೋಢೀಕರಿಸಲು ಒಂದು ನವೀಕೃತ ರಾಜಕೀಯ ಬದ್ಧತೆಯೊಳಗೆ 2036 ರಲ್ಲಿ ಹೌಸಿಂಗ್ ಮತ್ತು ಸಮರ್ಥನೀಯ ನಗರ

ಅಭಿವೃದ್ಧಿಯ (ವಾಸಸ್ಥಾನ 4) ಮೇಲೆ ಮುಂದಿನ ವಿಶ್ವಸಂಸ್ಥೆಯ ಸಮ್ಮೇಳನವನ್ನು ಆಯೋಜಿಸಲು ಪರಿಗಣಿಸುವುದಕ್ಕಾಗಿ ಸಾಮಾನ್ಯ ಸಭೆಯನ್ನು ಪ್ರೋತ್ಸಾಹಿಸುತ್ತೇವೆ.

175. ನಾವು ಇದು ತನ್ನ ಅಳವಡಿಕೆ ಮತ್ತು ಅವುಗಳನ್ನು ಪರಿಗಣಿಸಲು ಮುಂದಿನ ಹಂತಗಳನ್ನು ಗುರುತಿಸಲು ಹೊಸ ನಗರ ಅಜೆಂಡಾದ ಅನುಷ್ಠಾನದಲ್ಲಿ ಮಾಡಿದ ಮತ್ತು ಎದುರಿಸಿದ ಸವಾಲುಗಳ ರಾಶಿಯನ್ನು ತೆಗೆದುಕೊಳ್ಳಲು ಮೇಲ್ಕಂಡ ಪ್ಯಾರಾ 166 ಕ್ಕೆ ಅನುಸಾರವಾಗಿ 2016 ರಲ್ಲಿ ಪ್ರಸ್ತುತಪಡಿಸಬೇಕಾದ ಅವರ ನಾಲ್ಕನೆಯ ವರದಿಯಲ್ಲಿ ಪ್ರಧಾನ ಕಾರ್ಯದರ್ಶಿಯವರನ್ನು ಕೇಳಿಕೊಳ್ಳುತ್ತೇವೆ.

HABITAT III

QUITO 17-20 OCTOBER 2016

United Nations Conference on Housing and Sustainable Urban Development

United Nations

**www.habitat3.org**

#NewUrbanAgenda #Habitat3